ಗೌರಿ ಲಂಕೇಶರ

ಲಂಕೇಶ್

ಮೇ 24, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




ಸಚಿನ್ @ ಸಿಲ್ಲಿ ಪಾಯಿಂಟ್



ವಿಷ್ಣು, ಸೀತಾರಾಮ್‌ಗೂ ಬಂತು

ಸ್ಟೀಕ್ ಸಿಂಡ್ರೋಮ್!



ಕೊಪ್ಪಳ: ಬಸ್ಸು ನುಂಗುವ ಬಕಾಸುರರು!

ಚಿಕ್ಕಮಗಳೂರು : ತಿಂದು ತೇಗಿದ ಧರ್ಮದರ್ಶಿ ನಂಜುಂಡಸ್ವಾಮಿ



ಚಿಲ್ರೆ ಚನ್ನಿಗಪ್ಪ!

ಚಾರ್ವಾಕ

- ಶಿವಸುಂದರ್-

ಮೊನ್ನೆ ಹೈದರಾಬಾದಿನಲ್ಲಿ ಏಷಿಯನ್ ಡೆವೆಲೆಪ್ಮೆಂಟ್ ಬ್ಯಾಂಕ್ (ADB)ನ ವಾರ್ಷಿಕ ಸಭೆ ನಡೆಯಿತು. ಈ ಬ್ಯಾಂಕೇ ಈಗ ನಮ್ಮ ಕರ್ನಾಟಕದ ಹಲವಾರು ಯೋಜನೆಗಳಿಗೆ ಸಾಲ ಕೊಡುತ್ತಿರುವ ಬ್ಯಾಂಕು. ಇದು ಪ್ರಪಂಚಕ್ಕೆಲ್ಲಾ ಸಾಲ ಕೊಟ್ಟು ಸೂಲಕ್ಕೆ ಹಾಕುವ ವಿಶ್ವಬ್ಯಾಂಕಿನ ಮರಿ ಇದ್ದ ಹಾಗೆ. ಆದರೆ ವಿಶ್ವಬ್ಯಾಂಕಿನಲ್ಲಿ ಅಮೆರಿಕದ ಪಾರುಪತ್ಯ ಜಾಸ್ತಿ ಇದ್ದರೆ ಈ ಬ್ಯಾಂಕಿನಲ್ಲಿ ಜಪಾನಿನ ಪಾರುಪತ್ಯವೇ ಜಾಸ್ತಿ. ವಿಶ್ವಬ್ಯಾಂಕ್ ಅನುಸರಿಸುವ ಎಲ್ಲಾ ಕುಟಿಲಗಳನ್ನು ಚಾಚೂ ತಪ್ಪದೆ ಅನುಸರಿಸುವ ಎ.ಡಿ.ಬಿ.,ಅದರ ಜೊತೆಗೆ ತಾನೊಂದು ಪ್ರಜಾತಾಂತ್ರಿಕ ಸಂಸ್ಥೆಯೆಂಬ ಸೋಗನ್ನು ಹಾಕುತ್ತದೆ. ಅದಕ್ಕೇ ತನ್ನ ವಾರ್ಷಿಕ ಸಭೆಗಳನ್ನು ತನ್ನಿಂದ ಸಾಲ ಪಡೆಯುವ ದೇಶಗಳಲ್ಲಿ ನಡೆಸುತ್ತಾ ತನ್ನ ವ್ಯವಹಾರ ತುಂಬಾ ಪಾರದರ್ಶಕವೆಂದು ಕೊಚ್ಚಿಕೊಳ್ಳುತ್ತದೆ.

ಒಂದು ಪ್ರಶ್ನೆ: ಇಂದು ಎ.ಡಿ.ಬಿ.ಯಿಂದ ಅತಿ ಹೆಚ್ಚು ಸಾಲ ಪಡೆಯುತ್ತಿರುವ ದೇಶಗಳಲ್ಲಿ ಭಾರತ ಸಹಾ ಒಂದು. ಅದಕ್ಕೆ ಅದರ ವಾರ್ಷಿಕ ಸಭೆ ಈ ವರ್ಷ ಭಾರತದ ಹೈದರಾಬಾದಿನಲ್ಲಿ ನಡೆಯಿತು. ಕರ್ನಾಟಕ ಸಹಾ ಇದರ ಅತಿ ಹೆಚ್ಚು ಸಾಲಗಾರ ರಾಜ್ಯಗಳಲ್ಲಿ ಒಂದು. ಎ.ಡಿ.ಬಿ.ಯ ಹತ್ತು ಸಹಸ್ರ ಕೋಟಿಗೂ ಹೆಚ್ಚಿನ ಹತ್ತಕ್ಕೂ ಹೆಚ್ಚು ಯೋಜನೆಗಳು ಕರ್ನಾಟಕದಲ್ಲಿ ಜಾರಿಯಲ್ಲಿವೆ. ಅವೆಲ್ಲಾ ಕುಡಿಯುವ ನೀರಿನ ಖಾಸಗೀಕರಣದಂತಹ ಬಡವರ ಮನೆಹಾಳು ಮಾಡಿ ವಿದೇಶಿ ಕಂಪನಿಗಳ ಲಾಭ ಹೆಚ್ಚಿಸುವ ಯೋಜನೆಗಳೇ ಎಂದು ಪ್ರತ್ಯೇಕವಾಗಿಯೇನೂ ಹೇಳಬೇಕಾಗಿಲ್ಲ. ಆದರೆ ಸರ್ಕಾರ ಮತ್ತು ಸರ್ಕಾರಿ ಪಂಡಿತರು ಪ್ರಚಾರ ಮಾಡುವುದೇನೆಂದರೆ ಅವರು ನಮ್ಮ ಯೋಜನೆಗಳಿಗೆ ಸಾಲ ಕೊಟ್ಟು ಸಹಾಯ ಮಾಡುತ್ತಾರೆ ಎಂದು.

ಈಗ ಪ್ರಶ್ನೆಯೇನೆಂದರೆ ಅವರು ಸಾಲ ಕೊಡುತ್ತಾರೆ ನಿಜ. ಆದರೆ ಅದು ಸಹಾಯವೇ? ಸಾಲ ಕೊಟ್ಟ ನಂತರ ತಾವೇ ಶಿಫಾರಸು ಮಾಡುವ ಕಂಪನಿಗಳಿಗೆ ಕಾಂಟ್ರಾಕ್ಟ್ ಕೊಡಬೇಕೆಂದು ಹೇಗೆ ಕಡ್ಡಾಯ ಮಾಡುತ್ತಾರೆಂಬುದನ್ನು ಇದೇ ಅಂಕಣದಲ್ಲಿ ಹೋದ ಬಾರಿ ನೋಡಿದ್ದೇವೆ. ಅದು ಹೋಗಲಿ. ಸಾಲವನ್ನಾದರೂ ಕಡಿಮೆ ಬಡ್ಡಿ ದರದಲ್ಲಿ ಕೊಡುತ್ತಾರೆಯೇ?



ಇಂದು ಅಂತರರಾಷ್ಟ್ರೀಯ ಹಣಕಾಸು ಮಾರುಕಟ್ಟೆಯಲ್ಲಿ ಸಾಲ ಕೊಡುವವರಿಗಿಂತ ಸಾಲ ಪಡೆಯುವವರಿಗೆ ಹೆಚ್ಚು ಡಿಮ್ಯಾಂಡಿದೆ. ಏಕೆಂದರೆ ಈ ವ್ಯವಹಾರ ಅತಿ ಕಡಿಮೆ ರಿಸ್ಕಿನಲ್ಲಿ ಅತಿ ಹೆಚ್ಚು ಲಾಭ ತರುವ ದಂಧೆ. ಆದಕ್ಕೆ ಅಲ್ಲಿ ವಿದೇಶಿ ಖಾಸಗಿ ಹಣಕಾಸು ಬಂಡವಾಳಿಗರ ಟ್ರಾಫಿಕ್ ಜಾಸ್ತಿ. ಆದ್ದರಿಂದಲೇ ಸಾಲದ ಬಡ್ಡಿ ದರವೂ ಕಡಿಮೆ. ಶೇ. 6.5ರಿಂದ 7ರಷ್ಟು ಮಾತ್ರ.

ಆದರೆ ADB ನಮಗೆ ವಿಧಿಸುತ್ತಿರುವ ಬಡ್ಡಿದರ ಎಷ್ಟು? *ಶೇ.9!* ಮೊನ್ನೆ ಹೈದರಾಬಾದಿನಲ್ಲಿ ನಡೆದ ಸಭೆಯಲ್ಲಿ ಬಡ್ಡಿ ದರ ಇಳಿಸಬೇಕೆಂದು ಭಾರತ ಕೇಳಿದ್ದಕ್ಕೆ ಬಿಲ್‌ಕುಲ್ ಆಗುವುದಿಲ್ಲವೆಂದು ಅದು ನಿರಾಕರಿಸಿದೆ.

ಪ್ರಶ್ನೆಯೇನೆಂದರೆ ಸಾಲದ ಮಾರುಕಟ್ಟೆಯಲ್ಲಿ ಕಡಿಮೆ ದರದಲ್ಲಿ ಸಾಲ ಸಿಗುತ್ತಿದ್ದರೂ ಎ.ಡಿ.ಬಿ.ಯ ಷರತ್ತಿಗೂ ಒಪ್ಪಿ, ಅಧಿಕ ಬಡ್ಡಿಯನ್ನು ತೆತ್ತು ಆದರಿಂದ ಭಾರತ ಸಾಲವನ್ನೇಕೆ ಪಡೆಯುತ್ತಿದೆ? ●

ಇತ್ತೀಚಿಗೆ ನಡೆದ ಒಂದು ಅಧ್ಯಯನದ ಪ್ರಕಾರ ಭಾರತ ಅತಿ ಭ್ರಷ್ಟ ಆಡಳಿತ ವ್ಯವಸ್ಥೆ ಹೊಂದಿರುವ ರಾಷ್ಟ್ರಗಳಲ್ಲಿ ಒಂದು. ಈ ಸಾಲಿನಲ್ಲಿ ಭಾರತದಂತ ಇನ್ನೂ ಹಲವು ಬಡ ರಾಷ್ಟ್ರಗಳಿವೆ. ಇವೆಲ್ಲಾ ಮೊದಲಿನಿಂದಲೇ ಭ್ರಷ್ಟವಾಗಿದ್ದವು. ಆದರೆ ಯಾವಾಗಿನಿಂದ ಅತಿ ಭ್ರಷ್ಟವಾದವು? ಈ ರಾಷ್ಟ್ರಗಳ ಭ್ರಷ್ಟತೆಯ ಗಂಗೋತ್ರಿ ಎಲ್ಲಿದೆ?

ಈ ಪ್ರಶ್ನೆಗಳಿಗೆ ದೊರಕುವ ಉತ್ತರ ಭ್ರಷ್ಟತೆಯ ವ್ಯಾಖ್ಯಾನವನ್ನೇ ಬದಲಿಸುವಂತೆ ಮಾಡುತ್ತದೆ. ಈ ಹಿಂದೆ ಸರ್ಕಾರಿ ಕಚೇರಿಗಳಲ್ಲಿ ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಲಂಚ ಪಡೆಯುವುದು ಅಪರಾಧವೆಂಬ ಭಾವನೆಯಾದರೂ ಇತ್ತು, ಈಗಲೂ ಇದೆ. ಆದರೂ ನಮ್ಮ ಭಾರತೀಯ ಮಧ್ಯಮವರ್ಗದ ಟಿಪಿಕಲ್ ಅಷಾಢಭೂತಿತನದ ನೈಜ್ಯಾನುಸಂಧಾನದ ಭಾಗವಾಗಿ ಲಂಚಾವತಾರ ಆಗುತ್ತಲೇ ನಡೆದಿದೆ. ಆದರೂ ಲಂಚ ತೆಗೆದುಕೊಳ್ಳುವುದು ಅಪರಾಧವೆಂಬ ಮತ್ತು ವೆಂಕಟಾಚಲಯ್ಯ ಲೋಕಾಯುಕ್ತ ಆಗಿರುವ ತನಕ ಕೆಳಹಂತದ ಅಧಿಕಾರಿಗಳಿಗೆ ಆಪತ್ತು ಎಂಬ ಅಭಿಪ್ರಾಯ ನಮ್ಮ ಸಮಾಜದಲ್ಲಿದೆ(!)

ಆದರೆ. ಈ ಭ್ರಷ್ಟತೆ ವಿಶ್ವರೂಪ ಪಡೆದದ್ದು ಭಾರತ ವಿಶ್ವಬ್ಯಾಂಕಿನ ಕೈಗೊಂಬೆ ಆದಮೇಲೆಯೇ. 1991ರ ನಂತರ ವಿದೇಶಿ ಬಂಡವಾಳ ನಮ್ಮ ದೇಶಕ್ಕೆ ದೊಡ್ಡಮಟ್ಟದಲ್ಲಿ ಹರಿದು ಬರಲು ಪ್ರಾರಂಭಿಸಿದ ಮೇಲೆ ಅವರ ಆಸಕ್ತಿಗೆ ಅಂದರೆ ಅವರ ಲಾಭವನ್ನು ಜಾಸ್ತಿ ಮಾಡಲು ಈ ದೇಶದ ಜನರ ಆಸಕ್ತಿಗೆ ವ್ಯತಿರಿಕ್ತವಾಗಿ ದೇಶದ ಕಾನೂನನ್ನು ತಿದ್ದುಪಡಿ ಮಾಡಲು ದೊಡ್ಡಮಟ್ಟದಲ್ಲಿ ವಿದೇಶಿ ಬಂಡವಾಳಿಗರು ಈ ದೇಶದ ಆಡಳಿತ ಯಂತ್ರಾಂಗವನ್ನು ಭ್ರಷ್ಟಗೊಳಿಸಿದರು. ಎನ್ರಾನ್ ಕಂಪನಿ ಮಹಾರಾಷ್ಟ್ರ ಮಂತ್ರಿ ಮಹೋದಯರುಗಳಿಗೆ ತಿಳವಳಿಕೆ ನೀಡಲು 70ಕೋಟಿ ಖರ್ಚಾಯಿತೆಂದು ಬಹಿರಂಗವಾಗಿ ತನ್ನ ವೆಚ್ಚದಲ್ಲಿ ತೋರಿಸಿದರೆ, ಪೆಪ್ಸಿ, ಕೊಕೊ ಕೋಲ, ಮೊನ್ಸಂಟೋದಂತ ಕಂಪನಿಗಳು ತಮ್ಮ ಕಂಪನಿಯ ಪ್ರಚಾರದ ವೆಚ್ಚದಲ್ಲಿ ಜನಪ್ರತಿನಿಧಿಗಳಿಗೆ ತಿಳುವಳಿಕೆ ವೆಚ್ಚವೆಂಬ ಹೆಸರಲ್ಲಿ ಅಧಿಕೃತವಾಗಿಯೇ ಹಲವು ನೂರು ಕೋಟಿಗಳನ್ನು ಖರ್ಚು ಮಾಡಲು ಪ್ರಾರಂಭಿಸಿದರು. ಅಂದರೆ ಮೊದಲು ಕನಿಷ್ಠ ಲಂಚ ತೆಗೆದುಕೊಳ್ಳುವುದು ಅಪರಾಧವೆಂಬ ಭಾವನೆ ಸಮಾಜದಲ್ಲಿರುತ್ತಿದ್ದರೆ ವಿದೇಶಿ ಬಂಡವಾಳಿಗರ ಪುಣ್ಯದಿಂದ ಅದು ಮಾನ್ಯಗೊಂಡಿದ್ದು ಮಾತ್ರವಲ್ಲದೆ ಈಗ ಕಾನೂನು ಬದ್ಧಗೊಳ್ಳುತ್ತಿದೆ.



ಒಂದು ಸತ್ಯ: ಸಂಸ್ಥೆಯೊಂದು ನಡೆಸಿದ ಅಧ್ಯಯನದ ಪ್ರಕಾರ ಈ ಭ್ರಷ್ಟತೆಯ ದರ 91ರ ಹಿಂದಿಗಿಂತ 10 ಪಟ್ಟು ಹೆಚ್ಚು. ಆದರೆ ಇದು ಭ್ರಷ್ಟಗೊಳಿಸುತ್ತಿರುವುದು ಕೇವಲ ಸಂಬಂಧಪಟ್ಟ ಅಧಿಕಾರಿ ಅಥವಾ ರಾಜಕಾರಣಿಗಳನ್ನು ಮಾತ್ರವಲ್ಲ. ವಿದೇಶಿ ಬಂಡವಾಳ ಇಡೀ ದೇಶದ ಪ್ರಜಾತಾಂತ್ರಿಕ ಹಂದರವನ್ನೇ ಹಾಳುಗೆಡವುತ್ತಿದೆ. ಏಕೆಂದರೆ ಇದುವರೆಗೆ ಈ ಬೃಹತ್ ಉದ್ಯಮಿಗಳು ಪರೋಕ್ಷವಾಗಿ ಆಡಳಿತ ಯಂತ್ರಾಂಗವನ್ನು ಭ್ರಷ್ಟಗೊಳಿಸುತ್ತಿದ್ದರು. ಆದರೆ ಈಗ ವಿಶ್ವಬ್ಯಾಂಕಿನ ಅಣತಿಯ ಮೇರೆಗೆ ಸರ್ಕಾರ ಆಡಳಿತದ ನೀತಿ ನಿರ್ಣಯದ ಪ್ರಕ್ರಿಯೆಯಲ್ಲೇ ಅವರನ್ನು ಒಳಗೊಳ್ಳುತ್ತಾ ವ್ಯವಸ್ಥಿತ ಭ್ರಷ್ಟತೆಯನ್ನು ಜಾರಿಗೊಳಿಸಿದೆ.


ಉದಾಹರಣೆಗೆ ಯೋಜನಾ ಆಯೋಗದಲ್ಲಿ ಈಗ ಈ ವಿದೇಶಿ ಉದ್ಯಮಿಗಳು ಸಲಹಾಗಾರರ ಸ್ಥಾನದಲ್ಲಿ ಕೂತಿದ್ದಾರೆ. ಯಾವುದಕ್ಕೆ ಎಷ್ಟೆಷ್ಟು ತೆರಿಗೆ ಹಾಕಬೇಕು ಎಂಬುದನ್ನು ಇವರ ಸಲಹೆಯ ಮೇರೆಗೇ ಮಾಡಲಾಗುತ್ತಿದೆ. ಉದಾಹರಣೆಗೆ ಮೊನ್ನೆ ಮಂಡಿಸಿದ ಬಜೆಟ್ಟಿನಲ್ಲಿ ಸಾಫ್ಟ್ ಡ್ರಿಂಕ್ಸ್‌ಗಳ ಮೇಲೆ ತೆರಿಗೆ ತಾರತಮ್ಯ ಮಾಡಬಾರದೆಂದು ತೆರಿಗೆ ಇಳಿಸಲಾಯಿತು. ಅದರ ಪ್ರಮುಖ ಫಲಾನುಭವಿಗಳು ಪೆಪ್ಸಿ ಮತ್ತು ಕೊಕೊಕೋಲಾ ಸಂಸ್ಥೆಗಳೇ. ಆಮೇಲೆ ತಿಳಿದು ಬಂದದ್ದೇನೆಂದರೆ ಯೋಜನಾ ಆಯೋಗದ ಸಲಹೆಗಾರರಲ್ಲಿ ಪೆಪ್ಸಿ ಕಂಪನಿಯ ಮುಖ್ಯಸ್ಥನೇ ಪ್ರಧಾನನಾಗಿದ್ದನೆಂಬುದು!

ಭ್ರಷ್ಟ ಕುರಿಯಿಂದ ಅಧಿಕಾರ ಕಿತ್ತು ತೋಳಕ್ಕೆ ಕುರಿಗಳ ಪಾಲನೆಯನ್ನು ವಹಿಸಲಾಗಿದೆ. ಇದನ್ನೇ ವಿಶ್ವಬ್ಯಾಂಕ್ ಗುಡ್ ಗವರ್ನೆನ್ಸ್-ಒಳ್ಳೆ ಆಡಳಿತ ವಿಧಾನ ಎಂದು ಹೇಳುತ್ತದೆ! ■

No Comments

"ಪ್ಯಾಕೇಜ್ ಘೋಷಿಸಿ ಕಣ್ಣೊರೆಸುವ ಸಂಸ್ಕೃತಿ ಈ ಸರ್ಕಾರದ್ದಲ್ಲ"

-ಎಚ್.ಡಿ.ಕುಮಾರಸ್ವಾಮಿ



"ವರ್ಣವ್ಯವಸ್ಥೆಯೊಂದನ್ನು ಹೊರತುಪಡಿಸಿದರೆ ಮನು ಸ್ಮೃತಿಯಲ್ಲಿ ಬೇರೆ ಯಾವುದೇ ತೆಗೆದು ಹಾಕುವ ಅಂಶಗಳಿಲ್ಲ"

-ರಾಮಾ ಜೋಯಿಸ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ಇನ್ನು ಮುಂದೆ ಕಾಲೇಜು ಉಪನ್ಯಾಸಕರಿಗೆ ಪ್ರತಿ ತಿಂಗಳ 8 ರಂದೇ ಸಂಬಳ ಕೊಡಲಾಗುವುದು."

-ಬಸವರಾಜ ಹೊರಟ್ಟಿ

"ನಾನು ಈಗಲೂ ಬಿಜೆಪಿ ಮತ್ತು ಕಾಂಗ್ರೆಸ್ಸಿನಿಂದ ಸಮಾನ ಅಂತರವನ್ನು ಕಾದುಕೊಳ್ಳುತ್ತಿದ್ದೇನೆ"


- ದೇವೇಗೌಡ

"ಖಾಸಗಿ ಉದ್ಯಮಿಗಳು ಮೀಸಲಾತಿ ಬಗ್ಗೆ ನಿರ್ಧಾರಕ್ಕೆ ಬರದಿದ್ದರೆ ನಾವು ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ."

-ಕಮಲನಾಥ್

"20 ತಿಂಗಳ ನಂತರ ನಾನು ಸರ್ಕಾರದಿಂದ ನಿರ್ಗಮಿಸುತ್ತೇನೆ."


-ಎಚ್.ಡಿ. ಕುಮಾರಸ್ವಾಮಿ



"ನನ್ನ ತಂದೆ ಸರ್ಕಾರದಲ್ಲಿ ಮೂಗು ತೂರಿಸುತ್ತಿಲ್ಲ"

-ಎಚ್‌ಡಿಕೆ

ವಾರದ ಘೋಷಣೆ



"ಈ ಸರ್ಕಾರ ಜನರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮೊಡನೆ ಮಾಡಿಕೊಂಡಿರುವ 12 ಅಂಶಗಳ ಒಪ್ಪಂದದಂತೆ ನಡೆದುಕೊಳ್ಳದಿದ್ದರೆ ಮತ್ತೊಂದು ಸಶಸ್ತ್ರ ಹೋರಾಟವನ್ನು ಎದುರಿಸ ಬೇಕಾಗುತ್ತದೆ"

-ಪ್ರಚಂಡ, ನೇಪಾಳದ ಮಾವೋವಾದಿ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ

ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ವಕೀಲರಾಗಿರುವ ಬಸವರಾಜ್.ಎಸ್.ಬಾಳೇಶ್ವರ ಮಠರವರು ಈ ಬಾರಿ 'ಜೀವನ' ಕುರಿತ ಸೂಕ್ತಿಗಳನ್ನು ಸಂಗ್ರಹಿಸಿ ಕಳುಹಿಸಿದ್ದಾರೆ. ಅಮೆಲಿಯಾ ಬುರ್ ಎಂಬ ಲೇಖಕಿ "ನಾನು ಜೀವನವನ್ನು ಪ್ರೀತಿಸಿದ್ದರಿಂದಲೇ ನನಗೆ ಸಾವಿನ ಬಗ್ಗೆ ಯಾವುದೇ ದುಃಖವಿಲ್ಲ" ಅಂದಿದ್ದರು. ಬಾಳೇಶ್ವರಮಠರು ಆಯ್ಕೆ ಮಾಡಿರುವ ಸೂಕ್ತಿಗಳೂ ನಮ್ಮನ್ನು ಚಕಿತಗೊಳಿಸುವ ಶಕ್ತಿ ಪಡೆದಿವೆ.

-ಗೌರಿ

ಅತಿಯಾದ ಸ್ವಾತಂತ್ರ್ಯ ಮತ್ತು ಧರೆಗೆ ದೊಡ್ಡವರು

ಕಂಡಹಾಗೆ



ಇತ್ತೀಚೆಗೆ ನನ್ನ ತಂಗಿ ಬೇಬಿ (ಕವಿತಾ) ನಿರ್ದೇಶಿಸುತ್ತಿರುವ ಹೊಸ ಚಿತ್ರದ ಮುಹೂರ್ತ ನಂದಿಬೆಟ್ಟದ ಹತ್ತಿರ ನಡೆಯಿತು. ಅದಕ್ಕೆ ಹೋಗಿದ್ದ ನಾನು ಮತ್ತು ಗೆಳೆಯ ಜುಟ್ಟು (ಇವನ ನಿಜವಾದ ಹೆಸರು ಸತೀಶ್, ಆದರೆ ಹುಡುಗರು ಉದ್ದ ಕೂದಲು ಬಿಡುವುದು ಫ್ಯಾಷನ್ ಆಗುವ ಮುನ್ನವೇ ಈತ ಜುಟ್ಟು ಬಿಟ್ಟಿದ್ದರಿಂದ, ಜುಟ್ಟು ಹೆಸರೇ ಇಂದಿಗೂ ಅಂಟಿಕೊಂಡಿದೆ) ಬೆಂಗಳೂರಿಗೆ ಹಿಂತಿರುಗುತ್ತಿದ್ದಾಗ, "ನೋಡು ರೈತರೆಲ್ಲರು ಮರಳನ್ನು ತಯಾರಿಸುತ್ತಿರುವುದು" ಅಂದ. ಮರಳನ್ನು ಹೇಗೆ ತಯಾರಿಸಕ್ಕಾಗುತ್ತೆ ಎಂದು ನಾನು ಅಚ್ಚರಿ ಪಟ್ಟು ಕಾರ್ ನಿಲ್ಲಿಸಿದೆ. ರಸ್ತೆಯ ಪಕ್ಕದಲ್ಲೇ ಇದ್ದ ಜಮೀನಿನಲ್ಲಿ ದೊಡ್ಡದಾದ ಒಂದು ಗುಂಡಿಯನ್ನು ಅಗೆದು ಅದಕ್ಕೆ ನೀರನ್ನು ರಭಸವಾಗಿ ಹರಿಸುತ್ತಾ ಮರಳನ್ನು ತಯಾರಿಸುತ್ತಿದ್ದರು. ಹಾಗೆ ತಯಾರಿಸಿದ ಮರಳನ್ನು ಬೆಂಗಳೂರಿಗೆ ಸಾಗಿಸಲು ಲಾರಿಗಳು ಕಾದು ನಿಂತಿದ್ದವು.

ಈ ದೃಶ್ಯವನ್ನು ನೋಡಿ ನನಗೆ ಶಾಕ್ ಆಯಿತು. ಏಕೆಂದರೆ ಹಾಗೆ ಮರಳು ತಯಾರಿಸಿದ ನಂತರ ಆ ಜಮೀನಿನಲ್ಲಿ ಏನನ್ನೂ ಬೆಳೆಯಲು ಸಾಧ್ಯವಾಗುವುದಿಲ್ಲ. ರೈತರು ತಮ್ಮ ಹೊಲಗಳನ್ನೇ ಹೀಗೆ ನಿರ್ಜೀವ ಮಾಡುತ್ತಿರುವುದು ನಿಜಕ್ಕೂ ಆತಂಕಕಾರಿಯಾಗಿತ್ತು. ತಮ್ಮ ಭೂಮಿಯಲ್ಲಿ ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗದೇ ಆತ್ಮಹತ್ಯೆಯ ಅಂಚಿನಲ್ಲಿ ನಿಂತಿರುವ ರೈತರು ಈಗ ಭೂಮಿಯ ಜೀವವನ್ನೇ ಹಿಂಡುತ್ತಿದ್ದಾರೆ. ಇದೊಂದು ರೀತಿಯಲ್ಲಿ catch-22 ಪರಿಸ್ಥಿತಿ. ಇಲ್ಲಿ ರೈತರು ಸಾಯಬೇಕು ಅಥವಾ ಭೂಮಾತೆ ಸಾಯಬೇಕು....

ನಂದಿ ಬೆಟ್ಟದ ಸುತ್ತಮುತ್ತಲು ನಡೆಯುತ್ತಿರುವ ಅಕ್ರಮ ಗಣಿಗಾರಿಕೆ, ತಲೆ ಎತ್ತುತ್ತಿರುವ ರೆಸಾರ್ಟ್‌ಗಳು, ಇತ್ಯಾದಿಗಳಿಂದಾಗಿ ಅಲ್ಲಿನ ಪರಿಸರ ಎಷ್ಟು ನಾಶವಾಗಿದೆ ಅಂದರೆ ಐದು ವರ್ಷಗಳ ಹಿಂದೆ ನೂರು ಅಡಿ ಆಳದಲ್ಲಿ ಸಿಗುತ್ತಿದ್ದ ನೀರಿಗಾಗಿ ಇವತ್ತು ಒಂದು ಸಾವಿರ ಅಡಿ ತೋಡಬೇಕಿದೆ. ಅಷ್ಟೇ ಅಲ್ಲ, ನಂದಿ ಸುತ್ತಮುತ್ತಲಿನ ಪ್ರದೇಶದಲ್ಲಿ ನಡೆಯುತ್ತಿರುವ 'ಅಭಿವೃದ್ಧಿ' ಕಾರ್ಯಗಳಿಂದಾಗಿ ಬೆಂಗಳೂರಿಗೆ ನೀರನ್ನುಣಿಸುವ ತಿಪ್ಪಗೊಂಡನಹಳ್ಳಿ ಜಲಾಶಯವೇ ಸದ್ಯದಲ್ಲಿ ಬತ್ತಿ ಹೋಗಲಿದೆ.

ಆದರೆ ನಮ್ಮ ಘನ ಸರ್ಕಾರಗಳಿಗೆ ಇದೆಲ್ಲದರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ, ಬದಲಾಗಿ ಕೋಟ್ಯಂತರ ರೂಪಾಯಿಗಳ ಮೆಟ್ರೋ ರೈಲು, ಫ್ಲೈ ಓವರ್‌ಗಳು, ಐಟಿ-ಬಿಟಿ ಸಿಟಿಗಳು, ಇವೇ ಅದಕ್ಕೆ 'ಅಭಿವೃದ್ಧಿ' ಎನಿಸಿದೆ. ಇವರ ಬೇಜವಾಬ್ದಾರಿತನಕ್ಕೆ ಏನನ್ನು ಹೇಳಬೇಕು...?

* * * * * * * * * *


ಮೊನ್ನೆ 'ಹಸಿರು ನಾಡಿನ ಕೆಂಪು ಹಾದಿ' ಎಂಬ ನಾಟಕದ ಆಹ್ವಾನ ಪತ್ರಿಕೆಯನ್ನು ಹಿಡಿದು ಅದರ ನಿರ್ದೇಶಕ ಸುದೇಶ್ ಕೆ. ರಾವ್ ಎಂಬುವವರು ನಮ್ಮ ಆಫೀಸಿಗೆ ಬಂದಿದ್ದರು. ಆಹ್ವಾನ ಪತ್ರಿಯನ್ನು ನೋಡುತ್ತಿದ್ದಂತೆ ಆ ನಾಟಕ ನಕ್ಸಲರ ಬಗ್ಗೆ ಎಂದೂ, ಅದನ್ನು ಕರ್ನಾಟಕ ಪೋಲೀಸ್ ಇಲಾಖೆಗೆ ಅರ್ಪಿಸುತ್ತಿದೆ ಎಂದೂ ಗೊತ್ತಾಯಿತು. ಆಹ್ವಾನ ಪ್ರತಿಯ ಹಿಂಭಾಗದಲ್ಲಿದ್ದ "ಪ್ರಜಾಪ್ರಭುತ್ವದ 'ಅತಿಯಾದ ಸ್ವಾತಂತ್ರ್ಯ' ಸಮಸ್ಯೆಗಳ ಹುಟ್ಟಿಗೆ ಕಾರಣವೇ?" ಎಂಬ ಸಾಲು ನನ್ನ ಗಮನವನ್ನು ಸೆಳೆಯಿತು. ಟಿವಿ ನಟರೂ ಆಗಿರುವ ರಾವ್‌ರವರನ್ನು "ಅತಿಯಾದ ಸ್ವಾತಂತ್ರ್ಯ ಅಂದರೆ ಏನು?" ಅಂತ ಕೇಳಿದೆ.

"ಹೌದು. ನನ್ನ ಪ್ರಕಾರ ನಮ್ಮ ದೇಶದಲ್ಲಿ ಯಾರು ಏನು ಬೇಕಾದರೂ ಮಾಡಲು ಸ್ವಾತಂತ್ರ್ಯವಿದೆ. ಇಂತಹ ಸ್ವಾತಂತ್ರ್ಯ ಗಲ್ಫ್ ದೇಶಗಳಲ್ಲಿ ಇಲ್ಲ" ಅಂತ ಉತ್ತರಿಸಿದರು.

"ಗಲ್ಫ್ ದೇಶಗಳಿಗೆ ನಮ್ಮ ದೇಶವನ್ನು ಯಾಕೆ ಹೋಲಿಸಬೇಕು? ಅವೇನು ನಮಗೆ ಆದರ್ಶ ದೇಶಗಳಲ್ಲವಲ್ಲ. ಅಂದಹಾಗೆ ಅಮೆರಿಕಾ ತನ್ನ ಪ್ರಜೆಗಳಿಗೆ ಅಪಾರ ಸ್ವಾತಂತ್ರ್ಯ ನೀಡುವ ದೇಶ ಎಂದೇ ಎಲ್ಲರು ನಂಬಿದ್ದಾರೆ. ಆದರೆ ಇವತ್ತು ಅಮೆರಿಕಾದಲ್ಲೂ ಹೊಸ ಕಾನೂನು ತಂದು ಯಾರನ್ನು ಬೇಕಾದರೂ ಬಂಧಿಸುವ ಅಧಿಕಾರ ಅಲ್ಲಿನ ಸರ್ಕಾರ ಪಡೆದಿದೆ. ಈ ಕಾನೂನಿನಡಿ ಹಿಂಸೆ, ಅನಧಿಕೃತ ಬಂಧನ, ಇತ್ಯಾದಿಗಳು ನಡೆದು ಜಗತ್ತಿನ ಹಲವಾರು ದೇಶಗಳು ಇದನ್ನು ವಿರೋಧಿಸಿವೆ. ಗುಂಟನಾಮೋ ಎಂಬ ಅಮೆರಿಕನ್ ಜೈಲು ಮತ್ತು ಅಲ್ಲಿ ನಡೆಯುತ್ತಿರುವ ಅತ್ಯಾಚಾರಗಳ ಬಗ್ಗೆ ಕೇಳಿದ್ದೀರಾ?"

ರಾವ್ ಸುಮ್ಮನಿದ್ದರು. ಅವರ ಉತ್ಸಾಹವನ್ನು ನಾಶ ಮಾಡಬಾರದೆಂದು ತಾಳ್ಮೆಯಿಂದಲೇ ಹೇಳಿದೆ. "ಭಾರತದ ಇಂದಿನ ಕಾನೂನುಗಳ ಕರಾಳತೆಯ ಬಗ್ಗೆ ನಿಮಗೆ ಗೊತ್ತಾ? ಮೂವತ್ತು ವರ್ಷಗಳ ಹಿಂದೆ ತುರ್ತುಪರಿಸ್ಥಿತಿ ಘೋಷಿಸಿದಾಗ, MISA ಎಂಬ ಕಾನೂನಿನಡಿ ಸಾವಿರಾರು ಜನರು ಬಂಧನಕ್ಕೊಳಗಾದರು. ಆದರೆ ಇವತ್ತು ಅಘೋಷಿತ ತುರ್ತುಪರಿಸ್ಥಿತಿ ಇದೆಯಲ್ಲದೆ, MISA ಗಿಂತಲೂ ಕರಾಳವಾದ TADA ಬಂತು, ಆನಂತರ ಅದಕ್ಕಿಂತಲೂ ಘೋರವಾದ POTA ಬಂದಿದೆ. ಈ ಕಾನೂನಿನ ಗುರಿ ಭಯೋತ್ಪಾದನೆಯನ್ನು ತಡೆಯುವುದಾದರೂ ಅದರ ಮೂಲ ಉದ್ದೇಶ ಭಿನ್ನಮತ, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ದಮನ ಮಾಡುವುದು. ಆದ್ದರಿಂದ ಇವತ್ತಿನ ಅಘೋಷಿತ ತುರ್ತುಪರಿಸ್ಥಿತಿಯನ್ನು ಅದು ಹೇಗೆ ಅತಿಯಾದ ಸ್ವಾತಂತ್ರ್ಯ ಎನ್ನಲಾಗುತ್ತದೆ?" ಅಂತ ನಾನು ಮತ್ತೆ ಪ್ರಶ್ನಿಸಿದಾಗ, "ನೀವು ಹೇಳಿದ್ದು ಸರಿ ಅನ್ನಿಸುತ್ತಿದೆ" ಎಂದು ಹೇಳಿ ರಾವ್ ಸುಮ್ಮನಾದರು.

ಇವತ್ತು ನಮ್ಮ ದೇಶದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚಾಗುತ್ತಿರುವಾಗಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಮಹಿಳೆಯರು ಮೈ ಮಾರಿಕೊಳ್ಳುತ್ತಿದ್ದಾರೆ, ಮಕ್ಕಳು ಪೌಷ್ಟಿಕ ಆಹಾರ ಸಿಗದೇ ಬಳಲುತ್ತಿದ್ದಾರೆ, ಪರಿಸರ ನಾಶವಾಗುತ್ತಿದೆ, ನದಿಗಳು ಬತ್ತಿ ಹೋಗುತ್ತಿವೆ, ಸಾಮಾಜಿಕ ಅಸಮಾನತೆ ಹಿಗ್ಗುತ್ತಿದೆ....ಇದೆಲ್ಲ ನಮ್ಮ ಕಣ್ಣುಮುಂದೆ ಇರುವಾಗ ಈ ದೇಶದ ಜನರಿಗೆ ಎಲ್ಲಿಂದ ಬಂತು ಅತಿಯಾದ ಸ್ವಾತಂತ್ರ್ಯ...



ಸುಭಾಷ್ ಭರಣಿ

ಅಂದಹಾಗೆ ಈ ನಾಟಕವನ್ನು ಓದಿ, ಪುಟ್ಟ 'ಪಾಸ್' ಮಾಡಿದವರು ದಲಿತ ಸಮುದಾಯದಿಂದ ಬಂದಿರುವ ಪೋಲೀಸ್ ಅಧಿಕಾರಿ ಸುಭಾಷ್ ಭರಣಿಯಂತೆ. 'ಅತಿಯಾದ ಸ್ವಾತಂತ್ರ್ಯ' ಎಂಬುದೂ ಪೋಲೀಸ್ ಪರಿಭಾಷೆಯೇ ಆಗಿರುವುದರಿಂದ ನಕ್ಸಲ್ ಚಳವಳಿ ಕುರಿತ ನಾಟಕದ ಆಹ್ವಾನ ಪ್ರತಿಯಲ್ಲಿ ಈ ಪದ ಪುಂಜಗಳು ಕಾಣಿಸಿಕೊಂಡಿದ್ದರಲ್ಲಿ ಯಾವ ಅಚ್ಚರಿಯೂ ಇಲ್ಲ. ಎಲ್ಲಿ ದಲಿತರ ನೋವು, ಎಲ್ಲಿ ಭರಣಿಯವರ 'ಅತಿಯಾದ ಸ್ವಾತಂತ್ರ್ಯ'?!

* * * * * * * * * * * * * * * *

ಈ ಸಂಚಿಕೆಯಲ್ಲಿ ಬೆಂಗಾಲಿ ಲೇಖಕಿ ತಸ್ಲೀಮಾ ನಸ್ರೀನ್‌ರವರ ಲೇಖನವನ್ನು ಪ್ರಕಟಿಸಿದ್ದೇವೆ. ಈ ತಸ್ಲೀಮಾ ನಸ್ರೀನ್ ಹೆಸರು ಕೇಳುತ್ತಿದ್ದಂತೆ ಈಕೆ ಸ್ವಲ್ಪ ತಲಹರಟೆಯಂತೆಯೂ, ಪ್ರಚಾರಪ್ರಿಯ ಹೆಂಗಸಿನಂತೆಯೂ, ಅಷ್ಟು ಶ್ರೇಷ್ಠವಲ್ಲದ ಸಾಹಿತ್ಯದ ಕರ್ತೃ ಅಂತೆಯೂ ಅನ್ನಿಸುತ್ತದೆ. ಆದರೆ ಈ ಲೇಖನ ತಸ್ಲೀಮಾರ ನಿಜವಾದ ಪ್ರತಿಭೆಯನ್ನು ತೆರೆದಿಡುತ್ತದೆ ಅನ್ನಿಸುತ್ತಿದೆ.



ತಸ್ಲೀಮಾ

ಈಗ ಅಮೆರಿಕದಲ್ಲಿರುವ ಗೆಳತಿ ಸುಕನ್ಯಾ ಕನರಳ್ಳಿ ಈ ಲೇಖನವನ್ನು ಅನುವಾದಿಸಿ ಕಳುಹಿಸಿದಾಗ, ಅದು ಸುಮಾರಾಗಿರಬಹುದು ಅಂದುಕೊಂಡಿದ್ದೆ. ಆದರೆ ಅದನ್ನು ಓದಿದಾಗ ಅಚ್ಚರಿ ಆಯಿತು. ತಸ್ಲೀಮಾರ ನೋವು ಮತ್ತು ದಿಟ್ಟತನ, ಎರಡನ್ನೂ ಬಿಂಬಿಸುವ ಈ ಲೇಖನವನ್ನು ಸುಕನ್ಯಾ ಅದ್ಭುತವಾಗಿ ಅನುವಾದಿಸಿದ್ದಾರೆ. 'ಲಂಕೇಶ್'ನ ಜಾಣ-ಜಾಣೆಯರೆಲ್ಲರೂ ಇದನ್ನು ಓದುವಂತಾಗಲಿ ಎಂದೇ ಒಂದೇ ಸಂಚಿಕೆಯಲ್ಲಿ ಅದನ್ನು ಇಡಿಯಾಗಿ ಪ್ರಕಟಿಸಿದ್ದೇವೆ. ಇತ್ತೀಚೆಗೆ ಹೆರಾಲ್ಡ್ ಪಿಂಟರ್‌ರವರ ನೋಬೆಲ್ ಪ್ರಶಸ್ತಿ ಸ್ವೀಕೃತ ಭಾಷಣದ ನಂತರ ನನಗೆ ತುಂಬಾ ಇಷ್ಟವಾದ ಲೇಖನ ಇದು.

-ಗೌರಿ ಲಂಕೇಶ್

ಹೊಣೆಗೇಡಿ ಪ್ರಭುತ್ವ:
ಸಲ್ವಾ ಜುಡಮ್-ಸರ್ಕಾರಿ ಭಯೋತ್ಪಾದನೆ!

ಇಲ್ಲಿ ಪ್ರಭುತ್ವ ಹಿಂಸೆಯನ್ನು ಹತ್ತಿಕ್ಕುವ ಬಗ್ಗೆ ಮಾತಾಡುತ್ತಿದೆ..... ಜೊತೆಗದು ಕಾರ್ಯಪ್ರವೃತ್ತವೂ ಆಗಿದೆ.... ಜನಸಾಮಾನ್ಯರ ಬೆಂಬಲವಿರುವ 'ನಿಷೇಧಿತ' ಚಳವಳಿಯೊಂದನ್ನು ಹತ್ತಿಕ್ಕಲು ಸರ್ಕಾರ ಕೈಗೆ ತೆಗೆದುಕೊಂಡಿರುವ ಅಸ್ತ್ರ ಯಾವುದು ಗೊತ್ತೆ?

ಜನಸಾಮಾನ್ಯರೇ ಇಲ್ಲಿ ಸರ್ಕಾರದ ಅಸ್ತ್ರಗಳು!

ಆವತ್ತಿನ ಬ್ರಿಟಿಷರ ಕುತಂತ್ರ 'ಡಿವೈಡ್ ಅಂಡ್ ರೂಲ್' ಮತ್ತಿಲ್ಲಿ ಮರುಕಳಿಸುತ್ತಿದೆ. ಪ್ರಭುತ್ವದ ಪ್ರತಿನಿಧಿಗಳೆಲ್ಲ ದೂರ ನಿಂತು ಆಡಿಸುತ್ತಿದ್ದಾರೆ. ಸಾಯುತ್ತಿರುವವರು ಮಾತ್ರ ಜನಸಾಮಾನ್ಯರೇ.

ಚತ್ತೀಸ್‌ಗಡದ ಹೊಣೆಗೇಡಿ ಪ್ರಭುತ್ವ ಪ್ರತಿನಿಧಿಗಳು ನಕ್ಸಲಿಸಂನ್ನು ಎದುರಿಸಿ ಉತ್ತರಿಸಲಾಗದೇ, ಜನರನ್ನೇ ತಮ್ಮ ಅಸ್ತ್ರಗಳನ್ನಾಗಿ ಬಳಸುತ್ತಾ ಪ್ರತಿಹಿಂಸೆಯ ರೂಪದಲ್ಲಿ ರಾಕ್ಷಸತನ ಮೆರೆಯುತ್ತಿರುವ ಈ ಜನದ್ರೋಹಿ ಕಾರ್ಯಾಚರಣೆಗೆ 'ಸಲ್ವಾ-ಜುಡಮ್' (ಶಾಂತಿ ಪ್ರಕ್ರಿಯೆ!) ಎಂದು ಕರೆದುಕೊಳ್ಳುತ್ತಿದ್ದಾರೆ.

ಚತ್ತೀಗಡದ ಬಸ್ತರ್ ಜಿಲ್ಲೆ ಇವತ್ತು ರಣರಂಗವಾಗಿ ಹೋಗುತ್ತಿದೆ. ಅಲ್ಲಿನ ಆದಿವಾಸಿಗಳಿಗೀಗ 'ಸಲ್ವಾ ಜುಡಮ್' ಎಂಬ ಸರ್ಕಾರಿ ಗೂಂಡಾಪಡೆಯಿಂದ ಜೀವಭಯ! ಈ ಗೂಂಡಾಪಡೆಯ ಹಿಂದೆ ಹೋದರೆ ಮಾವೋವಾದಿಗಳ ಪ್ರತಿಕಾರಕ್ಕೆ ತುತ್ತಾಗುವ ಭಯ.... ಚತ್ತೀಸ್‌ಗಡದ ಮುಖ್ಯಮಂತ್ರಿ ಬಿಜೆಪಿಯ ರಮಣ್ ಸಿಂಗ್, ವಿರೋಧ ಪಕ್ಷದ ನಾಯಕ ಕಾಂಗ್ರೆಸ ಮಹೇಂದ್ರ ಕರ್ಮ ಇಬ್ಬರಿಗೂ 'ಸಲ್ವಾ ಜುಡಮ್' ಎಂಬುದು ಪ್ರಜಾಪ್ರಭುತ್ವ ವಿರೋಧಿ ಕ್ರಮ ಎಂದು ಗೊತ್ತಿದ್ದರೂ, ಅವರು ಅದನ್ನು ಮುಂದುವರಿಸುತ್ತಿರುವುದಕ್ಕೆ ಕಾರಣ: ಇಬ್ಬರ ಕಾಮನ್ ವೈರಿ-ಪ್ರಭುತ್ವದ ವೈರಿ-ನಕ್ಸಲಿಸಂ! ಆದ್ದರಿಂದಲೇ ಈ ಮಹೇಂದ್ರ ಕರ್ಮನ ಹಿಂದೆ ಪಕ್ಷಭೇದ ಮರೆತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೇ ನಿಂತುಕೊಂಡಿವೆ.

ಮಹಾರಾಷ್ಟ್ರ-ಆಂಧ್ರಗಳ ಗಡಿಗಳ ಪಕ್ಕ ಹಸಿರು ಕಾಡುಗಳಿಗೆ ಹೊಂದಿಕೊಂಡಿರುವ ಬಸ್ತರ್ ಜಿಲ್ಲೆಯ ಆದಿವಾಸಿಗಳು ಎಲ್ಲ ಆದಿವಾಸಿಗಳಂತೆ ವ್ಯವಸ್ಥೆಯ ಕ್ರೂರತನಕ್ಕೆ ಬಲಿಯಾಗುತ್ತಲೇ ಇದ್ದಾರೆ. ಗಣಿಗಾರಿಕೆಗಾಗಿ ಅರಣ್ಯ ಕಬಳಿಸುವ ವ್ಯವಸ್ಥೆ ದೇಶಾದ್ಯಂತ ಆದಿವಾಸಿಗಳನ್ನು ಅತಂತ್ರ ಮಾಡುತ್ತಲೇ ಇದೆ. ಆದಿವಾಸಿಗಳ ನೈಸರ್ಗಿಕ ಆಸ್ತಿಯಾದ ಕಾಡುತ್ಪನ್ನಗಳಿಗೆ ಕಂಟ್ರಾಕ್ಟರ್‌ಗಳು ಕೊಡುವುದು ದುಗ್ಗಾಣಿ ಬೆಲೆಯನ್ನಷ್ಟೇ. ಬಸ್ತರ್, ಡಾಂಟೆವಾಡ, ಕಂಕೆರ ಜಿಲ್ಲೆಗಳ ಆದಿವಾಸಿಗಳು ಜೀವನಾಧಾರಕ್ಕೆ ಆಶ್ರಯಿಸಿರುವುದು ತೆಂಡು ಎಲೆ (ಬೀಡಿ ತಯಾರಿಸಲು ಬಳಸುವ ಎಲೆ) ಮತ್ತು ಮಹೂವಾ ಹೂವುಗಳನ್ನು. ತೆಂಡು ಎಲೆಗಳನ್ನು ಕೊಳ್ಳುವ ಗುತ್ತಿಗೆದಾರರು ಕಡಿಮೆ ಹಣ ಕೊಟ್ಟು ಆದಿವಾಸಿಗಳನ್ನು ಶೋಷಿಸುತ್ತಲೇ ಬಂದಿದ್ದರು. ಆದರೆ ನಕ್ಸಲ್ ಚಳವಳಿ ಕಾಲಿಟ್ಟ ಮೇಲೆ ಕಾಂಟ್ರಾಕ್ಟರುಗಳು ಶೋಷಣೆ ಕಟ್ಟಬೇಕಾಯಿತು. ಪ್ರಾರಂಭದಲ್ಲಿ ತೆಂಡು ಎಲೆ ಕೀಳಲು ಜಾಸ್ತಿ ಕೂಲಿ ಕೊಡಿಸಲು ಹೋರಾಟ ರೂಪಿಸಿದ ನಕ್ಸಲರು ಕ್ರಮೇಣ ಅಲ್ಲಿ ಆದಿವಾಸಿಗಳ ಪ್ರಭುತ್ವವನ್ನೇ ಸ್ಥಾಪಿಸಿ ಪರ್ಯಾಯ ಸರ್ಕಾರ ರಚಿಸಿದರು. ಅಷ್ಟು ಮಾತ್ರವಲ್ಲ ಇಡೀ ಭಾರತದಲ್ಲಿ ಕ್ರಾಂತಿ ಮಾಡಲು ಅದನ್ನು ತಮ್ಮ ಕೇಂದ್ರ ಸ್ಥಾನವಾಗಿ ಮಾಡಿಕೊಂಡರು. ಇದರ ಅಪಾಯವನ್ನು ಮನಗಂಡ ಕೇಂದ್ರ ಸರ್ಕಾರ ಚಳವಳಿಯನ್ನು ಹತ್ತಿಕ್ಕಲು ನಡೆಸಿದ ಹೀನಾಯ ಸಂಚಿನ ಹೆಸರೇ ಸಲ್ವಾ ಜುಡಮ್! ಅಂದರೆ ಜನರಿಂದಲೇ ಜನರನ್ನು ಕೊಲ್ಲಿಸುವ ಕುತಂತ್ರ.

ಆದಿವಾಸಿಗಳ ಗೊಂಡ್ ಪಂಗಡಕ್ಕೆ ಸೇರಿದ ಕಾಂಗ್ರೆಸ್ ನಾಯಕ ಮಹೇಂದ್ರ ಕರ್ಮ ಆದಿವಾಸಿಗಳನ್ನೇ ನಕ್ಸಲರ ವಿರುದ್ಧದ ಅಸ್ತ್ರಗಳನ್ನಾಗಿ ಬಳಸುವ ಹೊಣೆಗೇಡಿ, ಪ್ರಜಾಪ್ರಭುತ್ವ ವಿರೋಧಿ 'ಸಲ್ವಾ ಜುಡಮ್' ಎಂಬ ಸರ್ಕಾರಿ ಪ್ರಾಯೋಜಿತ ಭಯೋತ್ಪಾದನೆ ಆರಂಭಿಸಿಬಿಟ್ಟ. ಆದಿವಾಸಿಗಳನ್ನು ನಕ್ಸಲರ ವಿರುದ್ಧ ಎತ್ತಿ ಕಟ್ಟಿದ ಸರ್ಕಾರ, ಯುವಕರ ಕೈಗೆ ಬಂದೂಕು ನೀಡಿ ಅವರನ್ನು 'ಸ್ಪೇಷಲ್ ಪೋಲೀಸ್ ಆಫಿಸರ್ಸ್' ಎಂದು ಕೆಲಸಕ್ಕೆ ನೇಮಿಸಿತು. ಬಹುತೇಕ ನಕ್ಸಲ್ ಬೆಂಬಲಿಗರಿರುವ ಹಳ್ಳಿಗಳಿಗೆಲ್ಲ ಈ 'ಸಲ್ವಾ ಜುಡಮ್' ಪಡೆ ನುಗ್ಗಿ ನೂರಾರು ಹೆಣಗಳನ್ನು ಉರುಳಿಸಿದೆ. ತಮ್ಮಷ್ಟೇ ಶೋಷಿತರಾಗಿರುವ ತಮ್ಮ ಸಹೋದರ-ಸಹೋದರಿಯರನ್ನೇ ಕೊಂದು ಹಾಕಿದ್ದಾರೆ. ಇಡೀ ಹಳ್ಳಿಗೆ ಹಳ್ಳಿಗಳನ್ನೇ ನಾಶ ಮಾಡಿ ಜನರನ್ನೆಲ್ಲ 'ರಿಲೀಫ್ ಕ್ಯಾಂಪ್'ಗಳೆಂಬ ಓಪನ್ ಜೈಲುಗಳಲ್ಲಿ ಕೂಡಿಡಲಾಗುತ್ತಿದೆ. ವಿಯೆಟ್ನಾಂ ಮಾದರಿಯ ಈ ಕ್ಯಾಂಪ್‌ಗಳಲ್ಲಿ ಊಟ, ವಸತಿಯ ಸಮಸ್ಯೆಗಳೆಲ್ಲ ಕಾಡುತ್ತಿವೆ. ಹುಚ್ಚು ಸರ್ಕಾರವೊಂದು ಎಷ್ಟು ದಿನಾಂತ ಈ 'ರಿಲೀಫ್ ಕ್ಯಾಂಪ್'ಗಳನ್ನು ನಡೆಸಬಲ್ಲದು?

ಇದ್ದುದರಲ್ಲಿ ಸ್ವಲ್ಪ ಸ್ಥಿತಿವಂತರೂ ಎನಿಸಿದ ಕೆಲ ಆದಿವಾಸಿ ಭೂಮಾಲೀಕರು ಸರ್ಕಾರದ ಜೊತೆ ಕೈಗೂಡಿಸಿ ಅಮಾಯಕ ಆದಿವಾಸಿಗಳ ಕೈಗೆ ಬಂದೂಕು ಇತ್ತು ಸರ್ಕಾರಿ ಗೂಂಡಾಗಳನ್ನು ಸೃಷ್ಟಿಸುತ್ತಿದ್ದಾರೆ. ತಮ್ಮ ದೀರ್ಘ ಹೋರಾಟದ ಮಾರ್ಗದಲ್ಲಿ ಈ ಸಲ್ವಾ ಜುಡಮ್ ಎಂಬ ಸರ್ಕಾರಿ ಮುಳ್ಳು ಕಾಣಿಸಿಕೊಂಡಿದ್ದೇ ತಡ ನಕ್ಸಲರು ತಮ್ಮ ಪ್ರಭುತ್ವ ವಿರೋಧಿ ನಿಲುವಿನಂತೆ ದಾಳಿಗಳನ್ನು ಮಾಡುತ್ತಿದ್ದಾರೆ. ಇಲ್ಲೂ ಆದಿವಾಸಿಗಳೇ ಬಲಿಯಾಗುತ್ತಿದ್ದಾರೆ. "ಅವರವರು ಬಡಿದಾಡಿಕೊಳ್ಳಲಿ, ಅವರ ಸಮಸ್ಯೆ ಅವರಿಂದಲೇ ಬಗೆಹರಿಯಲಿ" ಎಂಬಂತಹ ಅಮಾನವೀಯ ನಿಲುವು ತಳೆದಿರುವ ಚತ್ತೀಸ್‌ಗಡ ಸರ್ಕಾರದ ಹಿಂದೆ ಗಣಿಗಾರಿಕೆಗೆ ಕಾದಿರುವ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು, ಕುಟಿಲ ಲೋಕಲ್ ಕಂಟ್ರಾಕ್ಟರ್‌ಗಳು, ಭೂಮಾಲೀಕರೆಲ್ಲ ನಿಂತಿದ್ದಾರೆ.

ಇಲ್ಲೂ ಕನ್ನಡದ ಕೆಲ ಚೆಡ್ಡಿ ಪತ್ರಕರ್ತರು ಕುದುರೆಮುಖ ಪ್ರದೇಶದಲ್ಲೂ ಇಂತಹ ಸಲ್ವಾ ಜುಡಮ್ ಬಂದರೆ ಚೆನ್ನ ಎಂಬಂತೆ ಕಾರಿಕೊಳ್ಳುತ್ತಿವೆ. ಅಂದರೆ ಕುದುರೆಮುಖ ಗಣಿಗಾರಿಕೆ ವಿರೋಧಿಸುವವರು, ಆದಿವಾಸಿಗಳನ್ನು ಒಕ್ಕಲೆಬ್ಬಿಸುವುದನ್ನು ವಿರೋಧಿಸುತ್ತಿರುವವರು, ಹಾಗೆಯೇ ಭೂಮಾಲೀಕರ ಶೋಷಣೆ ವಿರುದ್ಧ ದನಿ ತಂದುಕೊಟ್ಟ ನಕ್ಸಲರನ್ನು ಬೆಂಬಲಿಸುವ ಆದಿವಾಸಿಗಳು-ಇವರನ್ನೆಲ್ಲ 'ರಿಲೀಫ್ ಕ್ಯಾಂಪ್'ಗಳೆಂಬ ಜೈಲುಗಳಿಗೆ ಅಟ್ಟಬೇಕೆಂಬುದು ಈ ಚೆಡ್ಡಿ ಪತ್ರಕರ್ತರ ಮನದಾಶೆ. ಮಲೆನಾಡ ಆದಿವಾಸಿಗಳನ್ನೇ ವಿಭಜಿಸಿ ಅವರ ಮಧ್ಯೆಯೇ ಕದನ ಏರ್ಪಡಿಸುವ ಕುಯುಕ್ತಿ ಇದು.

ಬಹುಶಃ ಸಂಪೂರ್ಣ ಚೆಡ್ಡಿ ಸರ್ಕಾರವಿದ್ದರೆ ಇಲ್ಲೂ 'ಸಲ್ವಾ ಜುಡಮ್' ಎಂಬ ಪ್ರಜಾಪ್ರಭುತ್ವ ವಿರೋಧಿ, ಸರ್ಕಾರಿ ಪ್ರಾಯೋಜಿತ ಗೂಂಡಾಗಿರಿ ಆರಂಭವಾಗಿರುತ್ತಿತ್ತೇನೋ?

ರಥಯಾತ್ರೆಯ ಕಾಲದಿಂದಲೂ ಸಂಘ ಪರಿವಾರ ಭಜರಂಗಿಗಳು ಮಾಡಿಕೊಂಡು ಬರುತ್ತಿರುವ ಗೂಂಡಾಗಿರಿಯೂ ಸಹ ಸಲ್ವಾ ಜುಡಮ್ ಅಲ್ಲವೇ? ಯಾಕೆಂದರೆ ಪ್ರಭುತ್ವದ ಗಾಢ ಆರಾಧಕರಾದ ಚೆಡ್ಡಿಗಳ ಹಿಂದೆ ಪ್ರಭುತ್ವದ ಸಹಾಯ ಹಸ್ತವಿದ್ದೇ ಇರುತ್ತಲ್ಲ!

-ಮಲ್ಲಿ

ವ್ಯವಸ್ಥೆಯಲ್ಲಿ ಹಾಗೆಯೇ ಹೆಚ್ಚುತ್ತಿದ್ದಂತೆ ಸಾಮಾಜಿಕ ಸಂಬಂಧಗಳು ಸೂಕ್ಷ್ಮವೂ, ಸಂಕೀರ್ಣವೂ ಆಗತೊಡಗುತ್ತವೆ. ಸಮಸ್ಯಾತ್ಮಕವೂ ಆಗತೊಡಗುತ್ತವೆ ಎಂಬುದಕ್ಕೆ ಬೆಂಗಳೂರು ವಿ.ವಿ.ಯಲ್ಲಿ ಇತ್ತೀಚೆಗೆ ನಡೆದ ಘಟನೆಯೇ ಸಾಕ್ಷಿ.

ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ರಾಮದಾಸ್ ರಾವ್ ಆಗಲಿ, ವನಮಾಲಾ ವಿಶ್ವನಾಥ್ ಆಗಲಿ ಜಾತಿವಾದಿಗಳೇನೂ ಅಲ್ಲ. ಕರ್ನಾಟಕದಲ್ಲಿ ನಡೆಯುವ ಪ್ರಗತಿಪರ ಹೋರಾಟಗಳಲ್ಲಿ ತೊಡಗಿಸಿಕೊಳ್ಳುವ ಇವರು ಸ್ವಲ್ಪ ಜಾಸ್ತಿಯಾಯಿತು ಎನ್ನಿಸುವಷ್ಟು ಉದಾರವಾದಿಗಳು. ಆದರೆ ಇಂಥವರ ಮೈ ಮರವಿನ ಕಾರಣಕ್ಕೆ ಕೆಲವೊಮ್ಮೆ ಅನಾಹುತಗಳೇ ಸಂಭವಿಸಿಬಿಡುತ್ತವೆ. ಅಂಥಾದ್ದೊಂದು ಅನಾಹುತ ಮೊನ್ನೆ ಸಂಭವಿಸಿದೆ.

'ಹೊಲೆಯರು ಬಂದರು' ಎಂಬುದನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿ ಅಂದರೆ ನೀವು ಏನು ಮಾಡುತ್ತೀರಿ...? ಕಷ್ಟ ಆಗುತ್ತೆ



ಬೆಂಗಳೂರು ವಿ.ವಿ:

ಬಾರ್ಬೇರಿಕ್ 'ಚಿಂತನೆಗಳು'

ಅಂತಿರಾ...? ಹೆಚ್ಚು ತಲೆ ಕೆಡಿಸ್ಕೋಬೆಡಿ. ಇಲ್ಲೊಬ್ಬ ಧೀರ ಮಾಡ್ತಾನೆ ನೋಡಿ... **'Barbaric bastards arrive...!'** ಹೊಲೆಯರು ಬಂದರು ಎಂಬುದನ್ನು 'ಬರ್ಬರವಾದ ಸೂಳೆ ಮಕ್ಕಳು ಬಂದರು' ಎಂಬುದಾಗಿ ತರ್ಜುಮೆ ಮಾಡಿದ ಧೀರ ವಿಶ್ವವಿದ್ಯಾಲಯವೊಂದರಲ್ಲಿ ಇಂಗ್ಲಿಷ್ ಎಂಎ ಓದುತ್ತಿರುವ 'ಪ್ರತಿಭಾನ್ವಿತ' ಭಾರತೀಯ ಎಂದರೆ ನಂಬುತ್ತೀರಾ...?



ಸುಧಾ

ಹೌದು. ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಏಪ್ರಿಲ್ 10ರ ಭಾಷಾಂತರ ತರಗತಿಯಲ್ಲಿ ಇಂಥದ್ದೊಂದು ವಾದ-ಅನುವಾದ ನಡೆದುಹೋಯಿತು.

ಅಂದು ನಡೆದದ್ದು ಏನು?

ಅಂದು ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ವನಮಾಲಾ ವಿಶ್ವನಾಥ್ Gender in translation ಎಂಬ ವಿಷಯದ ಬಗ್ಗೆ ಪಾಠ ಮಾಡುತ್ತಿದ್ದರು. ಇದ್ದಕ್ಕಿದ್ದಂಗೆ 'ಹೊಲೆಯರು ಬಂದರು' ಎಂಬುದನ್ನು ಇಂಗ್ಲಿಷ್‌ಗೆ ಟ್ರಾನ್ಸ್‌ಲೇಟ್ ಮಾಡಿ ಎಂದು ವಿದ್ಯಾರ್ಥಿಗಳಿಗೆ ಹೇಳಿದರು. ಆದರೆ ಅವರು ಕೇಳಿದ ಪ್ರಶ್ನೆಗೆ ಯಾರೂ ಉತ್ತರಿಸಲು ಮುಂದೆ ಬರಲಿಲ್ಲ. ತರಗತಿಯಲ್ಲಿದ್ದ ಹನ್ನೊಂದು ದಲಿತ ಹುಡುಗರು ಹಾಗೂ ಒಂದಿಬ್ಬರು ಹುಡುಗಿಯರಿಗೆ ಮುಜುಗರವಾಗಿ ತಲೆತಗ್ಗಿಸಿದರು. ಆಗ ಅದನ್ನೇ ಕಾಯ್ದಿದ್ದವನಂತೆ ಮೇಲೆದ್ದ ನರೇಂದ್ರ ಕುಳಗಟ್ಟೆ ಎಂಬ ಸ್ಟೂಡೆಂಟ್ "ಬಾರ್‌ಬಾರಿಕ್ ಬಾಸ್ಟರ್ಡ್ ಅರೈವ್" ಎಂದುಬಿಟ್ಟ. ಇದರಿಂದ ಅವಮಾನಿತರಾದ ಹೊಲೆಯ ಕಮ್ಯುನಿಟಿಯ ವಿದ್ಯಾರ್ಥಿಯೊಬ್ಬ "ಅದ್ಹೇಗಾಗುತ್ತೆ...? ಆ ರೀತಿ ಇದುವರೆಗೂ ಎಲ್ಲಿಯೂ ಅನುವಾದ ಮಾಡೇ ಇಲ್ಲ.. ಅದು ಒಂದು ಸಮುದಾಯದ ಹೆಸರಾದ್ದರಿಂದ ಆ ಪದವನ್ನು ಹಾಗೇ ಬಳಸಬೇಕು ಅಥವಾ **untouchables** ಎಂದು ಬಳಸಬೇಕು" ಎಂದು ಮುಲ್ಕರಾಜ್ ಆನಂದರ **untouchable** ಕಾದಂಬರಿಯ ಉದಾಹರಣೆ ಕೊಟ್ಟ. ಆತನ ಜೊತೆಗೆ ಇತರರೂ ಧ್ವನಿಗೂಡಿಸಿದರು. ವನಮಾಲಾ ಅವರಿಗೆ ಸಂದರ್ಭದ ಗಂಭೀರತೆ ಅರಿವಾಗಿ "ಈ ವಿಷ್ಯಾನ ಸುಮ್ನೆ ದೊಡ್ಡು ಮಾಡಬೇಡಿ. ಸಮಸ್ಯೆ ಆಗುತ್ತೆ..." ಅಂದರು. ಇದುವರೆಗೂ ತಮ್ಮ ಇಂಟರ್‌ನಲ್ ಮಾರ್ಕ್ಸ್‌ಗಳಲ್ಲಿ, ಅಟೆಂಡೆನ್ಸ್‌ಗಳಲ್ಲಿ ಪೆಟ್ಟು ತಿಂದಿದ್ದ ದಲಿತ ಹುಡುಗರು ಆಗ ಹೆದರಿ ಸುಮ್ಮನಾಗಿಬಿಟ್ಟರು.

ಈ ಸಮಸ್ಯೆ ದೊಡ್ಡದಾಗಲು ಕಾರಣ

ಆ ಘಟನೆ ನಡೆದ 20 ದಿನಗಳ ನಂತರ ಅಂದರೆ ಮೇ 2ನೇ ತಾರೀಖು ಕ್ಲಾಸ್‌ರೂಂನಲ್ಲಿ ಬ್ಯಾಗ್ ಇಟ್ಟು ಜಾಗ ರಿಸರ್ವ್ ಮಾಡಿಕೊಂಡು ಕುಳಿತಿದ್ದ ನರೇಂದ್ರನನ್ನು ಒಂದಿಬ್ಬರು ದಲಿತ ಹುಡುಗರು ಜಾಗ ಕೇಳಿದ್ದಾರೆ. ಆ ದುರಹಂಕಾರಿ ಹಿಂದಕ್ಕೆ ಕೈ ತೋರಿಸಿ 'ನಿಮ್ಮ ಜಾಗ ಅದು' ಅಂದಿದ್ದಾನೆ. ಶುರುವಾಗಿದೆ ಹೊಡೆದಾಟ. ಹಲವಾರು ದಿನಗಳಿಂದ ಕುದಿಯುತ್ತಿದ್ದ ದಲಿತ ಹುಡುಗರು ಅಂದು ಬೇಕಂತಲೇ ನರೇಂದ್ರನನ್ನು ಕೆಣಕಿದ್ದಾರೆ. ಯಾವಾಗ ಅವನು ಇಲ್ಲಿ ನೀವು ಕೂರಬಾರದು ಅಂದನೋ ಆಗಲೇ ಹಿಡಿದು ತದುಕಿದ್ದಾರೆ. ಅವನ ಜೊತೆಗಾರರೂ ಇವರ ಮೇಲೆ ಕೈ ಮಿಲಾಯಿಸಿದ್ದಾರೆ.

ಅಷ್ಟರಲ್ಲಿ ಸುದ್ದಿ ಕ್ಯಾಂಪಸ್ ತುಂಬಾ ಹರಡಿ ಇತರ ವಿಭಾಗದ ದಲಿತ ಹುಡುಗರೂ ಬಂದಿದ್ದಾರೆ. ನರೇಂದ್ರನಿಗೆ ಏಟುಗಳು ಹೆಚ್ಚಾಗತೊಡಗಿದಾಗ ಹುಡುಗಿಯೊಬ್ಬಳು ಅವನಿಗೆ ಏಟು ತಪ್ಪಿಸಲು ಮುಂದಾಗಿದ್ದಾಳೆ. ಗುಂಪು ಹೆಚ್ಚಾಗಿದ್ದ ದಲಿತ ಹುಡುಗರು ಆಕೆಯನ್ನು ಎಳೆದುಹಾಕಿ ಅವನಿಗೆ ಹೊಡೆಯುವುದನ್ನು ಮುಂದುವರಿಸಿದ್ದಾರೆ.

ಆಗ ಸುದ್ದಿ ಆದೇ ಕಟ್ಟಡದಲ್ಲಿರುವ ಗ್ರಾಮೀಣ ಅಭಿವೃದ್ಧಿ ವಿಭಾಗದ ಟಿ.ಎಚ್. ಮೂರ್ತಿ, ಇತಿಹಾಸ ವಿಭಾಗದ ಎಸ್. ಚಂದ್ರಶೇಖರ್, ಮುನಿರಾಜಪ್ಪ ಮತ್ತು ನಾಗರತ್ನಮ್ಮ ಅವರಿಗೆ ಗೊತ್ತಾಗಿ ಅವರೆಲ್ಲ ಓಡಿಬಂದು ಜಗಳ ಬಿಡಿಸಿದ್ದಾರೆ. ಇದಾದ 15 ನಿಮಿಷಗಳಲ್ಲಿ ವಿ.ಸಿ. ಇನ್‌ಚಾರ್ಜ್‌ನಲ್ಲಿರುವ ಸುಧಾ ಸ್ಥಳಕ್ಕೆ ಧಾವಿಸಿದ್ದಾರೆ. ಎಲ್ಲರನ್ನೂ ಸೇರಿಸಿ ಸಭೆ ನಡೆಸಿದ್ದಾರೆ. ದಲಿತ ಹುಡುಗರು ಹಿಂದೆ ಅನುವಾದ ತರಗತಿಯಲ್ಲಿ ನಡೆದ ಘಟನೆಯೇ ತಮ್ಮ ಕೋಪಕ್ಕೆ ಕಾರಣ; ಜಾತಿ ಅವಹೇಳನ ಮಾಡಿದ ತಪ್ಪಿಗೆ ನರೇಂದ್ರನಿಗೆ ಶಿಕ್ಷೆ ವಿಧಿಸಿ ಎಂದಿದ್ದಾರೆ.

ಹುಲಿಕುಂಟೆ ಮೂರ್ತಿ

ವಿಭಾಗದ ಮುಖ್ಯಸ್ಥೆ ವನಮಾಲಾ ವಿಶ್ವನಾಥ್ "ದಲಿತರ ಬಗ್ಗೆ ಪಾಠ ಮಾಡುವಾಗ ಈ ರೀತಿ ಪದಗಳು ಬರುವುದು ಸಹಜ, ಆಕಸ್ಮಿಕವಾಗಿ ನಡೆದಿದ್ದಕ್ಕೆ ಕ್ಷಮೆ ಕೇಳ್ತೀನಿ" ಅಂತ ಹೇಳಿದ್ದಾರೆ. ಈ ನರೇಂದ್ರ ಎಂಬ ಪ್ರಚಂಡ ಪ್ರತಿಭೆ "ನಾನು ಹಾಗೆ ಅನುವಾದ ಮಾಡಿದ್ದು ಸತ್ಯ; ಗೊತ್ತಾಗದೆ ತಪ್ಪಾಗಿದೆ, ಇನ್ನೊಂದ್ಸಲ ಅಂತಹ ತಪ್ಪಾಗುವುದಿಲ್ಲ ಕ್ಷಮಿಸಿ, ನನ್ನ ಭವಿಷ್ಯ ಹಾಳು ಮಾಡಬೇಡಿ" ಎಂದು ಗೋಗರೆದಿದ್ದಾನೆ.

ದಲಿತ ಹುಡುಗರು ತಮ್ಮ ದಶಕಗಳ ನೋವನ್ನು, ಇಂಗ್ಲಿಷ್ ವಿಭಾಗದ ಜಾತಿ ಅಸಮಾನತೆಯನ್ನು ಪ್ರಶ್ನಿಸಿ, ಮನವಿ ಪತ್ರ ಸಲ್ಲಿಸಿದ್ದಾರೆ. ಅಲ್ಲಿಗೆ ತಿಪ್ಪೆ ಸಾರಿಸಿದ ಸುಧಾ ಇನ್ನು ಯಾರೂ ತಲೆ ಕೆಡಿಸಿಕೊಳ್ಳುವುದು ಬೇಡ, ಇದಕ್ಕೆಲ್ಲಾ ಪೋಲೀಸರ ಅಗತ್ಯವಿಲ್ಲ, ಇನ್ನು ಮುಂದೆ ಇಂತಹ ತಪ್ಪಾಗದಂತೆ ನೋಡಿಕೊಳ್ಳೋಣ ಎಂದು ಸಭೆ ಮುಗಿಸಿದ್ದಾರೆ.

ಲೈಂಗಿಕ ದೌರ್ಜನ್ಯವೂ.... ದಲಿತರ ಅಟ್ರಾಸಿಟಿಯೂ....

ಆ ಘಟನೆಯಾದ ಎರಡು ಮೂರು ದಿನಕ್ಕೆ ದಲಿತ ಪ್ರತಿನಿಧಿಗಳೊಬ್ಬರೂ ಇಲ್ಲದ ಸಿಂಡಿಕೇಟ್ ಸಭೆಯೊಂದು ನಡೆದಿದೆ. ಆಗ ಸಿಂಡಿಕೇಟ್ ಸದಸ್ಯರ ಫೆಮಿನಿಸ್ಟ್ ಪ್ರಜ್ಞೆ ಜಾಗೃತವಾಗಿ ಆ ಹುಡುಗಿಯರನ್ನೂ ಕೇಳದೆ ದಲಿತ ಹುಡುಗರ ಮೇಲೆ ಲೈಂಗಿಕ ದೌರ್ಜನ್ಯದ ದೂರು ಕೊಟ್ಟಿದ್ದಾರೆ. ಘಟನೆ ನಡೆದ ಸ್ಥಳದಲ್ಲಿದ್ದ ಕೆಲ ಅಧ್ಯಾಪಕರು ಹುಡುಗಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿಲ್ಲ ಎಂದು ಲಿಖಿತ ವರದಿ ನೀಡಿದರೂ ಇಂತಹ ದೂರನ್ನು ದಾಖಲಿಸಿದ್ದಾರೆ.

ಇದು ದಲಿತ ಹುಡುಗರ ಕಿವಿಗೆ ಬೀಳುತ್ತಿದ್ದಂತೆ ಅವರೂ ವನಮಾಲಾ, ರಾಮದಾಸ್ ರಾವ್ ಸೇರಿದಂತೆ ಹನ್ನೊಂದು ಜನರ ಮೇಲೆ ದಲಿತ್ ಅಟ್ರಾಸಿಟಿ ದೂರು ನೀಡಿದ್ದಾರೆ. ಅಲ್ಲದೆ ವಿ.ಸಿ. ಕಚೇರಿ ಮುಂದೆ ಪ್ರತಿಭಟನೆ ನಡೆಸಿ, ದಲಿತ ವಿರೋಧಿ ನೀತಿಯನ್ನು ಖಂಡಿಸಿದ್ದಾರೆ. ನಡದೇ ಇಲ್ಲದ ಲೈಂಗಿಕ ದೌರ್ಜನ್ಯ ದೂರನ್ನೂ ಹಿಂದಕ್ಕೆ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ.

ತನಗೆ ಆ ಕೇಸಿನ ಬಗ್ಗೆ ಗೊತ್ತೇ ಇಲ್ಲ ಎಂದು ದಲಿತ ಪ್ರತಿಭಟನಾಕಾರರ ಮುಂದೆ ಹೇಳಿರುವ ಸುಧಾ... ಮತ್ತು ಸಹಾಯ್ ದೂರು ಹಿಂತೆಗೆದುಕೊಳ್ಳುತ್ತೇವೆಂದು ಭರವಸೆ ನೀಡಿದ್ದಾರೆ. ಅಲ್ಲಿಗೆ ಜಾತ್ಯತೀತ ರಾಷ್ಟ್ರವಾದ ಭವ್ಯಭಾರತದ ವಿಶ್ವವಿದ್ಯಾಲಯವೊಂದರ ಜಾತಿ ದಳ್ಳುರಿ ಸ್ವಲ್ಪ ಮಟ್ಟಿಗೆ ತಣ್ಣಗಾಗುತ್ತದೆ....

⇨

ದಲಿತ ಹುಡುಗರೇಕೆ ಎಲ್ಲದಕ್ಕೂ ರಂಪ ಮಾಡುತ್ತಾರೆ?

ಬೆಂಗಳೂರು ವಿವಿಯ ಎಲ್ಲಾ ರೀತಿಯ ಗಲಭೆಗಳಲ್ಲೂ ದಲಿತರಿರುತ್ತಾರೆ. ಇಲ್ಲಿನ ಹಾಸ್ಟೆಲ್‌ಗಳಲ್ಲಿರುವ ಪಿಎಚ್‌ಡಿ, ಸ್ನಾತಕೋತ್ತರ ಹುಡುಗರನ್ನು ಹೊರತುಪಡಿಸಿ ಯಾವುದೇ ಘಟನೆ ನಡೆಯುವುದಿಲ್ಲ.

ಇವರ ಆಕಾರ, ಭೌತಿಕ ಚಹರೇ ಕಂಡರೇ ಬೇರೆಯವರು ಹರ್ಟ್ ಆಗುತ್ತಾರೆ. ಇದಕ್ಕೆ ಕಾರಣಗಳನ್ನು ಭಾರತದಂತಹ ದೇಶದಲ್ಲಿ ಹುಡುಕುತ್ತಾ ಕೂರಬೇಕಾಗಿಲ್ಲ. ಈ ಹುಡುಗರೂ ಹಾಗೆ ನಡೆದುಕೊಳ್ಳಲು ಕಾರಣ ಇವರಿಗೆ ಬುದ್ಧಿ ಹೇಳುವ ದಲಿತ ಚಿಂತಕರಾಗಲೀ, ದಲಿತ ಸಂಘಟನೆಗಳ ನಾಯಕರಾಗಲೀ ಇತ್ತ ಕಡೆ ತಲೆಹಾಕದಿರುವುದು. ಅಂಬೇಡ್ಕರ್ ಹೆಸರಿಗೇ ಭಾವುಕರಾಗುವ ಇವರು ಅವರ ಚಿಂತನೆಗಳನ್ನಾಗಲಿ, ಸಂವಿಧಾನವನ್ನಾಗಲಿ ಓದುವುದಿಲ್ಲ. ಒಂದು ದಲಿತ ವ್ಯಕ್ತಿತ್ವಕ್ಕಿರಬೇಕಾದ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಜವಾಬ್ದಾರಿಯ ಅರಿವಿಲ್ಲ.

ದಲಿತರ ಪ್ರಾತಿನಿಧಿಕ ಸಂಕೇತದಂತಿರುವ ಸಿದ್ಧಲಿಂಗಯ್ಯನವರಾಗಲಿ, ಹುಡುಗರನ್ನು ಹಿಂದಿಟ್ಟುಕೊಂಡು ರಾಜಕೀಯ ಮಾಡುವ ಮೈಲಾರಪ್ಪನವರಾಗಲಿ, ನಾಗೇಶ್ ಬೆಟ್ಟಕೋಟೆಯವರಾಗಲಿ, ಸಾಮಾಜಿಕ ಚಳವಳಿಯ ಅರಿವಿರುವ ಟಿ.ಎಚ್. ಮೂರ್ತಿಯವರಾಗಲಿ ಈ ಹುಡುಗರನ್ನು ಒಂದು ಕಡೆ ಸೇರಿಸಿ, ಅಂಬೇಡ್ಕರ್, ಬುದ್ಧ, ಬಾಪುಲೆಯಂತವರ ವಿಚಾರಗಳನ್ನು ಬಿತ್ತಿ, ಅವರನ್ನು ಸರಿದಾರಿಗೆ ತರಬೇಕಾಗಿದೆ.

ಎಲ್ಲೂ ಇಲ್ಲದ್ದು ಇಲ್ಲೇ ಯಾಕೆ?

ಇಡೀ ಕ್ಯಾಂಪಸ್ಸಿನಲ್ಲಿ ಯಾವುದೇ ವಿಭಾಗದಲ್ಲೂ ನಡೆಯದ ಚಡ್ಡಿ ಚಟುವಟಿಕೆಗಳು ಇಂಗ್ಲಿಷ್ ವಿಭಾಗದಲ್ಲಿ ನಡೆಯುತ್ತವೆ. ದುರಂತವೆಂದರೆ ಕೋಮುವಾದ, ದಲಿತ, ಮಹಿಳೆ, ಲೈಂಗಿಕ ಅಲ್ಪಸಂಖ್ಯಾತರ ಕುರಿತು ಉಪಯುಕ್ತ ಪತ್ರಗಳಿರುವುದು ಇದೇ ಇಂಗ್ಲಿಷ್ ವಿಭಾಗದಲ್ಲೇ. ರಾಜ್ಯೋತ್ಸವ, ಗಾಂಧಿಜಯಂತಿ, ಅಂಬೇಡ್ಕರ್ ಜಯಂತಿಗಳಿಗೆ ತಲೆಕೆಡಿಸಿಕೊಳ್ಳದ ಇಂಗ್ಲಿಷ್ ಹುಡುಗರು ಬ್ಯಾನರ್ ಬರೆಸಿ, ಇಡೀ ಕ್ಯಾಂಪಸ್ಸಿಗೇ ಗೊತ್ತಾಗುವ ಹಾಗೆ ಶ್ರೀರಾಮನವಮಿ ಮಾಡಿ ಪಾನಕ ಹಂಚುತ್ತಾರೆ. ನಕ್ಸಲರ ಕುರಿತಾಗಿ 'ನಕ್ಸಲ್ ಪಿಡುಗು' ಎಂಬ ಸೆಮಿನಾರ್ ಮಾಡುತ್ತಾರೆ. ಅವನ್ಯಾರೋ ತಲೆಕೆಟ್ಟವನೊಬ್ಬ ಅಧ್ಯಾಪಕಿಗೇ ಪ್ರೇಮಪತ್ರ ಬರೆಯುತ್ತಾನೆ. ಬೇರೆ ವಿಭಾಗಗಳಲ್ಲಿ ಗೋಲ್ಡ್ ಮೆಡಲ್ ತೆಗೆದುಕೊಳ್ಳುವ ದಲಿತ ಹುಡುಗರು ಇಲ್ಲಿ ಶೇ. 50 ಅಂಕವನ್ನೂ ತೆಗೆಯಲು ಹೆಣಗಾಡುತ್ತಾರೆ. ಇದುವರೆಗೂ ಯಾಕೆ ಒಬ್ಬ ದಲಿತ ವಿದ್ಯಾರ್ಥಿಗೆ First class ಕೊಟ್ಟಿಲ್ಲ, ಒಬ್ಬರಿಗೂ Phd ಕೊಟ್ಟಿಲ್ಲ ಅಂತ ಕೇಳಿದರೆ ವಿಭಾಗದ ಮಹಾನುಭಾವರು 'ಯಾರೂ ಕೇಳಿಲ್ಲ ಅದಕ್ಕೇ ಕೊಟ್ಟಿಲ್ಲ' ಅನ್ನುತ್ತಾರೆ. ತರಗತಿಗಳಲ್ಲಿ ಹಿಂದಿನ ಬೆಂಚುಗಳಲ್ಲೇ ಕುಳಿತುಕೊಳ್ಳುವ 13 ದಲಿತ ವಿದ್ಯಾರ್ಥಿ/ನಿಗಳು ತಮಗೂ ತರಗತಿಗೂ ಸಂಬಂಧವೇ ಇಲ್ಲದಂತೆ ಇದ್ದುಬಿಡುತ್ತಾರೆ. ಯಾಕೆಂದರೆ ಅಧ್ಯಾಪಕರು ಪಾಠ ಮಾಡುವಾಗ ಇವರನ್ನು ಪ್ರಶ್ನೆ ಕೇಳುವುದಿರಲಿ, ಇವರ ಕಡೆಗೆ ನೋಡುವುದೂ ಇಲ್ಲ, ಇತರ ಸಮುದಾಯದ ವಿದ್ಯಾರ್ಥಿಗಳೊಟ್ಟಿಗೆ ಗಂಟೆಗಟ್ಟಲೆ ಗಹನ ಚರ್ಚೆಗೆ ತೊಡಗುವ ಅಧ್ಯಾಪಕರು ದಲಿತ ವಿದ್ಯಾರ್ಥಿಗಳು ಯಾವುದಾದರೂ ಸಮಸ್ಯೆಯ ಬಗ್ಗೆ ಕೇಳಿದರೆ, ತರಗತಿಯಲ್ಲಿ ಚರ್ಚಿಸುವಾಗ ಏನು ಮಾಡುತ್ತಿರುತ್ತೀರಿ ಎಂದು ಗದರಿಸಿ ಕಳಿಸುತ್ತಾರೆ.

ನಮ್ಮ ವೈಚಾರಿಕ ಪ್ರಜ್ಞೆಗೆ ವೈಜ್ಞಾನಿಕ ನಿಖರತೆಗಳಿಲ್ಲದಾಗ ಸಾಮಾಜಿಕ ಸಂವೇದನೆ ಸೂಕ್ಷ್ಮತೆಗಳಿಲ್ಲದ ವ್ಯಕ್ತಿತ್ವ ಎಡಬಿಡಂಗಿಯಾಗಿಬಿಡುತ್ತದೆ. ಅತಿಯಾದ ಉದಾರವಾದೀ ನಿಲುವುಗಳು ಕೊಂಚ ಎಡವಿದರೂ ಚಡ್ಡಿಯಾಗಿಬಿಡುವ ಅಪಾಯವನ್ನು ಗಾಂಧಿವಾದಿಗಳೂ ಗಮನಿಸಬೇಕಿದೆ. ಕೋಮುವಾದವನ್ನು ಹಾಗೂ ಮಹಿಳಾ ಸಂವೇದನೆಯನ್ನು ಹೊರತುಪಡಿಸಿದ ದಲಿತ ಚಿಂತನೆ, ದಲಿತ ಚಿಂತನೆಯನ್ನು ಹೊರತುಪಡಿಸಿದ ಮಹಿಳಾವಾದಗಳು ಅಪೂರ್ಣ. ಇದು ವನಮಾಲಾರಿಗಾಗಲೀ, ರಾಮದಾಸ್‌ಗಾಗಲೀ, ವಿವಿಯ ದಲಿತ ಚಿಂತಕರಿಗಾಗಲಿ ತಿಳಿದಿಲ್ಲವೆಂದೇನೂ ಅಲ್ಲ; ಆದರೂ ಇಂತಹ ದುರ್ಘಟನೆಗಳು ನಡೆಯುತ್ತವೆ ಅಂದರೆ ಏನರ್ಥ?



ದಲಿತ ವಿದ್ಯಾರ್ಥಿಗಳ ಪ್ರತಿಭಟನೆ

ಪ್ರಕರಣ ಎತ್ತುವ ಕೆಲವು ಮೂಲಭೂತ ಪ್ರಶ್ನೆಗಳು

ಬೆಂಗಳೂರು ವಿಶ್ವವಿದ್ಯಾಲಯದ ಈ ಪ್ರಕರಣ ತನ್ನೊಳಗೆ ಸಂಕೀರ್ಣವಾದ ಹಲವಾರು ವಿಷಯಗಳನ್ನು ಹೊತ್ತುಕೊಂಡಿದೆ.

ಮೊದಲನೆಯದಾಗಿ ದಲಿತ ಚಿಂತನೆ ಎಂಬ ಸಂವೇದನಾಶೀಲ ಕೋರ್ಸನ್ನು ಪ್ರಾರಂಭಿಸಿದ ರಾಮದಾಸ್‌ರಾವ್ ಮತ್ತು ವನಮಾಲಾ ವಿಶ್ವನಾಥ್‌ರ ಕಾಳಜಿ ಸಾಮಾಜಿಕ ನ್ಯಾಯದ ಪರವಾದ ಕಾಳಜಿಯೇ.

ಹಾಗಿದ್ದರೂ ಈ ಕೋರ್ಸ್ ತಮ್ಮ ಕ್ಲಾಸ್ ರೂಮಿನೊಳಗೆ ಕುಳಿತಿರುವ ದಲಿತ ವಿದ್ಯಾರ್ಥಿಗಳ ಮೇಲೆ ಯಾವ ರೀತಿ ಪ್ರಭಾವ ಬೀರುತ್ತಿದೆ ಎಂಬ ಬಗ್ಗೆ ಅವರೆಷ್ಟು ಕಾಳಜಿ ವಹಿಸಿದರು? ತಮ್ಮ ಕ್ಲಾಸ್ ರೂಮಿನೊಳಗೆ ಈ ಭಾರತೀಯ ಸಮಾಜದ ತಾರತಮ್ಯ ಭ್ರೂಣರೂಪದಲ್ಲಿ ಅವತರಿಸುತ್ತಿರುವುದು ಸಂವೇದನಾಶೀಲರಾಗಿದ್ದರೂ ಅವರ ಗಮನಕ್ಕೇಕೆ ಬರಲಿಲ್ಲ? ಇದು ಈ ಇಬ್ಬರು ವ್ಯಕ್ತಿಗಳ ಪ್ರಗತಿಪರತೆಯ ಮಿತಿಯೋ?. ಅಥವಾ ಸಾಮಾಜಿಕ ಅಪಮಾನದ ಅನುಭವವಿಲ್ಲದೆ ಕೇವಲ ನ್ಯಾಯಪರತೆಯಿಂದ ಮಾತ್ರ ಸ್ಪಂದಿಸುವ ತಿಳುವಳಿಕೆಯ ಮಿತಿಯೋ?

ಎರಡನೆಯದಾಗಿ ದಲಿತರ ಪ್ರಗತಿಯ ಬಗ್ಗೆ ಎಷ್ಟೇ ಕಾಳಜಿ ವ್ಯಕ್ತಪಡಿಸಿದ್ದರೂ ಹೊರಗೆ ಎಷ್ಟೇ ತ್ಯಾಗಶೀಲ ಹೋರಾಟಗಳಲ್ಲಿ ತೊಡಗಿಕೊಂಡಿದ್ದರೂ, ಪರೀಕ್ಷೆಯಲ್ಲಿ ಮಾರ್ಕ್ಸ್ ನೀಡುವ ಪ್ರಶ್ನೆ ಬಂದಾಗ ಬಹುಪಾಲು ಪ್ರಗತಿಪರ ಉಪಾಧ್ಯಾಯರುಗಳೂ ಏಕೆ ಮೆರಿಟ್‌ವಾದಿಗಳಾಗಿ ಬಿಡುತ್ತಾರೆ? 53% ಅಂಕ ನೀಡುವಷ್ಟು ಪ್ರಗತಿಪರರಾಗಿರುವ ಪ್ರೊಫೆಸರಿಗೆ 55% ಕೊಡದಿದ್ದರೆ ಆ ದಲಿತ ವಿದ್ಯಾರ್ಥಿಗೆ ಎರಡು ವರ್ಷದ ಓದು ಏನೂ ಪ್ರಯೋಜನಕ್ಕೆ ಬರುವುದಿಲ್ಲವೆಂದು ಗೊತ್ತಿರುತ್ತದೆ. ಹಾಗಿದ್ದರೂ ಅಲ್ಲಿ ಮೆರಿಟ್‌ವಾದ ಸಾಮಾಜಿಕ ನ್ಯಾಯವನ್ನು ಸೋಲಿಸಿ ದಲಿತ ವಿದ್ಯಾರ್ಥಿಗಳನ್ನು ಆಕ್ರೋಶಕ್ಕೀಡು ಮಾಡುತ್ತದೆ.

ಪ್ರಗತಿಪರರ ಈ ಮೆರಿಟ್‌ವಾದ ಒಟ್ಟಾರೆ ಸಾಮಾಜಿಕ ನ್ಯಾಯದ ಬಗ್ಗೆ ಅವರ ತಿಳವಳಿಕೆಯ ಮಿತಿಯಿಂದ ಹುಟ್ಟುತ್ತದೋ? ಅಥವಾ ಅಲ್ಲಿ ಬುದ್ಧಿವಂತ ವಿದ್ಯಾರ್ಥಿಗೆ ಅನ್ಯಾಯವಾಗುತ್ತದೆ ಎಂಬ ಮೇಲ್ಜಾತಿ ಮೆರಿಟ್ ಪರ ಸಾಮಾಜಿಕ ನ್ಯಾಯದ ತಿಳುವಳಿಕೆಯಿಂದ ಹುಟ್ಟುತ್ತದೋ?

ಮೂರನೆಯದಾಗಿ ಹಾಗೂ ಅತಿಮುಖ್ಯವಾಗಿ ಬೆಂಗಳೂರು ವಿವಿಯ ಸ್ವಹಿತಾಸಕ್ತ ಸ್ವಾರ್ಥಿ ದಲಿತ ವಿದ್ಯಾರ್ಥಿ ಹಾಗೂ ಬೋಧಕ ಗುಂಪು ಒಟ್ಟಾರೆ ದಲಿತ ರಾಜಕಾರಣದ ಸಮಾಜಮುಖಿ ಚಲನೆಯನ್ನು ಸ್ವಾರ್ಥ ಕೇಂದ್ರಿತ ನೆಲೆಯತ್ತ ಕೊಂಡೊಯ್ಯುತ್ತಿರುವ ಅಪಾಯ. ಯೂನಿವರ್ಸಿಟಿಯವರೆಗೆ ಬರುವ ದಲಿತ ಯುವ ಜನತೆಯೇ ದಲಿತ ಸಮುದಾಯದ ಆಶಾಕಿರಣ. ಈ ಹಿಂದೆ ಕರ್ನಾಟಕದಲ್ಲಿ ರ್‍ಯಾಡಿಕಲ್ ದಲಿತ ಚಳವಳಿ ಹುಟ್ಟಿದ್ದು ಇದೇ ವರ್ಗದಿಂದಲೇ. ಹಾಗೆ ನೋಡಿದರೆ ಯಾವುದೇ ಸಮುದಾಯದಲ್ಲಿ ಮೂಡಿಬರುವ ಮಧ್ಯಮ ವರ್ಗವೇ ಆ ಸಮುದಾಯದ ಉನ್ನತಿಗೆ ಶ್ರಮಿಸಿದಾಗ ಅವು ಸಾಮಾಜಿಕವಾಗಿ ಮುನ್ನಡೆ ಸಾಧಿಸಿವೆ.

ಆದರೆ ದಲಿತ ಮಧ್ಯಮವರ್ಗ ಈ ಕನ್ಸ್ಯೂಮರಿಸ್ಟ್ ಯುಗದಲ್ಲಿ ಆ ಜವಾಬ್ದಾರಿಯಿಂದ ನುಣುಚಿಕೊಂಡು ಸಾಮುದಾಯಿಕ ವಿಮೋಚನೆಗೆ ಮುಂದಾಗದೆ ವ್ಯಕ್ತಿಗತ ವಿಮೋಚನೆಗೆ ಮಾತ್ರ ಮುಂದಾಗುವ ಪಲಾಯನ ಮಾರ್ಗ ಅನುಸರಿಸುತ್ತಿದೆ. ಈ ಪಲಾಯನವಾದವೇ ತಮ್ಮನ್ನು ದಲಿತರೆಂದು ಗುರುತಿಸುವುದನ್ನು ಹೀನಾಯವಾದದ್ದೆಂದು ಭಾವಿಸುವ, ಅಥವಾ ಕೆಲವರ ಪಟ್ಟಭದ್ರ ಹಿತಾಸಕ್ತಿಗೆ ಇಡೀ ಸಮುದಾಯದ ಹಿತಾಸಕ್ತಿಯನ್ನು ಬಲಿಕೊಡುವ ವಿನಾಶಕಾರಿ ರಾಜಕಾರಣಕ್ಕೂ ದಾರಿ ಮಾಡಿಕೊಡುತ್ತಿದೆ. ಇದು ಅತ್ಯಂತ ಅಪಾಯಕಾರಿ.

ನಾಲ್ಕನೆಯದಾಗಿ ಕೆಲವರಾದರೂ ದಲಿತರ ಮೇಲ್ಮುಖ ಚಲನೆಗೆ ವಾಹಕವಾಗಿದ್ದ ಪ್ರಭುತ್ವ ಕ್ರಮೇಣ ಆ ಜವಾಬ್ದಾರಿಯಿಂದ ಹಿಂದೆ ಸರಿಯುತ್ತಿರುವುದು ಹಾಗೂ ಖಾಸಗಿ ಕ್ಷೇತ್ರ ದಲಿತ ಸಮುದಾಯವನ್ನು ಹೊರಗಿಟ್ಟಿರುವುದು. ದಲಿತರ ತಥಾಕಥಿತ ರೌಡಿಸಂನ ಹಿಂದೆ ಈ ಅನಾಥ ಪ್ರಜ್ಞೆ ಇದೆ. ಈ ಎಲ್ಲಾ ಆಯಾಮಗಳನ್ನು ಅರ್ಥಮಾಡಿಕೊಳ್ಳದೆ ಈ ಪ್ರಕರಣದ ತುರ್ತು ಬಗ್ಗೆ ತೀರ್ಮಾನಕ್ಕೆ ಬರುವುದು ಅವಿವೇಕ. ■

⇨

ಇಂಗ್ಲಿಷ್‌ನಲ್ಲಿ ಹೊಲೆಯರು ಬರಲ್ಲವಾ...?

ಜಾಗತಿಕ ಭಾಷಾಂತರ ಅಧ್ಯಯನದಲ್ಲಿ ಕೆಲವು ಸಮಾಜೋ ಸಾಂಸ್ಕೃತಿಕ ನುಡಿಕಟ್ಟುಗಳನ್ನು, ಪ್ರಾದೇಶಿಕ ವಿಶೇಷ ಶಬ್ದಗಳನ್ನು ಅನುವಾದ ಮಾಡುವಾಗ ಎದುರಾಗುವ ಸಮಸ್ಯೆಗಳ ಅಧ್ಯಯನಕ್ಕೆಂದೇ 'ಭಾಷಾಂತರ ಸಮಸ್ಯೆಗಳು' ಎಂಬ ವಿಭಾಗವಿದೆ. ಹೊಲೆಯರು ಎಂಬ ರೀತಿಯ ಪದವನ್ನು ಯಾಕೆ ಅಷ್ಟು ಸುಲಭವಾಗಿ ಅನುವಾದ ಮಾಡಲಾಗುವುದಿಲ್ಲ; ಮತ್ತು ಯಾಕೆ ಬಾಯಿಗೆ ಬಂದಂತೆ ಅನುವಾದ ಮಾಡಬಾರದು ಎಂಬುದಕ್ಕೆ ಪ್ರಪಂಚದ ಎಲ್ಲಾ ಭಾಷೆಗಳಲ್ಲಿಯೂ ಮಿಲಿಯ ಪುಟಗಟ್ಟಲೆ ವಿವರಣೆ ಸಿಗುತ್ತದೆ. "ಇದು ಭಾಷಾಧ್ಯಯನದ ವಿಭಾಗವೊಂದರ ಮುಖ್ಯಸ್ಥೆಯಾಗಿರುವ ವನಮಾಲಾ ಮೇಡಂಗೆ ಗೊತ್ತಿರಲಿಲ್ಲವೇ? ಗೊತ್ತಿದ್ದರೂ ತಮ್ಮ ಪೆಟ್ ಸ್ಟೂಡೆಂಟ್ ನರೇಂದ್ರನೆಂಬ ಲಫಂಗಾ ಅನುವಾದ ಮಾಡಿದನೆಂಬ ಕಾರಣಕ್ಕೆ ಒಪ್ಪಿಕೊಂಡರಾ..." ಎಂದು ಅನುಮಾನ ಪಡುತ್ತಾರೆ ದಲಿತ ಹುಡುಗರು.

ಈ ನರೇಂದ್ರನೆಂಬ ಸಕಲೇಶಪುರದ ನಾಲಾಯಕ್ ಬಾಲಕ ವಿಭಾಗಕ್ಕೆ ಸೇರಿದಾಗ ತಾನು ರವಿಬೆಳಗೆರೆಯ ದೋಸ್ತ್ ಎಂದು ರೀಲುಬಿಟ್ಟು, ಓ ಮನಸ್ಸೇ ಪತ್ರಿಕೆಯ ಲೇಖನವೊಂದನ್ನು ತನ್ನದೇ ಎಂದು ಎಲ್ಲರಿಗೂ ತೋರಿಸುತ್ತಾ ವನಮಾಲಾ ಮೇಡಂಗೆ ಹತ್ತಿರವಾದ. ಅಲ್ಲದೇ ತನ್ನಂಥ ಹುಳುಕು ಮನಸ್ಸಿನವರನ್ನೆಲ್ಲಾ ಗುಂಪುಕಟ್ಟಿ ತನ್ನ ಜಾತ್ಯಾಂಧ ಪ್ರಜ್ಞೆಯನ್ನು ಹಿಗ್ಗಿಸಿಕೊಂಡ. ಇಂಥವನ ಮಂಗಾಟಗಳಿಗೆ ಎಲ್ಲಾ ಅಧ್ಯಾಪಕರೂ ಸೊಪ್ಪು ಹಾಕುತ್ತಿದ್ದುದು ಸಹಜವಾಗಿ ಇತರ ವಿದ್ಯಾರ್ಥಿಗಳಲ್ಲಿ ಅಸಹನೆ ಮೂಡಿಸಿತ್ತು.

ವನಮಾಲಾ ಪಾಠ ಮಾಡುತ್ತಿದ್ದ **Gender in Translation** ಎಂಬ ವಿಷಯವಿರುವುದು 4ನೇ ಸೆಮಿಸ್ಟರ್‌ನಲ್ಲಿ. ಇವರು ಪತ್ರಿಕೆಗಳಿಗೆ ಕಾರಣ ಕೊಡಲು ಉದಾಹರಿಸಿದ ಸಿದ್ಧಲಿಂಗಯ್ಯನವರ 'ಊರುಕೇರಿ' ಇರುವುದು **dalit writings** ಎಂಬ ವಿಷಯ ಇರುವ 3ನೇ ಸೆಮಿಸ್ಟರ್‌ನಲ್ಲಿ. ಇಷ್ಟಕ್ಕೂ ಸಿದ್ಧಲಿಂಗಯ್ಯನವರ ಸಮಗ್ರ ಸಾಹಿತ್ಯವನ್ನು ಜಾಲಾಡಿದರೂ ಅಲ್ಲೆಲ್ಲೂ 'ಹೊಲೆಯರು ಬಂದರು' ಎಂಬ ಪದವೇ ಇಲ್ಲ.

"ನಾವು ಯಾವುದನ್ನು ಮರೆಯಬೇಕು ಎಂದು ಪ್ರಯತ್ನಿಸುತ್ತೇವೋ ಅದನ್ನೇ ಅನಿವಾರ್ಯವಾಗಿ ನಮ್ಮ ಮನಸ್ಸುಗಳಿಗೆ ತುರುಕುತ್ತಿದ್ದಾರೆ" ಎಂದು ಕಣ್ಣೀರಿಡುತ್ತಾರೆ ದಲಿತ ವಿದ್ಯಾರ್ಥಿಗಳು. ಇವರ ನೋವಿಗಾಗಲಿ, ಮೇಲು ಜಾತಿ ವಿದ್ಯಾರ್ಥಿಗಳ ಧಿಮಾಕಿಗಾಗಲಿ ಕೊನೆ ಎಂದು? ■

ಯುವ ಜನತೆಗೆ ನಿಮ್ಮ ಸಂದೇಶ ಹೇಳಿ ಸಾರ್



ಮನುಷ್ಯ ದೀರ್ಘಾವಧಿಯಲ್ಲಿ ಎಂತಹ ಸ್ಥಿತಿಗೂ ಹೊಂದಿಕೊಂಡು ಹೋಗುತ್ತಾನಂತಲ್ಲಾ, ಹಾಗೆಯೇ ಈ ನಮ್ಮ ಕರುನಾಡು ಕುಮಾರಸ್ವಾಮಿ ಅಲ್ಲ, ಅಜ್ಞಾತ ದೇವೇಗೌಡರ ಕೈವಾಡದ ಸರ್ಕಾರಕ್ಕೆ ತೀವ್ರವಾಗಿಯೇ ಸ್ಪಂದಿಸಿಕೊಂಡು ಹೊಂದಿಕೊಂಡು ಹೋಗುತ್ತಿರಬೇಕಾದರೆ, ಗರ ಹೊಡೆದಂತಾಗಿರುವ ಕಾಂಗ್ರೆಸ್‌ಗಳು; ದಿಕ್ಕು ತಪ್ಪಿದಂತಿರುವ ಸಿದ್ಧರಾಮಯ್ಯನ ಸ್ನೇಹಿತರು; ಅನ್ನಲಾಗದೆ ಅನುಭವಿಸಲಾಗದೆ ನರಳುತ್ತಿರುವ ಜೆಡಿಎಸ್‌ನ ಮಂತ್ರಿಗಳಲ್ಲದ ಶಾಸಕರು; ಸರಿಯಾದ ಸಮಯಕ್ಕಾಗಿ ಕಾದಿರುವ ಎಡೂರಪ್ಪನ ಎದುರಾಳಿಗಳು; ಹೀಗೆ ಪಂಚರಂಗಿ ಲೀಡರುಗಳಿಂದ ಕಂಗೊಳಿಸುತ್ತಿರುವ ಈ ಬೆರಕೆ ಸೊಪ್ಪಿನ ಸರ್ಕಾರಕ್ಕೆ ಸರಿಯಾಗಿ ನೂರು ದಿನ ಸಂಭವಿಸಿದವಂತಲ್ಲಾ, ಇಂತಹ ಸಂತೋಷದ ಗಳಿಗೆಯಲ್ಲಿ ಕುಮಾರಸ್ವಾಮಿಗಳನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತು. ಹೀಗೆ ಅನ್ನಿಸಿದ್ದಕ್ಕೂ ಮುಖ್ಯಮಂತ್ರಿಗಳು ಬನಶಂಕರಿ ರಸ್ತೆಯ ಪಿಇಎಸ್ ಕಾಲೇಜಿನ ಎದುರು ಸಿಕ್ಕಿದ್ದಕ್ಕೂ ಒಂದೇ ಆಯ್ತು, ನಮ್ಮ ಸಂಪಾದಕರ ಕಾರಿಳಿದು ಮುಖ್ಯಮಂತ್ರಿಗಳ ಕಾರಿನತ್ತ ಓಡಿದರೆ, ನನ್ನನು ಕಾಲೇಜಿನ ಕಾರ್ಯಕ್ರಮದ ಮುಖ್ಯಸ್ಥನೆಂದು ಪರಿಗಣಿಸಿದ ಪೋಲೀಸರು, ಕುಮಾರಣ್ಣನ ಕಾರಿನತ್ತ ಹೋಗಲು ಅವಕಾಶ ಕೊಟ್ಟೇಬಿಟ್ಟರಲ್ಲಾ, ನೋಡಿದ ಕೂಡಲೇ "ಹಲೋ" ಎಂದು ಕೈ ಚಾಚಿದ ಕುಮಾರಸ್ವಾಮಿ "ಬನ್ನಿ ಯಾಹೂ ಅವರೆ" ಎಂದು ಕಾರಿನೊಳಕ್ಕೆ ಎಳೆದುಕೊಂಡರು.

"ಒಂದೈದು ನಿಮಿಷ ಮಾತಾಡಬೇಕಿತ್ತಲ್ಲ ಸಾರ್."

"ಏನು ವಿಷಯ ಮಾತಾಡಿ?"

"ಅಂತೂ ನೂರು ದಿವಸನ ತುಂಬಿಸೇ ಬಿಟ್ಟಿರಲ್ಲ ಸಾರ್."

"ಹೌದು. ನೋಡಿ ಮೊನ್ನೆ ಮೊನ್ನೆ ಆದಂಗಿದೆ. ನಾವೆಲ್ಲಾ ಜಮೀರ್ ಅಹಮದ್ ಬಸ್ಸಿನಲ್ಲಿ ಹೋದದ್ದು, ರೆಸಾರ್ಟ್ಸ್‌ಗಳಲೆಲ್ಲಾ ತಿರುಗಿದ್ದು, ಆ ನಂತರ ಕೊಲ್ಲೂರಿಗೆ ಹೋಗಿದ್ದು, ಅಲ್ಲಿಂದ ಬಂದು ಪ್ರಮಾಣ ವಚನ ತಗೊಂಡಿದ್ದು... ಎಲ್ಲಾ ಮೊನ್ನೆ ಮೊನ್ನೆ ನಡೆದಂಗದೆ. ನೋಡಿದ್ರೆ ನೂರು ದಿನ ಆಗೇ ಹೋಯ್ತು."



"ಈ ನೂರು ದಿನದಲ್ಲಿ ನೀವು ಮಾಡಿದ ಬಹುಮುಖ್ಯ ಸಾಧನೆ?"

"ಅದನ್ನ ಈ ಐದು ನಿಮಿಷದಲ್ಲಿ ಹೇಳಕ್ಕಾಗಲ್ಲ, ನಾನು ದಿನದಲ್ಲಿ ಕೇವಲ ಮೂರು ಗಂಟೆ ಮಾತ್ರ ನಿದ್ರೆ ಮಾಡ್ತಿನಿ. ಇನ್ನುಳಿದ 21 ಗಂಟೆನೂ ಸಾಧನೆ ಮಾಡ್ತಯಿರತಿನಿ."

"ಮೂರು ಗಂಟೆ ಯಾಕ್ ಸಾರ್ ನಿದ್ರೆ ಮಾಡ್ತಿರಿ? ಮನುಷ್ಯ ಆರೋಗ್ಯವಾಗಿ ಇರಬೇಕಾದ್ರೆ ಕನಿಷ್ಠ ಐದು ಗಂಟೆನಾದ್ರು ನಿದ್ರೆ ಮಾಡಬೇಕಲ್ಲವ?"

"ನೀವೇಳದು ನಿಜ. ಸಾಮಾನ್ಯವಾಗಿ ನಾನು ಹೊರಗಡೆ ಟೂರೋಗ್ತಿನಿ, ಅಲ್ಲಿಂದ ಬಂದು ತಂದೆಯವರತ್ರ ಮಾತಾಡೋದಿರುತ್ತೆ, ಅವರು ನನಗಾಗಿ ಕಾಯ್ತಾಯಿರತರೆ. ಅವ್ರುರಿಗಂತೂ ನಿದ್ರೆನೆ ಬರಲ್ಲ."

"ಅಂದ್ರೆ ಗೌಡ್ರು ಆಡಳಿತದಲ್ಲಿ ಸಕ್ರಿಯವಾಗಿದ್ದಾರ?"

"ಹಾಗೇನಿಲ್ಲ, ಕೆಲವು ಸಲಹೆ ಕೊಡ್ತರೆ. ಅದನ್ನು ನಾವು ಚಾಚೂತಪ್ಪದೆ ಪಾಲಿಸಬೇಕಾಗುತ್ತೆ, ಇಲ್ಲ ಅಂದ್ರೆ ಬೇಜಾರು ಮಾಡಿಕೊಳ್ತರೆ. ನಾವು ಮೊದಲಿಂದಲೂ ತಂದೆಯವರು ಹೇಳಿದಂಗೇ ನಡಕೊಂಡು ಬಂದಿದ್ದೀವಿ."

"ಈ ಬಿಜೆಪಿ ಜೊತೆ ಹೋಗಿ ಸರ್ಕಾರ ಮಾಡದ್ದೂ ಗೌಡ್ರೇ ಹೇಳಿದ್ದಾ ಸಾರ್?"

"ಅದೊಂದಿಲ್ಲ ನೋಡಿ; ಆ ವಿಷಯದಲ್ಲಿ ನಾನು ಸ್ವತಂತ್ರವಾಗಿ ತೀರ್ಮಾನ ತಗೊಂಡೆ."

"ಮೊನ್ನೆ ಅಧಿಕಾರಿಗಳ ವರ್ಗಾವಣೆ ಮಾಡಿದರಲ್ಲಾ ಸಾರ್, ಅದು ಮಾತ್ರ ಒಳ್ಳೆ ಕಾರ್ಯಾಚರಣೆ. ಅದೊಂದು ವಿಷಯದಲ್ಲಿ ಬಾಲಕೃಷ್ಣೇಗೌಡರು, ದೇವೇಗೌಡರನ್ನ ಜನ ತುಂಬ ಮೆಚ್ಚಿಕೊಂಡ್ರು."

"ನಿಜ ಹೇಳಬೇಕು ಅಂದ್ರೆ ನಮ್ಮ ಬ್ರದರ್ಸ್ ನನ್ನ ಕೆಲಸನ ಸುಲಭ ಮಾಡಿದಾರೆ. ಇಲ್ಲ ಅಂದ್ರೆ ಕೇವಲ ಶಾಸಕ ಆಗಿದ್ದ ನಾನು ಆಡಳಿತ ನಡೆಸೋಕಾಗ್ತಿತ್ತ?"

"ಇನ್ನೊಂದು ವಿಷಯ ಸಾರ್, ನೀವು ಕಾಂಗ್ರೆಸ್ ಜೊತೆ ಇದ್ದಾಗ ನಿಗಮ ಮಂಡಲಿ, ಸಂಪುಟ ವಿಸ್ತರಣೆ ಅಂತ ಕೂಗಾಡತಿದ್ರಿ, ಈಗ್ಯಾಕೆ ಸುಮ್ಮನಿದ್ದೀರಿ?"

"ಮಾಡತಿದ್ದೆ ಕಂಡ್ರಿ. ಡಾ. ರಾಜ್‌ಕುಮಾರ್ ತೀರೋದ್ರು, ಅದೊಂದು ದೊಡ್ಡ ಗಂಡಾಂತರ ಒದಗಿ ಬರೋ ಅಂತ ಪರಿಸ್ಥಿತಿ ನಿರ್ಮಾಣ ಆಯ್ತು."

"ಅದನ್ನ ಚೆನ್ನಾಗಿ ನಿಭಾಯಿಸಿದ್ರಿ ಸಾರ್."

"ಹೌದು ಕಂಡ್ರಿ, ಇಲ್ಲ ಅಂದ್ರೆ ಇನ್ನು ಬೇಕಾದಷ್ಟು ಜನಗಳು ಸತ್ತೋಗೋರು. ನಾನಾಗೊವತ್ತಿಗೆ ಕೇವಲ ಎಂಟು ಜನ ಸಾಯೋದಿಕ್ಕೆ ಅವಕಾಶ ಮಾಡಿಕೊಡಬೇಕಾಯ್ತು, ಮತ್ತೆ ಏನಾದ್ರು ಮಾಡಣ ಅಂದ್ರೆ ಆ ರಾಮಚಂದ್ರಾಪುರದ ಮಠದ ರಾಮಸತ್ರ ಬಂತು. ಅದೂ ಮುಗಿತು. ಸೀಇಟಿ ಗೊಂದಲ, ಲಾಭಾದಾಯಕ ಹುದ್ದೆ ಪ್ರಶ್ನೆ, ಆನಂತರ ವಿಧಾನ ಪರಿಷತ್ ಚುನಾವಣೆ, ಹೀಗೆ ಏನೇನೊ ಅಡ್ಡಿ ಆತಂಕ ಬರ್‍ತಾಯಿವೆ. ಇವನ್ನೆಲ್ಲಾ ನಿಭಾಯಿಸಿಕೊಂಡು ಮಂತ್ರಿ ಮಂಡಲ ವಿಸ್ತರಣೆ ಮಾಡೇಬಿಡಣ ಅಂದ್ರೆ ಆ ಶೋಭಾ ಕರಂದ್ಲಾಜೆ ವಿಷಯ ಮುಂದಿಟ್ಟುಕೊಂಡು ಬಿಜೆಪಿಗಳು ತರ್ಲೆ ತಗದವ್ರುರೆ."

"ಎಂ.ಪಿ. ಪ್ರಕಾಶ್ ಮಂತ್ರಿ ಮಾಡ್ತಿರ ಸಾರ್?"

"ಆ ವಿಷಯದಲ್ಲಿ ತಂದೆಯವರು ಹ್ಯಾಗೇಳ್ತರೆ ಹಾಗೆ."

"ಪ್ರಕಾಶ್ ನಿಮ್ಮ ಜೊತೆಯಿದ್ರೆ ಒಳ್ಳೆದಲ್ಲವ ಸಾರ್?"

"ಹೌದು ಕಂಡ್ರಿ. ಪರವಾಗಿಲ್ಲ ಚನ್ನಾಗಿ ತಿಳಕಂಡವ್ರುರೆ ಅಂತ ನಮ್ಮ ಚಲುವರಾಯಸ್ವಾಮಿ ಹೇಳತಿದ್ರ, ಏನು ಮಾಡೋದೇಳಿ."

"ನಾಟಕ ಸಿನುಮದಲ್ಲೂ ಪಾರ್ಟು ಮಾಡ್ತರೆ ಅವರು."

"ಹೌದು ಕೇಳಿದ್ದೀನಿ. ಮುಂದೆ ನಾನು ಸಿನುಮ ನಿರ್ಮಾಣ ಮಾಡಿದ್ರೆ ಅವರನ್ನ ಸೇರಿಸಿಕೊಂಡು ಒಂದು ಪಾರ್ಟು ಕೊಡ್ತಿನಿ. ಪಾಪ ನಮ್ಮಿಂದ ಅವರಿಗೆ ಅನ್ಯಾಯ ಆಗಿದೆ ಅಂತ ಕೆಲವು ಲಿಂಗಾಯಿತ ಗೆಳೆಯರು ಹೇಳ್ತಯಿರತರೆ."

"ನೀವು ಎಂತಹ ಸಮಯದಲ್ಲೂ ತಾಳ್ಮೆ ಕಳಕೊಳ್ಳದೆ ಮಾತಾಡ್ತಿರಿ ಅಂತರೆ. ಇಷ್ಟೊಂದು ತಾಳ್ಮೆ ಗುಣ ಹೇಗೆ ಬಂತು?"

"ನೀವು ಹೇಳದು ನಿಜ. ನಾನು ತುಂಬ ತಾಳ್ಮೆಯಿರೊ ಮನುಷ್ಯ. ಇಲ್ದೆಯಿದ್ರೆ ಅನಂತಮೂರ್ತಿ ಮಾಡಿದ್ದ ಕೆಲಸಕ್ಕೆ, ಮನೆಗೆ ಹೋಗಿ ಗಲಾಟೆ ಮಾಡಬೇಕಾಗಿತ್ತು, ಅದಕ್ಕಿಂತ ನಮ್ಮ ತಂದೆ ಟೀಕೆ ಮಾಡಿದೋರಿಗೆಲ್ಲಾ ನಮ್ಮ ಹುಡುಗರಿಗೇಳಿ ರಿಪೇರಿ ಮಾಡಿಸಬವುದಿತ್ತು, ಆದ್ರೂ ತಾಳ್ಮೆಯಿಂದ ಇದ್ದಿನಿ."


"ಕರ್ನಾಟಕದ ಯುವ ಜನತೆಗೆ ನಿಮ್ಮ ಸಂದೇಶ ಏನು ಸಾರ್?"

"ನನ್ನ ಸಂದೇಶ ಏನು ಅಂದ್ರೆ, ನನ್ನ ಕಾರ್ಯಾಚರಣೆಯೇ ನನ್ನ ಸಂದೇಶ. ಯುವ ಜನರು ನ್ಯಾಯ, ನೀತಿ, ಧರ್ಮ ಅಂತ ಹಿಂಜರಿಕೆ ಇಟ್ಕೊಬಾರ್ದು. ಹಿರಿಯರು, ಗುರುಗಳು, ಮೇಧಾವಿಗಳು ಅಂತ ಬೆಲೆ ಕೊಟ್ಟುಕೊಂಡು ಕೂತುಕೊಬಾರ್ದು. ತಮ್ಮದೆ ಆದ ಗೆಳೆಯರ ಪಡೆ ಕಟ್ಟಿಕೊಂಡು ಮುನ್ನುಗ್ಗಬೇಕು. ನಾವು ಅಪೇಕ್ಷೆ ಪಟ್ಟಿದ್ದನ್ನು ಪಡಿಬೇಕು. ಆಗ ಜನಸ್ತೋಮ ನಿಮಗೆ ಬೆಲೆ ಕೊಡುತ್ತೆ, ಹಿಂದೆ ಬರುತ್ತೆ, ಜೈಕಾರ ಹಾಕುತ್ತೆ, ಸನ್ಮಾನ ಮಾಡುತ್ತೆ, ಹಾಲೆರೆಯುತ್ತೆ, ಜನಿವಾರ ಹಾಕುತ್ತೆ, ಲಿಂಗ ಕಟ್ಟುತ್ತೆ, ಗರ್ಭಗುಡಿ ನಿರ್ಮಿಸಿ ಪೂಜೆ ಮಾಡುತ್ತೆ, ಸೀನಿಯಾರಿಟಿ ಪುಸ್ತೆ ಇಟ್ಟುಕೊಂಡು ಕುಂತಿದ್ರೆ ಇಂತದ್ದಾವುದೂ ಸಿಗಲ್ಲ ಗೊತ್ತೇನು?"

"ಥೂತ್ತೇರಿ!!!"

-ಯಾಹೂ

ಎಂ.ಪಿ. ಪ್ರಕಾಶನಿಗೆ ವಿಧುರನ ರೋಲು ಸೆಟ್ಟಾಯ್ತದೆ ಕಣೊ



ಬಿಸಿಲ ಹವೆಯು ಹೊಕ್ಕ ವೇಳೆಯಲ್ಲಿ ಸೀರ ಏನೋ ಜ್ಞಾಪಿಸಿಕೊಂಡವನಂತೆ,

"ಜಯಲಲ್ತ ತಿಸಗಂಡು ಬದ್ಲಂತೆ ಕಣ್ಲಾ" ಎಂದ.

"ತೂಕವಾದ ಸೀರೇಳಾಲ್ಲೆ ಬದ್ಕೊಳ್ಗಿದ್ದಾಳ್ಗೆ" ಎಂದ ಕಾಳಮಾವ. ಜಯಲಲಿತ ತಿರುಗಾಡುವಾಗ ಅಥವಾ ಇನ್ಯಾವುದೋ ಸಂದರ್ಭ ದಲ್ಲಿ ಬದ್ದಿರಬೇಕೆಂದು ಗ್ರಹಿಸಿ ಹೇಳಿದ.

"ಏ ಅವುಳು ಯಲಕ್ಸನ್ನಲ್ಲಿ ಸೋತವುಳೆ ಕಣಮಾವ. ಅದ್ಕೆ ಸೀರ ಮಾವ ಆಂಗಂದ" ಎಂದಳು ಜುಮ್ಮಿ.

"ಓ ಯಲಕ್ಸನ್ನಿಗೆ ನಿಂತಿದ್ಲೇ ಆಂಗರೆ?"

"ಊ ಸೋನಿಗಾಂಧಿನೂ ನಿಂತಿದ್ಲು ಗೆದ್ದು ಬಂದವುಳೆ."

"ಈಗ್ಯಾವ್ಯಲಕ್ಸನ್ನು?"

"ಜಯಲಲ್ತನ ಯಲಕ್ಸನು ವಾಯ್ದೆ ಮೀರಿತ್ತಂತೆ, ಸೋನಿಗಾಂಧಿ ಮಾತ್ರ ಬಜೆಪಿಗಳು ಬೋದ್ರು ಅಂತ ರಾಜೀನಾಮೆ ಬರದು ತಿರಗ ಯಲಕ್ಸನ್ ಮಾಡಿ ಬಜೆಪಿ ಸೋಲಿಸಿ ಗೆದ್ಲಂತೆ" ಎಂದಳು ಜುಮ್ಮಿ.

"ಬಜೆಪಿಗಳು ಬೋದ್ರೆ ರಾಜೀನಾಮೆ ಯಾಕ್ ಬರದ್ಲು?"

"ಅದು ಹಿಂಗೆ ಕಣಮಾವ: ಯಮ್ಮೆಲ್ಲೆ ಎಂಪಿಗಳು ಬ್ಯಾರೆ ಜಾಗದಲ್ಲಿ ಇರಂಗಿಲ್ಲ, ಯಾವುದಾರ ಒಂದು ಕುರ್ಚೆಲಿರಬೇಕಂತೆ. ಯರಡು ಕುರ್ಚೆಲಿದ್ರೆ ಒಂದ ಬುಡಬೇಕಂತೆ. ಅದ್ಕೆ. ಸೋನಿಯಾಗಾಂಧಿ ರಾಜಿನಾಮೆ ಬಿಸಾಕಿ ತಿರಗ ಯಲಕ್ಸನ್ನಿಗೆ ನಿಂತು ಗೆದ್ದು ಬಂದವುಳೆ" ಎಂದ ಉಗ್ರಿ.

"ಬಜೆಪಿಗಳ ಮುಖ ಉಜ್ಜ್ಯೋಗಿರಬೇಕು ಆಂಗರೆ."

"ಉಜ್ಜ್ಯೋಗದೇನು ಇಡೀ ದೇಸದಲ್ಲಿ ಎಲ್ಲೂ ಗೆದ್ದಿಲ್ಲ ಅವುರು."

"ಇಲ್ಲೂ ಕಡಿಗಾಲ ಕಂಡುಬುಡೋರು. ಆ ಕುಮಾರಸ್ವಾಮಿ ಅವುಕು ಒಂದು ಕಾಲ ಬರಂಗೆ ಮಾಡಿದ ಅತ್ಲಗೆ" ಎಂದ ಸೀರ.

"ಅವುನ್ಯಾಕ್ಲ ಮಂತ್ರಿ ಮಾಡ್ತಿನಿ, ಮಂತ್ರಿ ಮಾಡ್ತಿನಿ ಅಂತ ಕಾಲನೂಕ್ತ ಇದ್ದನಂತೆ" ಎಂದಳು ಜುಮ್ಮಿ.

"ಮಾಡಕ್ಕೆ ಅಷ್ಟು ಸುಲಬಲ್ಲ ಕಣೆ. ಜೆಡಿಎಸ್‌ನಲ್ಲಿ ರೋರಿಗೆ ಕೈಗೆ ಕಾಸು ಕೊಟ್ಟು ಸುಮ್ಮನಿರಿ ಅನ್ನಬವುದು. ಬಜೆಪಿ ಯಪ್ಪತ್ತು ಜನವುರೆ. ಯಾರ್ನ ಅಂತ ಮಂತ್ರಿ ಮಾಡ್ತನೂ, ಆ ಯೆಡೂರಪ್ಪ ಬ್ಯಾರೆ ಶೋಭ ಕರಂದ್ಲಾಜೆ ಮಂತ್ರಿ ಮಾಡ್ಕೆಬೇಕು ಅಂತ ರಚ್ಚೆ ಹಿಡದಿದ್ದನಂತೆ."

"ಸೋಬ ಕರಿಅಜೆ ಅಂದ್ರೆ ಅವುಳ್ಯಾರ್ಲ?"

"ಅವುಳು ನಿನ್ನಂಗೆ ಕಣೆ. ನೀನ್ಯಂಗೆ ನನ್ನ ಜ್ವತೆ ಇದ್ದಿಯೋ ಅವುಳು ಅದೇ ತರ ಎಡೂರಪ್ಪನ ಜ್ವತೆ ಇದ್ದಳಂತೆ."

"ಇದ್ದು ಮಾತ್ರಕೆ ಅವುಳನೆ ಮಂತ್ರಿ ಮಾಡಿ ಅಂದ್ಯಂಗಲ?"

"ಅದು ನಿನಿಗೊತ್ತಾಗದಿಲ್ಲ ಬುಡು. ದಿಮ್ಮಗಿದ್ದಾಗ ನಾಕು ಮಕ್ಕಳು ಮಾಡಿಕಂಡು ನಾಕ್ಕಾಸು ಮಾಡಿಕೊ ಅನ್ನೊ ಗಾದೆ ಮಾತ ಕೇಳಿದ್ದಿಯಾ? ಅಂಗೆ ಅಧಿಕಾರಿದ್ದಾಗ ಅತ್ರುದೋರಿಗೆ ಅವುಕಾಸ ಮಾಡಬೇಕು ಅನ್ನದು ರಾಜಕಾರಣಿಗಳ ಗಾದೆ. ಅಂಗೆ ಈ ಯಡೂರ ಇಡೀ ಬಜೆಪಿ ತಗಂಡೋಗಿ ದ್ಯಾವೇಗೌಡ್ರತ್ರ ಹಡ ಮದಿಗಿ ದೋನಂಗಾಡಿಕಂಡು ಆ ಯಮ್ಮನ್ನ ಮಂತ್ರಿ ಮಾಡಿ ಅಂತ ಕುಂತಿದ್ದನಂತೆ ಆ ಬಜೆಪಿಗಳು ಅವುಳಿಗೆ ಮಾಡದು ಬ್ಯಾಡ ಅಂತ ಜಗಳ ತಗದವಂತೆ."

"ಅಂಗರೆ ಬಜೆಪಿಗಳ ಗುಡಿಲೆ ಗಲಾಟೆ ಅನ್ನು?" ಎಂದ ಸೀರ.

"ಊ ಅದೇನು ವಸದಲ್ಲ ತಗೊ, ಆ ಕಾಲದಿಂದ ಅಧಿಕಾರದಲ್ಲಿದ್ದೋರು ಯಾವ್ದಾರ ಒಂದೆಂಗಸ ಹಿಡಕಂಡು ಏನ್ನಾರ ಮಾಡಬೇಕು ಅಂತ ತಕರಾರು ಮಾಡಿಕಂಡೇ ಬಂದವುರೆ" ಎಂದ ಉಗ್ರಿ.

"ಅದರಲ್ಯಲ್ಲಿ ದ್ಯಾವೇಗೌಡ ಅಂತದ್ದೇನ್ನೂ ಮಾಡಿಲ್ಲ" ಎಂದ ಕಾಳಮಾವ.



"ಅಯ್ಯೋ ಮಾವ, ಸುರು ಮಾಡಿದೋನೆ ಅವುನು, ಯಗಡೆ ಕಾಲ್ದಲ್ಲಿ ಅವುನು ಪಿಡಬ್ಲುಡಿ ಮಿನಿಸ್ಟ್ರಾಗಿದ್ದಾಗ, ಮೈಸೂರಲ್ಲಿ ನಾದ್ನಿಗೆ ಸೈಟು ಕೊಟ್ಟು ಸಿಗಾಯ್ಕಂಡಿದ್ದ ಗೊತ್ತೆ?"

"ಇರಕ್ಕೆ ಮನಿರಲಿಲವೇನೊ ಕೊಟ್ಟ ಬುಡು."

"ಮನಿಲ್ಲೊದ್ರು ಏಟು ಜನಿಲ್ಲ, ಅವುರಿಗ್ಯಲ್ಲ ಕೊಡಬೇಕಾಗಿತ್ತು."

"ಈಗ್ಲು ಬಡಬಗ್ಗರಿಗೆ ಸೈಟು ಕೊಡಿ ಮನೆ ಕೊಡಿ ಅಂತಾ ಇರೋನೆ ಅವುನು ಕಂಡ್ಯ. ಇನ್ನಾರ ಬಾಯಿಲಾರ ಆ ಮಾತ ಕೇಳಿದ್ದಿಯ?" ಎಂದ ಕಾಳಮಾವ.

"ಆಯ್ತಪ್ಪ ಅವುನ ಕೈಲಿ ಅಧಿಕಾರಿತ್ತು, ಅಂಗೆ ನೋಡಿದ್ರೆ ಈಗ್ಲೂ ಅದೆ, ಕೊಡ್ಯೇಳು."

"ಮಗನಿಗೇಳಿ ಕೊಡುಸ್ತನೆ ಬುಡು."

"ಲೇ ಉಗ್ರಿ, ಕುಮಾರಸ್ವಾಮಿಗೆ ಏನು ಗೊತ್ತಿಲ್ಲ ಅಂತ ಆಡಿಕತ್ತರಲ್ಲ ನಿಜವೇನ್ಲ?" ಎಂದಳು ಜುಮ್ಮಿ.

"ನೀನು ಪಂಚಾತಿ ಮೆಂಬ್ರಾಗಿದ್ದಾಗ ಏನು ಗೊತ್ತಿತ್ತೆ ನಿನಿಗೆ? ಸೈನು ಮಾಡೋ ಜಾಗನೂ ತೋರಬೇಕಾಗಿತ್ತು, ಆದ್ರೆ ಕುಮಾರಸ್ವಾಮಿಗೆ ಸೈನು ಮಾಡೊ ಜಾಗ ಗೊತ್ತದೆ."

"ಅಂಗರಿನ್ನೇನು ಗೊತ್ತಿಲ್ಲ ಅನ್ನು?"

"ಯಂಗೊತ್ತಾಗಬೇಕೆ? ಅನುಭವ ಕೇಳಿದೇಟಿಗೆ ಬರೋ ಅಂತೆದಾ ತಿಳಕಬೇಕು? ಓದಬೇಕು? ಇವುನೇನು ಓದಂಗೆ ಕಾಣದಿಲ್ಲ."

"ಯಾಕೋದಬೇಕ್ಲ? ನಮ್ಮ ಮೈಸೂರ ದೇಸ ಆಳಿದ್ರಲ್ಲ ಹೈದರಾಲಿ, ಟಿಪ್ಪು ಸುಲ್ತಾನ ಅನ್ನೋ ಅಪ್ಪ ಮಕ್ಕಳು, ಅವುರೇನು ಓದಿದ್ರೆ? ಆದ್ರು ಆಡಳತ ಮಾಡಿರಲಿಲವೆ?" ಎಂದ ಕಾಳಮಾವ.

"ಅಂಗರೆ ದ್ಯಾವೇಗೌಡ ಹೈದರಾಲಿ, ಕುಮಾರಸ್ವಾಮಿ ಟಿಪ್ಪು ಸುಲ್ತಾನ ಅಂತಿಯ ದ್ವಡಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ಊ ಕಣ ಬಾರೊ. ಎಂ.ಪಿ. ಪ್ರಕಾಶನ್ನೆ ಪೂರ್ಣಯ್ಯನ್ನ ಮಾಡಿದರಾಯ್ತು" ಎಂದ ಉಗ್ರಿ.

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ಪೂರ್ಣಯ್ಯನ ರೋಲಿಗೆ ಪ್ರಕಾಶ್ ಸೂಟಬಲ್ ಪರಸನ್ನು. ಆದ್ರೆ ದ್ಯಾವೇಗೌಡ ಯಾಕೊ ಅವುನ್ನ ಸರ್ಕಾರದ್ವಳಿಕೆ ತಗಳಕ್ಕೆ ಹೆದರತ ಕುಂತಿದ್ದನಂತೆ."

"ಅದ್ಯಾಕೋ?"

"ಪ್ರಕಾಶ್ ಮಂತ್ರಿಯಾದೇಟಿಗೆ ರೈಟರ್‍ರು, ಕಲಾವಿದರು, ಬುದ್ಧಿ ಜೀವಿಗಳು ಅದರಲ್ಲೂ ಲಿಂಗಾಯಿ ತರ್ಯಲ್ಲ ಅವುನ ಮನೆತ ಜಾಮಾಗಿ ಬುಡ್ತರೆ. ಆಗ ಅವುರ್ಯಲ್ಲ ಸೇರಿ ಕಂಡು ಮಗನ ವಿರುದ್ಧ ಏನ್ನಾರ ಮಾಡಬವುದು. ಅರಗಳೆನೆ ಬ್ಯಾಡ ಅಂತ ಪ್ರಕಾಶನ್ನ ಅಂಗೇ ಇಟ್ಟಿದ್ದನಂತೆ."

"ಅದ್ಕೆ ಏನೊ ಕಣೊ ಪ್ರಕಾಶನ್ನ ಸಿನುಮಾಕ್ಕೆ ಸೇರಿಸಿ ಒಂದು ಪಾರ್ಟು ಕೊಡನ ಬುಡಿ ಅಂದಿದ್ದನಂತೆ ಕುಮಾರಸ್ವಾಮಿ" ಎಂದ ಉಗ್ರಿ.

"ಅದಕಿಂತ ಮದ್ಲೆ ಪ್ರಕಾಶ ನಾಟಕದ ಕಂಪನಿ ಕಟಿಗಂಡಾಯ್ತು."

"ಈ ಕಾಲ್ದಲೆಲ್ಲಿ ನಾಟಕದ ಕಂಪನಿ ನ್ಯಡಿತವುಲ?" ಎಂದ ಸೀರ.

"ಅಂಗಲ್ಲ ಚಿಗಪ್ಪ ಪ್ರಕಾಶನಿಗೆ ರಾಜಕಾರಣವೇ ಮುಕ್ಯ ಅಲ್ಲ, ಅವುನಿಗೆ ಸಾಯಿತ್ಯ, ಸಂಗೀತ, ನಾಟಕ ಇದ್ರಾಯ್ತು. ಈ ಅಪ್ಪ ಮಗ ಮಾಡಿದ ನಾಟಕ ನೋಡಿ ಬೆಚ್ಚಿ ಹಡಗಲಿಗೋಗಿ ನಾಟಕ ಆಡುಸ್ತಯಿದ್ದನಂತೆ."

"ಅವುನು ನಾಟಕದ ಮೇಷ್ಟ್ರೇ?"

"ಅಂಗೂ ಅನ್ನಕಬವುದು. ಪಾಪ ವಳ್ಳೆ ಮನ್ಸ, ಕ್ಯಟ್ಟ ರಾಜಕಾರಣ ಮಾಡದೆಯಿದ್ರೂ, ಕ್ಯಟ್ಟ ರಾಜಕಾರಣಿಗಳ ಜ್ವತೆ ಇರತನೆ. ಏನು ಮಾಡ್ತೀ, ಅಂತ ಜನಗಳಿಂದ ದೂರ ಇರಕ್ಕೆ ಅಂತ ಈಗ ಊರಿಗೋಗಿ ನಾಟಕ ಮಾಡುಸ್ತಯಿದ್ದನಂತೆ."

"ಯಾವ ಪಾರ್ಟು ಮಾಡ್ತನ್ನ ಅವುನು?"

"ವಿದುರನ ಪಾರ್ಟು ಸೆಟ್ಟಾಯ್ತದೆ."

"ಅದ್ಯಾಕ್ ರಾಜನ ಪಾರ್ಟಾಗದಿಲವೆ?"

"ರಾಜನ ಪಾರ್ಟು ಮಾಡಕ್ಕೆ ಗತ್ತು, ಗೈರತ್ತು ವಜಕಟ್ಟು ಬೇಕು ಚಿಗಪ್ಪ, ಪ್ರಕಾಶ್ ಈಗಿರೊ ಸ್ಥಿತಿಲಿ, ವಿದುರನ ರೋಲು ಸೂಟಾಯ್ತದೆ."

"ಅದ್ಯಾಕ್ಲ ಆಂಗಂತಿ?" ಎಂದಳು ಜುಮ್ಮಿ.

"ಊ ಕಣಕ್ಕ, ವಿದುರ ಕೃಷ್ಣನ ಭಕ್ತ ಆದ್ರು ಕೌರವನತ್ರ ಇದ್ದ. ಪಾಂಡವುರ ಕಂಡ್ರು ಪ್ರೀತಿ, ದುರ್ಯೋಧನನನ ಕಂಡ್ರು ಅಭಿಮಾನ. ಅದ್ರಿಂದ ಅವುನು ಕೌರವನತ್ರನೇ ಇದ್ದುಬುಟ್ಟ. ಯಾಕೇಳು?"

"ನೀನೇ ಯೇಳು ನನಿಗೇನು ಗೊತ್ತು?"

"ಆ ಬಡಪಾಂಡವರ ಜ್ವತೆ ಹೋದ್ರೆ ಇರಕ್ಕೆ ಮನಿಲ್ಲ, ತಿನ್ನಕ್ಕನ್ನಿಲ್ಲ, ಸವಲತ್ತುಗಳಂತೂ ಇಲವೇಯಿಲ್ಲ, ಅದೇ ಕೌರವನ್ನ ಸಯಿಸಗಂಡಿದ್ರೆ ಯಲ್ಲಾ ಸವಲತ್ತು ಸಿಗತದೆ. ಆಳುಕಾಳು, ಇರಕ್ಕೆ ಮನೆ, ಇದನ್ಯಲ್ಲ ಲ್ಯಕ್ಕ ಹಾಕಿ ವಿಧುರ ಕೌರವನ ಅಸ್ತಾನದಲ್ಲೇ ಉಳಕಂಡು ಅವುನ್ನೆ ಹೊಗಳಕ್ಕೆ ಶುರು ಮಾಡಿಕಂಡಿದ್ದ."

"ಆದ್ರು ಸರಿಯಾದ ಟೈಮಲ್ಲಿ ಬಿಲ್ಲು ಮುರುದು ಅರಮನಿಂದ ಹ್ವರಗೆ ಬಂದ ಕಣೊ" ಎಂದ ಉಗ್ರಿ.

"ಅದು ವಿಧುರನ ಸ್ವಾಭಿಮಾನ ಕೆರಳಿದಾಗ ಈಚೆಗೆ ಬಂದ ಕಣೊ ಉಗ್ರಿ, ಈ ನಮ್ಮ ಪ್ರಕಾಶ್ ಯಾವಾಗ ಬರಬವುದು ನೀನೇ ಹೇಳು?"

"ಪ್ರಕಾಶ್ ಯುದ್ಧದ ಟೈಮಲ್ಲಿ ಬರಬವುದೇನಪ್ಪ?"

"ಅವುರನ್ನೆ ಸಾರಥಿ ಮಾಡಿದ್ರೆ ಯಂಗೆ ಬತ್ತರೆ?"

"ಅದೇಳದು ಕಷ್ಟ. ಆದ್ರು ಅಂತ ಮನುಸುನಿಗೆ ಈ ದ್ಯಾವೇಗೌಡ್ರು ಇಂತ ಅವುಮಾನ ಮಾಡಬಾರದಿತ್ತು ಕಣೊ" ಎಂದ ಉಗ್ರಿ.

"ಅದೇನವುಮಾನ ಮಾಡಿದ್ದರ್ಲ?" ಎಂದ ಕಾಳಮಾವ.

"ನೋಡಪ್ಪ ಕಾಳಮಾವ ದ್ಯಾವೇಗೌಡನಂಗೆ ಮಾತಾಡದ. ಅಲ್ಲಾ ಕಣ ಮಾವ. ಉಪಮುಖ್ಯ ಮಂತ್ರಿಯಾಗಿದ್ದೊನ್ನ ಬೀದಿಲಿ ನಿಲ್ಲಂಗೆ ಮಾಡಿಬುಟ್ಟು, ಅತ್ತಗೆ ಮಗ ಅವುನ ಜಾಗಕ್ಕೆ ಬಂದು ಮುಖ್ಯಮಂತ್ರಿಯಾಗಂಗೆ ಮಾಡಿದ್ದು ಅಲ್ಲದೆ, ಈಗ ತಿಪ್ಪಣ್ಣನ ಮಾಡಿ ನಿಲ್ಲಿಸಿದ್ದಿಯಲ್ಲಾ ಇದು ನ್ಯಾಯವೆ?" ಎಂದ ಉಗ್ರಿ.

"ಅದೋಗ್ಲಿ ಕಣೊ ಉಗ್ರಿ, ಪ್ರಕಾಶನ್ನ ಮಂತ್ರಿ ಮಾಡಬೇಕೊ ಬ್ಯಾಡವೋ ಅಂತ ಅವುನ ಬಾಯಲೆ ನಾನಾಗದಿಲ್ಲ ಅನ್ನವರಿಗೂ ಒಂದು ಪರುಸ್ಥಿತಿ ನಿರ್ಮಾಣ ಮಾಡಿ ಮಡಿಗ್ಯವುರಲ್ಲ, ಇದು ಒಂದು ರೀತಿ ಹೇಸಿಗೆ ರಾಜಕಾರಣ ಕಣೊ."

"ಹಂದಿ ಮ್ಯಾಲೆ ಕುಂತೋನು ಹೇಸಿಗೆ ಕಂಡ್ರೆ ಅಂಜ್ಯನೆ?"

"ಅಂಗಂತಿಯಾ?"

"ಊ ಮತ್ತೆ?"

"ಅಂಗರೆ ಹಂದಿ ಮ್ಯಾಲೆ ಕುಂತಿರೋರ್‍ಯಾರೂ?"


"ಹೇಸಿಗೆ ರಾಜಕಾರಣ ಮಾಡೋರು."

" !?"

–ಬಿ. ಚಂದ್ರೇಗೌಡ

Zero Hour ಮುನ್ನಿ

1. ರಾಮಾಜೋಯಿಸ್ ಎಂದರೆ....
   a) ಜ್ಯೋತಿಷಿಯೇ ಇರಬೇಕಲ್ಲಾ...?
   b) ನಿವೃತ್ತ ನ್ಯಾಯಾಧೀಶ ಅನಿಸ್ತಿದೆ
   c) ವಿಎಚ್‌ಪಿಯ ವಕೀಲ
   d) ಮೇಲಿನೆಲ್ಲವೂ ಸರಿ ಎನ್ನಬಹುದು
   e) (a) ಮತ್ತು (c) ಎರಡಷ್ಟೇ ಸರಿ ಎನ್ನಬೇಕೇನೋ....
2. U2 ಎಂಬ ಚಾನಲ್‌ನಲ್ಲಿ ನಿರೂಪಕರಾಗಲು ಬೇಕಾದ ಅರ್ಹತೆ
   a) ಘೋರ, ಭೀಕರ ಕನ್ನಡ ಗೊತ್ತಿರಲೇಬೇಕು
   b) ವಿಕೃತ ಅಂಗಚೇಷ್ಟೆಯಲ್ಲಿ ಕರತಲಾಮಲಕರಾಗಿರಬೇಕು.
   c) ಹುಡುಗರು ಹುಡುಗಿಯರಂತೆ, ಹುಡುಗಿಯರು ಹುಡುಗರಂತೆ ವರ್ತಿಸಬೇಕು
   d) (a), (b) & (c) ಮೂರೂ ಸರಿ
   e) ಕನ್ನಡದ ಮಣ್ಣಿನ ವಾಸನೆ ಬಲ್ಲವರಾಗಿರಬೇಕು
3. ನಾದಿಗಾಸ್ ಹೆಬ್ಬಾವು ನೋಡಿ ಖುಷಿಗೊಂಡ ಅದಿಗಾಸ್ ತಟ್ಟಿದರಂತೆ....
   ಈ ವಾಕ್ಯ ಏನನ್ನು ಹೇಳಬಯಸುತ್ತದೆ?
   a) ನಾಡಿಗ್ ಎಂಬುವವರು ಎಸೆದ ಹೆಬ್ಬಾವನ್ನು 'ಅಡಿಗಾಸ್' ಹೋಟೆಲ್‌ನವರು ಚಚ್ಚಿ ಕೊಂದಿರಬಹುದು.
   b) ಸುಮತೀಂದ್ರ ನಾಡಿಗರ ಹೆಬ್ಬಾವನ್ನು ಗೋಪಾಲಕೃಷ್ಣ ಅಡಿಗ ಮೆಚ್ಚಿದ್ದರೆಂದು ಕಾಣುತ್ತದೆ.
   c) ಬ್ರಾಹ್ಮಣ ನಾಡಿಗರ 'ಹೆಬ್ಬಾವು' ಬ್ರಾಹ್ಮಣ ಅಡಿಗರಿಗೆ ಇಷ್ಟವಾಗದೆ ಇರುತ್ತಾ?
   d) ಯಾಕೋ ಈ ಪ್ರಶ್ನೆ vulgar ಅನಿಸ್ತಿದೆ ಮುನ್ನಿ....
4. ಹೊಸ ಕನ್ನಡ ಚಿತ್ರ ಘೋಷಿಸುವಾಗ ನಿರ್ಮಾಪಕ, ನಿರ್ದೇಶಕ ಹೇಳುವ ಕಾಮನ್ 'ಸುಳ್ಳು ಡೈಲಾಗ್'
   a) ಸೃಜನಶೀಲ ಚಿತ್ರ ಮಾಡುತ್ತಿದ್ದೇವೆ.
   b) ಆಧುನಿಕ ತಂತ್ರಜ್ಞಾನ ಬಳಸುತ್ತಿದ್ದೇವೆ
   c) ಕತೆ ವಿಭಿನ್ನವಾಗಿದೆ, ಚಿತ್ರಕತೆ ಡಿಫರಂಟಾಗಿದೆ, ಹಾಡು ವಿಶಿಷ್ಟವಾಗಿವೆ
   d) ಮಣಿರತ್ನಂ ಲೆವೆಲ್ ಚಿತ್ರ ಮಾಡುತ್ತೇವೆ
5. ನಿಜಕ್ಕೂ ಸರ್ಪದೋಷ 'ಮುಕ್ತ'ರಾದವರೆಂದರೆ
   a) ಸಚಿನ್ ತೆಂಡೂಲ್ಕರ್ b) ಟಿ.ಎನ್. ಸೀತಾರಾಮ್
   c) ರಾಬಿನ್ ಉತ್ತಪ್ಪ
   d) ಕುಕ್ಕೆ ಸುಬ್ಬನ ಏಜಂಟ್ ನಾಯಕ್



ಉತ್ತರಗಳು : 1. e 2. d 3. c [illegible] 4. c. 5. b

ಜೀವನಕ್ಕಿಂತ ಜೀವನ ಹೋರಾಟವು ಹೆಚ್ಚು ಆಕರ್ಷಕವಾಗಿದೆ -ಪರ್ಲ್ ಎಸ್. ಬಕ್

ರೈಲಿನಲ್ಲಿ ಹಿಕ್ಕರು, ರಾಜಕಾರಣಿಗಳು. ನಾನು ಅವರನ್ನು ಎಂದೂ ನೋಡಿರಲಿಲ್ಲವಾದ್ದರಿಂದ ಕೂಡಲೇ ಅವರ ಗುರುತು ಸಿಗಲಿಲ್ಲ, ಇಬ್ಬರೂ ಒಂದೇ ವಯಸ್ಸಿನವರಿರಬೇಕು, ಸುಮಾರು ಅರವತ್ತಕ್ಕೆ ಹತ್ತಿರದ ವ್ಯಕ್ತಿಗಳು. ನಾನು ನನ್ನ ಕಿಟ್ ಒಂದು ಕಡೆ ಇಟ್ಟು ಪುಸ್ತಕ ತೆಗೆದುಕೊಂಡು ಪ್ರಯಾಣಕ್ಕೆ ಸಿದ್ಧವಾಗಿ ಕೂತೆ. ಅವರಲ್ಲೊಬ್ಬರಿಗೆ ನಾನು ಯಾರೆಂದು ಗೊತ್ತಾಗಿರಬೇಕು. ಕೇಳಿದರು. ಹೌದು, ನನ್ನ ಹೆಸರು ಲಂಕೇಶ್ ಅಂದೆ. ತುಂಬ ಉತ್ಸಾಹಿ ಮನುಷ್ಯ. ತಮ್ಮ ಗೆಳೆಯರಿಗೆ ನನ್ನ ಬಗ್ಗೆ ಹೇಳುತ್ತಾ "ತುಂಬ ಬೋಲ್ಡ್! ಪಕ್ಕಗಿಕ್ಕ ನೋಡದೆ smash ಮಾಡ್ತಾರೆ. ತುಂಬ ಧೈರ್ಯಶಾಲಿ!" ಅಂದರು. ಅವರ ಮಿತ್ರರು ಈ ಧೈರ್ಯಶಾಲಿಯನ್ನು ಎವೆಯಿಕ್ಕದೆ ನೋಡುತ್ತಾ ಈತನ ಧೈರ್ಯದ ಲೆಕ್ಕ ಹಾಕತೊಡಗಿರಬೇಕು. ನಾನು ಅವರ ಹೊಗಳಿಕೆಯನ್ನು ಹೇಗೆ ಸ್ವೀಕರಿಸುವುದೆಂದು ತೋಚದೆ ಅತ್ತಿತ್ತ ನೋಡುತ್ತ ಮುಗುಳ್ನಗಲು ಯತ್ನಿಸುತ್ತ ಕೂತೆ. ಅದರ ಹಿಂದಿನ ದಿನ ತಾನೇ ನನ್ನ ಭಾಷಣದಲ್ಲಿ ತುಂಬ ಧೈರ್ಯದ ನಿರರ್ಥಕತೆಯ ಬಗ್ಗೆ, ನಾನೂ ಎಲ್ಲರಂತೆಯೇ ಆತಂಕದ, ಹಿಂಜರಿಕೆಯ ಮನುಷ್ಯ ಎಂಬ ಬಗ್ಗೆ ಹೇಳುತ್ತಾ ಜನಸಾಮಾನ್ಯನ ಸೂಕ್ಷ್ಮಜ್ಞತೆಯನ್ನು ಕುರಿತು ಭಾಷಣ ಮಾಡಿದ್ದೆ ಜನಸಾಮಾನ್ಯನ ದುಗುಡಗಳನ್ನು ವಿವರಿಸಿದ್ದೆ. ಆದರೆ ಈತ ನನ್ನನ್ನು ಅರಿಭಯಂಕರ ಎಂಬಂತೆ ಮಾತಾಡಿದ್ದಾರೆ...

ಇಬ್ಬರು ನಾಯಕರು


ಪುಸ್ತಕದಲ್ಲಿ ಮುಳುಗತೊಡಗಿದೆ. ಅಷ್ಟರಲ್ಲಿ ಅವರಲ್ಲೊಬ್ಬ "ತುಂಬ ಚೆನ್ನಾಗಿ ಬರೀತಾರೆ. ಆದರೆ ನನಗೆ ಕನ್ನಡ ಓದೋಕೆ ಬರೋಲ್ಲವಾದ್ದರಿಂದ ಆಗಾಗ ಓದಿಸಿ ಕೇಳ್ತೀನಿ. ಪತ್ರಿಕೆಯ ಹೆಸರೇನು?" ಅಂದರು.

ನಾನು ಉತ್ತರಿಸಿ ನಗತೊಡಗಿದೆ. ಅವರು ನನ್ನ ಕೈಯಲ್ಲಿದ್ದ ಪುಸ್ತಕ ಇಸಿದುಕೊಂಡು ನೋಡಿದರು. "ಇದು ಟಿವಿಯಲ್ಲಿ ಬರ್ತಿದೆ ಅಲ್ವ?" ಅಂದರು. "ಹೌದು, 'ಎಸ್ ಪ್ರೈಮ್ ಮಿನಿಸ್ಟರ್' ಟಿವಿಯಲ್ಲಿ ಬರ್ತಿದೆ" ಅಂದೆ.

"ನನಗೆ ಓದೋಕೇ ಪುರುಸೊತ್ತಾಗಲ್ಲ, ದಿನಾ ಸರಿಯಾಗಿ ನ್ಯೂಸ್ ಪೇಪರ್‌ಗಳನ್ನು ಓದೋದೇ ಕಷ್ಟವಾಗುತ್ತೆ" ಅಂದರು. "ಯಾಕೆ? ಪುಸ್ತಕ ಓದೋದು ಯಾಕೆ ಕಷ್ಟವಾಗುತ್ತೆ?" ಅಂದೆ.

"ರಾಜಕಾರಣ, ಪುರುಸೊತ್ತಿಲ್ಲದ ಕೆಲಸ. ಅಲ್ಲದೆ ಚಿಕ್ಕವರಾಗಿದ್ದಾಗ ಓದೋದಕ್ಕೆ ಬೇಕಾದ ವಾತಾವರಣ, ಉತ್ಸಾಹ ಇರ್ತಿತ್ತು. ಈಗ ಆ ಕಡೆ ಗಮನವೇ ಹರಿಯೋಲ್ಲ" ಅಂದರು.


"ಹಾಗಲ್ಲ" ಎಂದು ತುಂಬ ಒಳ್ಳೆಯವರಂತಿದ್ದ ಅವರ ಮನಸ್ಸು ನೋಯಿಸಲು ಇಷ್ಟಪಡದೆ ಹೇಳಿದೆ, "ನಿಮ್ಮ ವೇಳೆಯನ್ನು ಸರಿಯಾಗಿ ಪ್ಲಾನ್ ಮಾಡಿಕೊಂಡರೆ ಓದೋದಕ್ಕೆ ಆಗುತ್ತೆ. ಅದೊಂದು ನಿಲುವು, ಅವಶ್ಯಕತೆ ಅಷ್ಟೆ. ಓದೋದು ಊಟ ಮಾಡಿದಷ್ಟೇ ಅನಿವಾರ್ಯವಾಗುವಂತೆ ಏರ್ಪಡಿಸಿಕೊಳ್ಳಬೇಕು. ಹರಟೆ, ಓಡಾಟ, ಚರ್ಚೆ, ರಂಜನೆ ಎಲ್ಲಾ ಮುಖ್ಯ ಹಾಗೆಯೇ ಓದು ಕೂಡ" ಅಂದೆ.



ಅವರು ಒಪ್ಪಿ ತಲೆದೂಗಿದರು. ಮತ್ತೆ ನನ್ನ ಕೈನಿಂದ ಪುಸ್ತಕ ಇಸಿದುಕೊಂಡು ಹಾಳೆ ಮಗುಚಿ ನೋಡಿದರು. ಪುಸ್ತಕ ಹಿಂದಿರುಗಿಸುವಾಗ ಹೇಳಿದೆ, "ಓದಿ ಪರವಾಗಿಲ್ಲ-ಬೇಕಾದ್ರೆ ನೀವೇ ಇಟ್ಕೊಳ್ಳಿ. ಬೆಂಗಳೂರಲ್ಲಿ ಇನ್ನೊಂದು ಪ್ರತಿ ಕೊಂಡುಕೊಳ್ತೀನಿ" ಅಂದೆ.

"ಛೆ, ಛೆ, ಹಾಗೆಲ್ಲ ಮಾಡಬೇಡಿ" ಎಂದು ಹಿಂದಿರುಗಿಸಿದರು. ಹೇಳಿದರು "ಪತ್ರಕರ್ತರು ಬಿಡಿ-ಯಾವಾಗಲೂ ಓದ್ತಾನೇ ಇರಬೇಕು. They should keep abreast of things."

"ಪತ್ರಕರ್ತರು ಮಾತ್ರವಲ್ಲ, ಎಲ್ಲರೂ ಮನಸ್ಸನ್ನು ಜೀವಂತವಾಗಿಟ್ಟುಕೊಳ್ಳಬೇಕು" ಎಂದು ಬೇರೆ ವಿಚಾರ ಮಾತಾಡಿ ಓದತೊಡಗಿದೆ.



ಮಾರ್ಚ್ 20, 1988

ವೇಳೆ-ಅವೇಳೆ....

ನೀವೊಬ್ಬರೇ ಒಂದು ಸಾರ್ವಜನಿಕ ಅಭಿರುಚಿ ಇಟ್ಟುಕೊಂಡು ಅನುಷ್ಠಾನಕ್ಕೆ ತರುವುದು ಕಷ್ಟ. ಎಲ್ಲ ಅಭಿರುಚಿಗಳ ಮೂಲ ವೇಳೆ, ಸಂದರ್ಭ ಎಂಬುದು ನನ್ನ ನಂಬಿಕೆ. ನೀವು ದೊಡ್ಡ ಪ್ರಣಾಳಿಕೆ, ದೇಶ ಸೇವೆಯ ಯೋಜನೆ ಇಟ್ಟುಕೊಂಡು ಓಡಾಡಬಹುದು. ಆದರೆ ವೇಳೆ, ಸಂದರ್ಭ, ಕಾಲದ ಚೌಕಟ್ಟಿಲ್ಲದಿದ್ದರೆ ಅದಕ್ಕೆ ತಳವೇ ಇರುವುದಿಲ್ಲ.

ಕಲಬುರ್ಗಿಯ ಪ್ರವಾಸದ ಸಮಯದಲ್ಲಿ, ಸಣ್ಣಪೇಟೆಗೆ ವೇಳೆಗೆ ಸರಿಯಾಗಿ ಹೋದೆವು. ಮಿತ್ರ ಲಿಂಗಣ್ಣನಿಗೆ ನಮಗೆಲ್ಲ ತನ್ನ ತೋಟ ತೋರುವ ಆಸೆ. ಮುಂದಿನ ಸಭೆಯ ವೇಳೆಯ ಬಗ್ಗೆ ಅಸ್ಪಷ್ಟವಾಗಿ ಹೇಳಿದ. ಆದ್ದರಿಂದ ರಂಗಪೇಟೆಯ ಸಭೆಯಲ್ಲಿ ನನಗೆ ಉಳಿದದ್ದು ಕೇವಲ ಹದಿನೈದು ನಿಮಿಷ... ಅದರ ಮುಂದಿನ ಸಭೆಗೆ ಹೋಗಲು ಕೇವಲ ಅರ್ಧಗಂಟೆ ಉಳಿದಿದೆ. ವೇಳೆಗೆ ಸರಿಯಾಗಿ ಹೋಗುತ್ತೇನೆ. ಆದರೆ ಅಲ್ಲಿಯ ಜನ ಸಭೆಗೆ ಮುನ್ನ ಹರಟುತ್ತ ಅರ್ಧ ಗಂಟೆ ಹಾಳು ಮಾಡುತ್ತಾರೆ.



ಕಲಬುರ್ಗಿಯಲ್ಲಿನ ಅದ್ದೂರಿ ಸಭೆಗೆ ಸರಿಯಾಗಿ 5.30ಕ್ಕೆ ಹೋದೆ. ಅಲ್ಲಿ ಸಿದ್ಧತೆಯೇ ಆಗಿರಲಿಲ್ಲ, ಮೆಟ್ಟಿಲ ಮೇಲೆ ಕೂತೆ. ಅಲ್ಲಿಗೆ ಓಡಿ ಬಂದ ಆತಿಥೇಯರು, 'ಸಾರ್ ಇವತ್ತು ಹಬ್ಬ ವಾರ್ಷಿಕೋತ್ಸವ. ತುಂಬ ಜನ ನಿಮ್ಮ ಭಾಷಣಕ್ಕೆ ಬರ್ತಾರೆ. 7 ಗಂಟೆಗೆ ಶುರು ಮಾಡ್ತೇವೆ' ಅಂದರು. ನಾನು ಕೂತೇ ಇದ್ದೆ. ಆಮೇಲೆ ನನ್ನ ರೂಮಿಗೆ ಹಿಂದಿರುಗಿ 7ಕ್ಕೆ ಬಂದೆ...

ಆದರೆ ಜನ ಕೂಡ ನಮ್ಮ ವೇಳೆಯ ಬಗೆಗಿನ ಅಶಿಸ್ತಿಗೆ ತಮ್ಮ ಜೀವನ ಹೊಂದಿಸಿಕೊಂಡಿರುತ್ತಾರೆ. ನೀವು ಕಟ್ಟುನಿಟ್ಟಾದರೆ ಅವರಿಗೆ ಬೇಸರವಾಗುತ್ತದೆ.

ನನಗೆ ಕಲಬುರ್ಗಿಯಿಂದ ಬಂದ ಹಲವು ಕಾಗದಗಳಲ್ಲಿ ಒಂದು ಇಲ್ಲಿದೆ:

ಪ್ರಿಯ ಲಂಕೇಶ್ ಮೇಷ್ಟ್ರ

ತಮ್ಮ ಇತ್ತೀಚಿನ ಗುಲಬರ್ಗಾ ಪ್ರವಾಸದಲ್ಲಿ ಕಲಾನಿಕೇತನದ ಸಾಯಂಕಾಲದ (27-2-88) ಕಾರ್ಯಕ್ರಮದಲ್ಲಿ ತಮ್ಮನ್ನು ಪ್ರತ್ಯಕ್ಷವಾಗಿ ಕಂಡು ನನ್ನ ಮನಸ್ಸು ತುಂಬಾ ಅವ್ಯಕ್ತವಾದ ಆನಂದವನ್ನು ಅನುಭವಿಸಿತು.

ಪತ್ರಿಕೆಯ ಪ್ರಾರಂಭದಿಂದ ಇಂದಿನವರೆಗೂ ತಪ್ಪದೇ ಪ್ರತಿವಾರ ಪತ್ರಿಕೆಯ ಮೂಲಕವಷ್ಟೆ ತಮ್ಮನ್ನು ಕಾಣುತ್ತಾ ಬಂದ ನನಗೆ ನನ್ನ ಅಭಿಮಾನದ, ಗೌರವದ ವ್ಯಕ್ತಿಯನ್ನು ಕಂಡು ಆದ ಆನಂದ ಅಷ್ಟಿಷ್ಟಲ್ಲ. ಆದರೆ ಅಂದಿನ ಕಾರ್ಯಕ್ರಮ ಸರಿಯಾದ ನಿಗದಿತ 5.30ಪಿ.ಎಂ.ಗೆ ಪ್ರಾರಂಭವಾಗಿದ್ದರೆ ತಮ್ಮನ್ನು ಕಾಣುವ ಅವಕಾಶ ನನಗೆ ಕಳೆದುಹೋಗುತ್ತಿತ್ತು, ಯಾಕಂದ್ರೆ ಒಬ್ಬ ಸರಕಾರಿ ನೌಕರನಾದ ನಾನು ಸಾಯಂಕಾಲ 5.30ಕ್ಕೆ ಕೆಲಸ ಮುಗಿಸಿಕೊಂಡು ಬಸ್ ಹಿಡಿದು ಗುಲಬರ್ಗಾ ತಲುಪಿ ಕಾರ್ಯಕ್ರಮದಲ್ಲಿ ತಮ್ಮನ್ನು ಕಾಣಲು ಧಾವಿಸಿ ಬಂದೆ.

ನಿಗದಿತ ಸಮಯದಲ್ಲಿ ಕಾರ್ಯಕ್ರಮಕ್ಕೆ ಹಾಜರಾಗುವ ತಮ್ಮ ಬಗ್ಗೆ ಪತ್ರಿಕೆಯಲ್ಲಿ ಗಮನಿಸಿದ್ದ ನಾನು ತಮ್ಮನ್ನು ಕಾಣಲಾಗುತ್ತೊ ಇಲ್ಲವೊ ಎಂದು ದುಗುಡದಿಂದಲೇ ತುಂಬಾ ಆಶಾವಾದಿಯಾಗಿ ಬಂದೆ. ತಮ್ಮನ್ನು ದೂರದಿಂದಲೇ ತಮ್ಮ ಸರಳ, ವಸ್ತುನಿಷ್ಠ, ಜೀವಂತ ಶೈಲಿಯ ಹಾಸ್ಯ ಬೆರೆತ ಮಾತು ಕೇಳಿ ನನ್ನ ಅಭಿಮಾನದ ಮೂರ್ತಿಗೆ ದೂರದಿಂದಲೇ ನಮಿಸಿ ಹಿಂದಿರುಗಿದೆ.

-ಸಿದ್ದರಾಮ ಹೊನಕಲ್ಲ, ಗುಲಬರ್ಗಾ

ಡಾ.ರಾಜ್‌ಕುಮಾರ್ ಸ್ವರ್ಗದಲ್ಲಿ ಏನು ಮಾಡುತ್ತಿದ್ದಾರೆ?

ಕೆ.ಶ್ರೀನಿವಾಸ್, ಮಂಡ್ಯ
ರಾಜಕಾರಣಿಗಳು ತಮ್ಮ ಆತ್ಮಕತೆಯನ್ನು ಬರೆಯುವುದಿಲ್ಲವೇಕೆ?
* ಪುಢಾರಿಗಳೇ ಅವರ ಆತ್ಮರತಿಕಥನ ಬರೆಯಲು ರೆಡಿ ಇರುತ್ತಾರೆ ಅದಕ್ಕೆ.

ಕೆ.ಪ್ರಾಣೇಶ್ ರಾವ್, ಹಗರಿಬೊಮ್ಮನಹಳ್ಳಿ
ರಾಜಕೀಯ ಸನ್ಯಾಸ ಸ್ವೀಕರಿಸುತ್ತೇನೆ ಎನ್ನುವುದರ ಅರ್ಥ ವೇನು?
* ಅವರು ಚಟ್ಟಕ್ಕೇರಿದಾಗಲೇ ಈ ಮಾತು ಸತ್ಯ ಆಗುತ್ತೆ ಅಂತ.

ಜೆ.ಡಿ.ಎಲ್. ಮಂಜುವಾಣಿ, ದೊಡ್ಡಬಳ್ಳಾಪುರ
ಹೂವು ಕೊಡೋಕೆ ಹೆದರಲ್ಲ, ಮುಡಿಸೋಕೆ ಹೆದರುತ್ತಾನೆ?
* ಮುಡಿಸೋದಿಕ್ಕೂ, ಉಡಿಸೋದಿಕ್ಕೂ ನೇರ ಸಂಬಂಧ ಇರೋದ್ರಿಂದ!

ಕಾಮಗೆರೆ ಲ. ಕೃಷ್ಣೇಗೌಡ, ಮಂಚನಬೆಲೆ ಕಾಲೋನಿ
ಹಿರಿಯ ಅಧಿಕಾರಿಗಳು ಹೆಚ್ಚಾಗಿ ಬೆಂಗಳೂರಿನಲ್ಲಿ ವಾಸಿಸಲು ಇಷ್ಟಪಡುತ್ತಾರಲ್ಲ?
* ಕಿರಿಯ ಅಧಿಕಾರಿಗಳಾಗಿದ್ದಾಗ ಇತರೆಡೆ ಮೇಯ್ದುದ್ದನ್ನು ಆರಾಮವಾಗಿ ಅನುಭವಿಸಲು.

ಕೃಷ್ಣೇಗೌಡ, ತಳಗವಾದಿ
ರಾಮಮಂದಿರ ಕಟ್ಟುತ್ತೇವೆನ್ನುವ RSSನವರು ಭವ್ಯ ಬಂಗಲೆಗಳನ್ನು ಕಟ್ಟಿಕೊಂಡಿದ್ದೇಕೆ?
* ಸಂಗ್ರಹಿಸಿದ ಇಟ್ಟಿಗೆ-ದುಡ್ಡಿಗೆ ಕಾಣಿಸಿದ ಗತಿ.

ಎಸ್.ಕೆ. ಉಮಾ, ಸೊಂದೇಕೊಳ
ಈಗಿನ ಧಾರಾವಾಹಿಗಳಲ್ಲಿ ಗಂಡ ಇದ್ದರೂ ಎರಡನೇ ಮದುವೆ ಮಾಡುತ್ತಾರಲ್ಲ?
* ಗಂಡನ ಪಾತ್ರಧಾರಿ ಗೈರುಹಾಜರಾದಾಗ ವಿಧಿ ಇರುವುದಿಲ್ಲ.

ತೇಜಸ್ವಿನಿ ಎಸ್. ಕುಜುಮಗದ್ದೆ
ಪ್ರೀತಿಸಿ ಮೋಸ ಮಾಡುವ ಹುಡುಗರಿಗೆ ಏನು ಮಾಡಬೇಕು?
* ಕುಜುಮಗದ್ದೆಯಲ್ಲಿನ ಕಳೆ ಕಿತ್ತಾಕುವಂತೆ ಕಿತ್ತುಹಾಕಬೇಕು.

ಎಂ. ನಿಸರ್ಗ, ದಾವಣಗೆರೆ
ರಾಜಕಾರಣಿ-ಧರ್ಮಗುರು ಇವರಲ್ಲಿ ಹೆಚ್ಚು ಅಪಾಯಕಾರಿ ಯಾರು?
* ಪೇಜಾವರ ಬರೀ ಧರ್ಮ ಗುರುವಲ್ಲ, ಅಧ್ವಾನಿ ಬರೀ ರಾಜಕಾರಣಿಯಲ್ಲ, ಇಬ್ಬರೂ ಸೇರಿದರೆ ಗಂಡಾಂತರ ತಪ್ಪಿದ್ದಲ್ಲ.

ಪೂರ್ಣಿಮಾ, ಹಗರಿಬೊಮ್ಮನಹಳ್ಳಿ
ಹರಟೆಗೂ ತಲೆಹರಟೆಗೂ ಇರುವ ವ್ಯತ್ಯಾಸ?
ಎಸ್.ಎಲ್. ಭೈರಪ್ಪ ಮಾಡೋದು ಹರಟೆ, ಚಿಮೂ ಮಾಡೋದು ತಲೆಹರಟೆ.



ಆ.ರಾ.ಮಂಜುನಾಥ್, ಗೆದರೆ
ಹಕ್ಕಿ ಜ್ವರಕ್ಕೂ, ಹುಡ್ಗೀರ ಜ್ವರಕ್ಕೂ ಇರುವ ವ್ಯತ್ಯಾಸ?
* ಜ್ವರ ಬಂದರೂ ತಿನ್ನೋದು ಬಿಡಲ್ಲ ಕಣ್ರೀ ಜನ.

ಅ. ರೆಡ್ಡಿ, ಬೆಂಗಳೂರು
ಜಾತ್ಯತೀತ ಎಂದರೇನು?
* ಲಂಕೇಶ್‌ವಾದ.

ಕವಿತಾ ಮಧುಸೂದನ್, ದಾವಣಗೆರೆ
ಶಿವರಾಜ್‌ಕುಮಾರ್ ಆತ್ಮಕತೆ ಬರೆಸಿಕೊಳ್ಳುವಷ್ಟು ಪ್ರಬುದ್ಧರೆ?
* ಆದಕ್ಕೆ ಬೇಕಿರುವುದು ಪ್ರಬುದ್ಧತೆ ಅಲ್ಲ, ಪ್ರಾಮಾಣಿಕತೆ.

ನಿರಂಜನ್, ಹುನಸನಹಳ್ಳಿ
ಕಂಚಿ ಶ್ರೀಗಳನ್ನು ಬಂಧಿಸಿದ್ದಕ್ಕೆ ಜಯಲಲಿತಾ ಸೋತಳು ಅಂತ ಹೇಳುತ್ತಿದ್ದಾರಲ್ಲಾ?
* ಜಯಲಲಿತಾ ಸೋತರೂ ನ್ಯಾಯ ಗೆಲ್ಲುತ್ತೆ ಅಂತ ಭರವಸೆ ನಮಗಿನ್ನೂ ಇದೆ.

ಎಂ.ಸಿ. ನಾಗರಾಜ್, ಕನಕಪುರ
ಅಗ್ರಹಾರ ಕೃಷ್ಣಮೂರ್ತಿ ಬ್ರಾಹ್ಮಣರಾ?
* ಇಲ್ಲ, ಅಗ್ರಹಾರದವರಿಗೆ ಬೇಡದ ಮೂರ್ತಿ.

ಇಂದಿರಾ ಶ್ರೀಧರ್, ದಾವಣಗೆರೆ
ಅಲ್ಪಾವಧಿಗೆ ಸಿಎಂ-ಪಿಎಂ ಆಗಿದ್ದ ದೇವೇಗೌಡ್ರಿಗೆ ಪೂರ್ಣಾವಧಿ ಕೆಲ್ಸ ಯಾವ್ದು?
* ಅಳೋದು, ಅಳೋದು ಬರಿ ಅಳೋದು, ಥೂತ್ತೇರಿ!

ಬಸವರಾಜ್ ಬೆಸ್ತರ್, ಹರಪನಹಳ್ಳಿ
ಐಶ್ವರ್ಯ ರೈಳಲ್ಲಿ ಅಂತಾಹದ್ದು ಏನೈತಿ?
* ಅವಳ ಕಿರುಬೆರಳಿನ ಗಾಯವನ್ನೇ ದೊಡ್ಡ ಗಂಡಾಂತರ ಮಾಡಿದವರನ್ನೇ ಕೇಳಿ.

ಬಹುಮಾನಿತ ಪ್ರಶ್ನೆಗಳು

ಜೆ.ಡಿ.ಎಸ್. ನಾರಾಯಣ್, ರಾಜಘಟ್ಟ
ಡಾ.ರಾಜ್‌ಕುಮಾರ್ ಮತ್ತು ವೀರಪ್ಪನ್ ಸ್ವರ್ಗದಲ್ಲೇನು ಮಾಡುತ್ತಿದ್ದಾರೆ?
* ವೀರಪ್ಪನ್ ಜೊತೆ ಕೂತು 'ಗಂಧದ ಗುಡಿ-ಭಾಗ 3' ಚಿತ್ರದ script ರೆಡಿ ಮಾಡುತ್ತಿದ್ದಾರಂತೆ.

ಆರೂಡಿ, ದೊಡ್ಡಬಳ್ಳಾಪುರ
ನಾಯಿಗಳಿಗೂ ಜನ ನಾಯಕರಿಗೂ ಇರುವ ವ್ಯತ್ಯಾಸ?
* ನಾಯಿಗಳು ಕಳ್ಳರನ್ನು ಓಡಿಸುತ್ತವೆ, ನಾಯಕರು ಕಳ್ಳರನ್ನು ಬಚ್ಚಾಸಿಕುತ್ತಾರೆ.

ಛೀ ತುಂಟಿ!

ತುಂಬ ತುಳುಕುತ್ತಿದ್ದ ಬಸ್ಸಿನಲ್ಲಿ ಮಧ್ಯವಯಸ್ಸಿನ ಮಹಿಳೆಯೊಬ್ಬಳು ಹದಿವಯಸ್ಸಿನ ಕುಂಕುಮಧಾರಿ ಹುಡುಗನ ಪಕ್ಕ ನಿಂತಿದ್ದಳು. ಬಸ್ಸಿನ ತುಯಿಲಾಟದಲ್ಲಿ ಹುಡುಗ ಮಹಿಳೆಯನ್ನು ಒತ್ತಿ ನಿಲ್ಲುತ್ತಿದ್ದುದನ್ನು ಪತ್ತೆ ಹಚ್ಚಿದ ಆಕೆ "ನಿನಗೆ ಅಕ್ಕ-ಅಮ್ಮ ಇಲ್ಲವಾ" ಎಂದಳು.

"ಉಂಟು. ಆದರೆ ಅವರತ್ರ ಇವೆಲ್ಲ ಮಾಡ ಕ್ಕಾಗುತ್ತಾ?" ಎಂದ.




ಜೀವನದ ವಿಷಮತೆಯನ್ನು ಸಹಿಸಿಕೊಳ್ಳುವುದರಲ್ಲಿಯೇ ಜಾಣತನವಿದೆ -ಮಹಾತ್ಮ ಗಾಂಧಿ

ಚೆಲ್ರೆ ಚನ್ನಿಗಪ್ಪ!

"ಖರ್ಗೆ ಒಬ್ಬ ಹರಾಮಿ...."

-ಹೀಗೆಂದಿರುವುದು ಅರಣ್ಯ ಸಚಿವ ಸಿ. ಚನ್ನಿಗಪ್ಪ ಈ ಹೊಲಸು ಬಾಯಿಯ ಗಬ್ಬು ರಾಜಕಾರಣಿ ದಳದ ನಾಯಕ ದೇವೇಗೌಡರ ಬಲಗೈ ಬಂಟ. ಮುಖ್ಯಮಂತ್ರಿ ಕುಮಾರಸ್ವಾಮಿಯವರ ಮಂತ್ರಿ ಮಂಡಲದಲ್ಲಿ ಕ್ಯಾಬಿನೆಟ್ ಸಚಿವ.



ಮೊನ್ನೆ ಮೇ 10 ನೇ ತಾರೀಖು ಕೆಂಗೇರಿ ಬಳಿ ವಿಶ್ವ ಒಕ್ಕಲಿಗ ಸಂಸ್ಥಾನದ ದೇವೇಗೌಡರ ಕೃಪಾಪೋಷಿತ ಚಂದ್ರಶೇಖರಾನಂದ ಸ್ವಾಮಿಯ ಮಠದ ಮಹಾದ್ವಾರ ಉದ್ಘಾಟನೆಯಲ್ಲಿ ಭಾಗವಹಿಸಿದ್ದ ಈ ಚನ್ನಿಗಪ್ಪ ಮಠಾಧೀಶರು, ಸಚಿವರು ಹಾಗೂ ಸಾರ್ವಜನಿಕರೆದುರೇ ಖರ್ಗೆಯನ್ನು ಗೇಲಿ ಮಾಡುತ್ತಾ "ಹರಾಮಿ" ಎಂದುಬಿಟ್ಟ. ಟಿವಿ ನ್ಯೂಸ್‌ನಲ್ಲಿ ಇದು ಪದೇಪದೇ ಪ್ರಸಾರವಾಯಿತು.

ರಾಜ್ಯದೆಲ್ಲೆಡೆ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಬಗ್ಗೆ ಈ ಚನ್ನಿಗಪ್ಪ ಹಾಗೂ ಕೆಪಿಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪರಸ್ಪರ ಆರೋಪ ಮಾಡಿಕೊಳ್ಳುತ್ತಾ ಜಗಳವಾಡುತ್ತಿದ್ದುದನ್ನು ರಾಜ್ಯದ ಜನತೆ ಕಳೆದ ಒಂದು ವಾರದಿಂದ ನೋಡುತ್ತಿದ್ದಾರೆ. ಇದು ಸರ್ಕಾರದ ಪಾಲಿಸಿಗಳಿಗೆ ಸಂಬಂಧಿಸಿದ ವಿಚಾರ. ಸಾರ್ವಜನಿಕವಾಗಿ ಚರ್ಚಿಸಬೇಕಾದ್ದೂ ಹೌದು. ಆದರೆ ಹಾಗಂತ ಪ್ರಶ್ನಿಸಿದ ಖರ್ಗೆ ಬಾಯಿ ಮುಚ್ಚಿಸಲು ಲಂಗೂ ಲಗಾಮಿಲ್ಲದೆ 'ಹರಾಮಿ' (ವ್ಯಭಿಚಾರಿ) ಎನ್ನಲು ಈ ಚನ್ನಿಗಪ್ಪ ಯಾವನು?


ಇದು ಕೇವಲ ಮೇಲುಜಾತಿ ದುರಹಂಕಾರ ಮಾತ್ರವಲ್ಲ, ಈ ಮೂರನೇ ದರ್ಜೆ ರಾಜಕಾರಣಿ ಮಿನಿಸ್ಟರ್ ಚನ್ನಿಗಪ್ಪ ಚರಂಡಿ ಲೆವೆಲ್‌ನಲ್ಲೇ ಬೆಳೆದು ಬಂದಿರುವುದೂ ಕಾರಣವಾಗಿದೆ.

ಅಣ್ಣನಿಗೇ ಅಮ್ಮನ್ ಅಂತಾನೆ

ಯಶವಂತಪುರ ಪೋಲೀಸ್ ಸ್ಟೇಷನ್‌ನಲ್ಲಿ ಪೇದೆಯಾಗಿದ್ದ ಚನ್ನಿಗಪ್ಪನಿಗೆ ಪೋಲೀಸ್ ಬಯ್ಗುಳ ರಕ್ತದಲ್ಲೇ ಸೇರಿಹೋಗಿದೆ. ಜೊತೆಗೆ ಈತ ನಡೆಸುತ್ತಿರುವ ಮೀಟರ್ ಬಡ್ಡಿ ದಂಧೆಯಂತೂ ಹೊಲಸು ಮಾತು, ಒರಟು ವರ್ತನೆಗಳನ್ನು ಇನ್ನಷ್ಟು ಬೆಳೆಸಿದೆ.



ಈ ಚನ್ನಿಗಪ್ಪ ತನ್ನ ಒಡಹುಟ್ಟಿದ ಅಣ್ಣನಿಗೇ 'ನಿನ್ನಮ್ಮನ್' ಎನ್ನುತ್ತಾನೆ ಎಂದರೆ ಇವನೆಂತಾ ತಿಪ್ಪೇಹುಳ ಇರಬೇಕು ಯೋಚಿಸಿ. ಲಫಡಾ ಕೆಲಸ ಮಾಡಿ ಪೋಲೀಸ್ ಇಲಾಖೆಯಿಂದ ಒದ್ದೋಡಿಸಲ್ಪಟ್ಟ ಮೇಲೆ ರಾಜಕೀಯಕ್ಕೆ ಬಂದ ಚನ್ನಿಗಪ್ಪ ಕಳೆದ ಎರಡು ದಶಕಗಳಿಂದಲೂ ದೇವೇಗೌಡರ ನೆಚ್ಚಿನ 'ಪ್ಯಾದೆ'ಯಾಗಿ ಪೋಷಿಸಲ್ಪಟ್ಟಿದ್ದಾನೆ. ಕೊರಟಗೆರೆ ಕ್ಷೇತ್ರದ ಭೈರನಾಯಕನಹಳ್ಳಿಯ ಈತ ಶಾಸಕನಾಗಿ ಗೆದ್ದಿರುವುದು ಇದು ಮೂರನೇ ಬಾರಿ. ಈ ಅವಧಿಯಲ್ಲಿ ಕನಿಷ್ಠ ದೇವೇಗೌಡರಾದರೂ ಈತನಿಗೆ ಸಭ್ಯತೆ, ನಾಗರೀಕ ವರ್ತನೆಗಳನ್ನಾದರೂ ಕಲಿಸಬಹುದಿತ್ತು.



ಆದರೆ ಅದೆಂದೂ ಆಗಲಿಲ್ಲ. ಈಗ ಚನ್ನಿಗಪ್ಪ ಯಾವ ಲೆವೆಲ್‌ಗೆ ಹೋಗಿದ್ದಾನೆಂದರೆ ಈತನ ಮಗ ಗೌರಿಶಂಕರ ಎಂಬುವವನು ತ್ಯಾಮಗೊಂಡ್ಲುವಿನಿಂದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗೆ ಗೆದ್ದು ಬಂದಿದ್ದು ಹೊಲಸು ಮಾತಾಡುವುದರಲ್ಲಿ ಚನ್ನಿಗಪ್ಪನ ಅಪ್ಪನಂತಾಗಿದ್ದಾನೆ.

ಇಂತಹ 'ಸಂಸ್ಕೃತರ' ಸಂತತಿ ಕರ್ನಾಟಕ ರಾಜಕೀಯದಲ್ಲಿ ಹೀಗೆ ಪ್ರವರ್ಧಮಾನಕ್ಕೆ ಬರುತ್ತಿರುವುದು ಅತ್ಯಂತ ಅಪಾಯಕಾರಿಯಾಗಿದೆ.


ಖರ್ಗೆಯವರ ಆರೋಪಗಳಿಗೆ ಉತ್ತರಿಸುವಾಗ ಚನ್ನಿಗಪ್ಪ ಸಂಸದೀಯ ಪರಿಭಾಷೆಯೊಳಗೇ ಮಾತನಾಡಬೇಕು. ಅದು ಬಿಟ್ಟು ಈತನ ಮೇಲುಜಾತಿ ದುರಹಂಕಾರ, ದುಡ್ಡು, ಅಧಿಕಾರದ ಬಲವನ್ನು ಪ್ರದರ್ಶಿಸುವುದಲ್ಲ, ಅದು ಸರಿ....

ಈ ಚನ್ನಿಗಪ್ಪ ತಾನೇನೋ ಸತ್ಯಹರಿಶ್ಚಂದ್ರನ ಅವತಾರ, ಅನಾಥಶ್ರಮ ಕಟ್ಟಿಸಿದ್ದೀನಿ.... ಎಂದೆಲ್ಲಾ ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾನೆ. ಈ ಅನಾಥಶ್ರಮವನ್ನು ಚನ್ನಿಗಪ್ಪನ ಆಸ್ತಿ

ನಂದಿ ಬೆಟ್ಟದಲ್ಲಿ ಅಕ್ರಮ ಗಣಿಗಾರಿಕೆ
ಚನ್ನಿಗಪ್ಪನ ಶಿಷ್ಯರಿಂದ ಲೂಟಿ



ರೈತನಾಯಕರೊಂದಿಗೆ ಚನ್ನಿಗಪ್ಪ




ಕೋ-ಜಾ ಸರ್ಕಾರದ ಅರಣ್ಯ ಸಚಿವ ಸಿ. ಚನ್ನಿಗಪ್ಪನ ಕರ್ತವ್ಯಪ್ರಜ್ಞೆ, ವೀರಾವೇಶ, ಪೌರುಷ ದಿನೇದಿನೇ ಹೆಚ್ಚಾಗುತ್ತಿದೆ. ವಾರಗಟ್ಟಲೆ ಕನಕಪುರ ತಾಲ್ಲೂಕಿನಲ್ಲಿ ಮೊಕ್ಕಾಂ ಮಾಡಿ 145 ಅಕ್ರಮ ಗಣಿಗಾರಿಕೆಗಳನ್ನು ಪತ್ತೆಹಚ್ಚಿ ಭರ್ಜರಿ ಪತ್ರಿಕಾಗೋಷ್ಠಿ ನಡೆಸಿ ಬಂದಿದ್ದಾರೆ. ಅತ್ತ ಬಳ್ಳಾರಿಯಲ್ಲೂ ಅಕ್ರಮ ಕಬ್ಬಿಣದ ಅದಿರಿನ ಗಣಿಗಾರಿಕೆಗೆ ಲಗಾಮು ಹಾಕುವುದಾಗಿ ಗುಟುರು ಹಾಕುತ್ತಿದ್ದಾರೆ.



ತಹಶೀಲ್ದಾರ್

ಚಿದಾನಂದ್

ಆದರೆ ಇದೇ ಚನ್ನಿಗಪ್ಪನ ಖಾಸ ಶಿಷ್ಯ ಜಾಲಳ್ಳಿ ಶಶಿಕುಮಾರ ಎಂಬ ಖದೀಮ ವಿಶ್ವ ಪ್ರಸಿದ್ಧ ನಂದಿಬೆಟ್ಟದ ತಪ್ಪಲಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾನೆ. ಇವನೊಂದಿಗೆ ಎಂ.ಕೆ. ಸೊಹೇಲ್ ಎಂಬ ಇನ್ನೊಬ್ಬ ಫಟಿಂಗ, ಎಂ. ರವಿಕುಮಾರ್ ಎಂಬ ದಗಲಬಾಜಿ, ಚಂದ್ರಶೇಖರ್ ನಾಯಕನೆಂಬ ಖದೀಮ... ಹೀಗೆ ಕುಖ್ಯ ಒಂದು ಡಜನ್ ಜಲ್ಲಿ ಸೈಜುಕಲ್ಲು ದಂಧೆಕೋರರು ನಂದಿ ಬೆಟ್ಟದ ಸುತ್ತಾ ಕಳ್ಳತನದ ಗಣಿಗಾರಿಕೆ ನಡೆಸುತ್ತಿದ್ದಾರೆ. ಇವರ ಪೈಕಿ ಜಾಲಳ್ಳಿ ಶಶಿಕುಮಾರ ಒಬ್ಬನೆ ದಿನಕ್ಕೆ ನಾನೂರೈವತ್ತು ಲಾರಿ ಲೋಡ್ ಜಲ್ಲಿ ಕಲ್ಲನ್ನು ಬೆಂಗಳೂರಿಗೆ ಸಾಗಿಸುತ್ತಿದ್ದಾನೆ. ಇವನ ಸಪ್ತಗಿರಿ ಬಿಲ್ಡ್ ಟೆಕ್ ಪ್ರೈ ಲಿ ಎಂಬ ಕಂಪನಿ 30 ಕೋಟಿ ರೂಪಾಯಿ ಖರ್ಚು ಮಾಡಿ ಜರ್ಮನಿಯಿಂದ ರಾಕ್ಷಸಾಕಾರದ ಮೆಷಿನ್‌ಗಳನ್ನು ತರಿಸಿದ್ದು ಅವು ನಿತ್ಯ ನಂದಿಬೆಟ್ಟದ ಅಕ್ಕಪಕ್ಕದ ಗಿರಿ ಶ್ರೇಣಿಗಳ ಹೊಟ್ಟೆ ಬಗೆದು ಹಾಕುತ್ತಿವೆ. ಬಂಡೆ ಸಿಡಿಸಲು ಈ ಶಶಿಕುಮಾರ ಬಳಸುತ್ತಿರುವ ಡೈನಾಮೇಟ್‌ಗಳು ಸುತ್ತಲಿನ ಹಳ್ಳಿಗಳಾದ ಸಾಧುಮಠ, ಚಿಕ್ಕರಾಯಪ್ಪನಹಳ್ಳಿ, ದೊಡ್ಡರಾಯಪ್ಪನ ಹಳ್ಳಿ, ಚೆನ್ನಾಪುರ, ಸೀಗೇಹಳ್ಳಿ, ಮೆಳೇಕೋಟೆ, ಸೊಣ್ಣಾಪುರಗಳ ಬಡರೈತರ ಮನೆಗೋಡೆಗಳಲ್ಲಿ ಬಿರುಕು ಮೂಡಿಸುತ್ತಿವೆ. ಡೈನಾಮೇಟ್ ಸ್ಫೋಟದ ಕರ್ಕಶ ಸದ್ದಿಗೆ ಬೆದರುತ್ತಿರುವ ಸೀಮೆ ಹಸುಗಳು ಹಾಲು ಕರೆಯುವುದನ್ನೇ ಕಡಿಮೆ ಮಾಡಿಬಿಟ್ಟಿವೆ. ಬಹಳ ಮುಖ್ಯವಾಗಿ ಇದೇ ಬೆಟ್ಟದ ಸಾಲುಗಳಲ್ಲಿ ಹುಟ್ಟಿ ಹರಿಯುವ ಅರ್ಕಾವತಿ-ಕುಮುದ್ವತಿ ನದಿಗಳ ಅಸ್ತಿತ್ವಕ್ಕೆ ಈ ಜಲ್ಲಿ ಕಲ್ಲು ಕಳ್ಳರ ಗ್ಯಾಂಗ್ ಅಪಾಯ ತಂದೊಡ್ಡಿದೆ. ಇದರಿಂದಾಗಿ ಬೆಂಗಳೂರಿಗೆ ಕುಡಿಯುವ ನೀರು ಕೊಡುತ್ತಿರುವ ಇಡೀ ತಿಪ್ಪಗೊಂಡನ ಹಳ್ಳಿ ಜಲಾಶಯದ ಅಸ್ತಿತ್ವಕ್ಕೇ ಅಪಾಯ ವಾಗಲಿದೆ.




ಶಶಿಕುಮಾರ

ಇಷ್ಟಕ್ಕೂ ಈ ಜಲ್ಲಿ ಕಳ್ಳರು ಗಣಿಗಾರಿಕೆ ನಡೆಸುತ್ತಿರುವುದು ಪಕ್ಕಾ ಅರಣ್ಯ ಪ್ರದೇಶದಲ್ಲೇ. ರೆವಿನ್ಯೂ ಇಲಾಖೆಯವರಿಗೆ ಕೈತುಂಬಾ ಲಂಚ ತಿನ್ನಿಸಿ ಗಣಿ ಇಲಾಖೆ ಅಧಿಕಾರಿಗಳಿಗೆ ಬಾಯಿ ತುಂಬಾ ಲಂಚದ ಅಮೇಧ್ಯ ತುರುಕಿ ಅರಣ್ಯ ಭೂಮಿಗೇ ರೆವಿನ್ಯೂ ಸರ್ವೆ ನಂಬರ್ ಹಾಕಿಸಿಕೊಂಡು ಈ ಖದೀಮರು ಲೀಸ್ ಪಡೆದುಕೊಂಡಿದ್ದಾರೆ. ಈ ಅಕ್ರಮ ಗಣಿಗಾರಿಕೆಯ ವಿರುದ್ಧ ರಾಜ್ಯ ರೈತ ಸಂಘದ ದೊಡ್ಡಬಳ್ಳಾಪುರ ಘಟಕ ಈಗ ಹೋರಾಟ ನಡೆಸುತ್ತಿದೆ.

ನಂ ಹುಡುಗ್ರು ಬಿಡ್ರಿ ಅಂದ ಚನ್ನಿಗಪ್ಪ

ಕರ್ನಾಟಕದಲ್ಲಿ ಎಲ್ಲೇ ಆಗಲಿ ಯಾರೇ ಆಗಲೀ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದರೆ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಅರಣ್ಯ ಮಂತ್ರಿ ಸಿ. ಚನ್ನಿಗಪ್ಪ ದಿನ ಬೆಳಗಾದರೆ ಬೊಗಳುತ್ತಿದ್ದಾನೆ. ಆದರೆ ಈತನ ಮಾತಿಗೆ ನಂದಿಬೆಟ್ಟದ ಜಲ್ಲಿ ಕಳ್ಳರು ಕವಡೆ ಕಾಸಿನ ಬೆಲೆಯನ್ನು ನೀಡುತ್ತಿಲ್ಲ, ಇಲಾಖಾ ಅಧಿಕಾರಿಗಳು ಅದನ್ನು ಕೇರ್ ಮಾಡುತ್ತಿಲ್ಲ. ಜಾಲಳ್ಳಿ ಶಶಿಕುಮಾರನ ಸಪ್ತಗಿರಿ ಬಿಲ್ಡ್ ಟೆಕ್ ಪ್ರೈ ಲಿ ಕಂಪನಿ ದೊಡ್ಡಬಳ್ಳಾಪುರ ತಾಲ್ಲೂಕಿನ ಮೆಳೇಕೋಟೆ ಗ್ರಾಮ ಪಂಚಾಯ್ತಿಯ ಚನ್ನಾಪುರ ಗ್ರಾಮದ ಸರ್ವೆ ನಂಬರ್ 27, ಚಿಕ್ಕರಾಯಪ್ಪನಹಳ್ಳಿ ಸರ್ವೆ ನಂ. 57 ರಲ್ಲಿ ಒಟ್ಟು 21 ಎಕರೆ ಪ್ರದೇಶವನ್ನು ಜಲ್ಲಿ ಹಾಗೂ ಕಲ್ಲಿನ ಮರಳು ಗಣಿಗಾರಿಕೆಗೆ 5 ವರ್ಷಗಳ ಲೀಸ್ ಪಡೆದುಕೊಂಡಿದೆ. ಗಣಿ ಇಲಾಖೆಯು ದಿನಾಂಕ 10.5.2005 ರಂದು ಇದಕ್ಕೆ ಅನುಮತಿ ನೀಡಿದೆ. ಅದೇ ಇಲಾಖೆಯ ನಿಜಗುಣ ಎಂಬ ಭ್ರಷ್ಟ ಇಂಜಿನಿಯರ್ ಈ ಗಣಿ ಪ್ರದೇಶದ ಸ್ಕೆಚ್ ರೆಡಿ ಮಾಡಿದ್ದು ಅರಣ್ಯ ಇಲಾಖೆಗೆ ಸೇರಿರುವ ಭೂಮಿಯನ್ನೇ ರೆವಿನ್ಯೂ ಜಾಗ ಎಂದು ನಮೂದಿಸಿಬಿಟ್ಟಿದ್ದಾನೆ. ಅದೇ ರೀತಿ ಸೊಹೇಲ್ ಎಂಬುವನಿಗೆ ಸರ್ವೆ ನಂಬರ್ 57 ರಲ್ಲಿ 10 ಎಕರೆ, ಚಂದ್ರಶೇಖರ್ ನಾಯಕನಿಗೆ 8 ಎಕರೆ, ಶಂಕರ್ ಸ್ಟೋನ್ ಕ್ರಷರ್ಸ್‌ಗೆ 4 ಎಕರೆ ಅರಣ್ಯ ಭೂಮಿ ಧಾರೆ ಎರೆದು ಕೊಡಲಾಗಿದೆ.



ಬಿರುಕು ಬಿಟ್ಟಿರುವ ಬಂಡೆ

ಈ ಖದೀಮರೆಲ್ಲಾ ಕಟ್ಟುದ ಗಾತ್ರದ ರಾಕ್ಷಸ ಕ್ರಷಿಂಗ್ ಮೆಷಿನ್‌ಗಳನ್ನು ತರಿಸಿ ಇಡೀ ಬೆಟ್ಟಗಳಿಗೆ ಬಾಂಬಿಡುತ್ತಿದ್ದಾರೆ. ಇದರಿಂದಾಗುವ ಅಪಾಯವನ್ನು ಗಮನಿಸಿದ ರೈತ ಸಂಘದ ಡಾ. ವೆಂಕಟರೆಡ್ಡಿ, ಡಾ. ಶ್ರೀನಿವಾಸ ಹಾಗೂ ನಾಗರಾಜ್ ಮುಂತಾದ ರೈತ ಮುಖಂಡರು ಪ್ರತಿಭಟನೆ, ಧರಣಿ, ಜನಜಾಗೃತಿಯ ಹೋರಾಟಗಳನ್ನು ಶುರು ಮಾಡಿದೇಟಿಗೆ ಜಲ್ಲಿ ಕಳ್ಳರಿಗೆ ರೇಗಿ ಹೋಗಿದೆ. ಫೋನ್ ಮಾಡಿ ಕೊಲೆ ಬೆದರಿಕೆ ಹಾಕುವುದು, ಪುಂಡರನ್ನು ಕರೆಸಿ ಧಮಕಿ ಹಾಕುವ ಕೆಲಸಗಳನ್ನು ಅವರು ಮಾಡುತ್ತಿದ್ದಾರೆ. ಆದರೆ ಈ ಇಡೀ ಜಲ್ಲಿ ದಂಧೆಯ ದಾಖಲೆಗಳನ್ನೆಲ್ಲಾ ಪತ್ತೆಹಚ್ಚಿರುವ ರೈತ ಸಂಘದವರು ದೊಡ್ಡಬಳ್ಳಾಪುರ ತಹಶೀಲ್ದಾರನಿಗೆ ದೂರು ಕೊಟ್ಟಿದ್ದಾರೆ. ಆತ ಬಂದು ಸ್ಥಳ ಪರಿಶೀಲನೆ ಮಾಡಿಯೂ ಹೋಗಿದ್ದಾನೆ. ಗಣಿಗಾರಿಕೆಗೆ ಕೊಟ್ಟಿರುವ ಲೀಸ್ ಅಕ್ರಮ ಎಂಬುದು ಅವನಿಗೂ ಗೊತ್ತಾಗಿದೆ. ಆದರೂ ಈಗಲೂ ಅಲ್ಲಿನ ಅರಣ್ಯ ಪ್ರದೇಶದಲ್ಲಿನ ಅಕ್ರಮ ಗಣಿಗಾರಿಕೆ ನಿಂತಿಲ್ಲ. ಕಳೆದ ಏಪ್ರಿಲ್ ತಿಂಗಳಲ್ಲಿ ದಾರಿ ತಪ್ಪಿ ಹೋದಂತೆ

ತಿಪ್ಪಗೊಂಡನಹಳ್ಳಿಯ ಮಹತ್ವ

ಬೆಂಗಳೂರಿನಿಂದ ಪಶ್ಚಿಮಕ್ಕೆ 34 ಕಿ.ಮೀ. ದೂರದಲ್ಲಿರುವ ತಿಪ್ಪಗೊಂಡನಹಳ್ಳಿ ಜಲಾಶಯ ನಗರದ ಕುಡಿಯುವ ನೀರಿನ ಅಗತ್ಯ ಪೂರೈಸುತ್ತಿರುವ ಒಂದು ಪ್ರಮುಖ ಕೇಂದ್ರ. ನಂದಿಬೆಟ್ಟದ ಸಾಲುಗಳಲ್ಲಿ ಹುಟ್ಟುವ ಅರ್ಕಾವತಿ, ಚಿತ್ರಾವತಿ, ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ ಹಾಗೂ ಪಾಪಾಗ್ನಿ ನದಿಗಳ ಪೈಕಿ ಅರ್ಕಾವತಿ ಹಾಗೂ ಮುಂದೆ ಬಂದು ಸೇರುವ ಕುಮುದ್ವತಿ ನದಿಗಳು ತಿಪ್ಪಗೊಂಡನಹಳ್ಳಿಗೆ ಲಕ್ಷಗಟ್ಟಲೆ ಗ್ಯಾಲನ್ ನೀರನ್ನು ತಂದು ಸುರಿಯುತ್ತಿವೆ. ಈಗ ಚನ್ನಿಗಪ್ಪನ ಶಿಷ್ಯರು ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಚಿಕ್ಕಗಿರಿ ಬೆಟ್ಟ, ಅದರ ಅಸುಪಾಸಿನ ಕಳಾರಗಿರಿ, ನಂದಿಗಿರಿ, ವರಗಿರಿ, ದಿಬ್ಬಗಿರಿ (ಅಕ್ಕಯ್ಯಮ್ಮನ ಗುಟ್ಟೆ)ಗಳು ಮಿಲಿಯಾಂತರ ವರ್ಷಗಳ ಹಿಂದೆ ರೂಪುಗೊಂಡಿರುವಂತವು. ಈ ಬೆಟ್ಟ ಸಾಲುಗಳಲ್ಲಿ ಹುಟ್ಟುವ ನೀರಿನ ಝರಿಯೇ ಹರಿಯುತ್ತಾ ಚಿಕ್ಕರಾಯಪ್ಪನ ಕೆರೆ, ಮೆಳೇಕೋಟೆ ಕೆರೆ, ಬೀಡಿಕೆರೆ, ಕಂಚಗಾನಹಳ್ಳಿಕೆರೆ, ರಾಜಘಟ್ಟಕೆರೆ, ಕೊಡಿಗೆಹಳ್ಳಿಕೆರೆ, ಶಿವಪುರ ಕೆರೆ, ಅಮಾನಿ ಕೆರೆ, ನಾಗರಕೆರೆ, ಹನಿಯೂರು ಕೆರೆಗಳನ್ನು ತುಂಬಿಸಿ ಹೆಸರಘಟ್ಟ ಕೆರೆವರೆಗೂ ಹೋಗುತ್ತದೆ. ಕೆಲವೆಡೆ ಕಾಣುವಂತೆ ಉಳಿದೆಡೆ ಅದೃಶ್ಯವಾಗಿ ಹರಿಯುವ ಅರ್ಕಾವತಿ ನದಿಯೇ ಈ ಕೆರೆಗಳಿಗೆಲ್ಲಾ ನೀರುಣಿಸುವ ಜಲ ಧಾರೆಯಾಗಿದೆ.

ಒಟ್ಟಾರೆ ಚಿಕ್ಕಬಳ್ಳಾಪುರ, ದೇವನಹಳ್ಳಿ, ದೊಡ್ಡಬಳ್ಳಾಪುರ, ಮಾಗಡಿ, ನೆಲಮಂಗಲಗಳ ಒಂದೂವರೆ ಸಾವಿರ ಚದರ ಮೈಲಿಯಷ್ಟು ನೀರಿನ ಕ್ಯಾಚ್‌ಮೆಂಟ್ ಏರಿಯಾ ಇರುವ ತಿಪ್ಪಗೊಂಡನಹಳ್ಳಿ ಜಲಾಶಯದ ಪ್ರಾಣಪಕ್ಷಿ ಇರುವುದೇ ನಂದಿ ಬೆಟ್ಟಶ್ರೇಣಿ ಹಾಗೂ ಅಲ್ಲಿನ ಕಾಡುಗಳಲ್ಲಿ.

ಮೂರ್ಖ ಮಂತ್ರಿ ಚನ್ನಿಗಪ್ಪನಿಗೆ ಇವೆಲ್ಲಾ ತಿಳಿಯುವುದಾದರೂ ಹೇಗೆ?

ಹಾಗಾಗಿ ರೈತ ಸಂಘದವರ ಕಾಳಜಿಯಾಗಲಿ, ಆಕ್ಸ್‌ಫಾಂ ನಂತಹ ಸಂಸ್ಥೆಯ ಅಧ್ಯಯನ, ಕಾರ್ಯ ಚಟುವಟಿಕೆಗಳ ಮಹತ್ವವಾಗಲೀ ಈ ದದ್ದುಶಿಖಾಮಣಿಗೆ ಗೊತ್ತಾಗುತ್ತಿಲ್ಲ. ಇದೆಲ್ಲಕ್ಕಿಂತಾ ಬಹಳ ಮುಖ್ಯವಾಗಿ ಜಲ್ಲಿಕಳ್ಳ ಜಾಲಳ್ಳಿ ಶಶಿಕುಮಾರ್ ಚನ್ನಿಗಪ್ಪನ "ನಂ ಹುಡುಗ" ಆಗಿರುವಾಗ ಕಾಯ್ದೆ ಕಾನೂನುಗಳು ಜಾರಿಯಾಗಲು ಇಲ್ಲಿ ಹೇಗೆ ಸಾಧ್ಯ?

ಜೀವನವೆಂಬುದು ಮುಳ್ಳಿನ ಹಾಸಿಗೆ ಕಳ್ಳೀಹಾಲಿನ ಘನರಸ ತಂಗಿ -ದ.ರಾ. ಬೇಂದ್ರೆ

ಆರಿಗೆ. ದಾನ ಮಾಡಿ ಕಟ್ಟಿಸಿಲ್ಲ. ಇಟ್ಟಿಗೆ, ಮರಳು, ಸಿಮೆಂಟ್, ಮರ ಎಲ್ಲವನ್ನೂ ಅವರಿವರಿಂದ ದಾನ ಕಿತ್ತು ಕಟ್ಟಿಸಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಚನ್ನಿಗನ ಕೋಟ್ಯಂತರ ರೂಪಾಯಿಗಳ ಆಸ್ತಿ . ವ್ಯವಹಾರಗಳು ಹಾಗೇ ಇವೆ.

ಅರಣ್ಯ ಖಾತೆ ಸಚಿವನಾದ ಮೇಲೆ ಮೈಮೇಲೆ ದೇವರು ಬಂದಂತೆ ಆಡುತ್ತಿರುವ ಚನ್ನಿಗಪ್ಪನಿಗೆ ಈ ನಾಡಿನ ಸುಮ್ಮು ಭೂಮಿಯನ್ನು ರಕ್ಷಿಸಲೇ ಬೇಕೆಂದಿದ್ದರೆ ಮೊದಲು ಒಂದು ಕೆಲಸ ಮಾಡಿ ತೋರಿಸಲಿ. ಜಲ್ಲಿಕಳ್ಳ ಶಶಿಕುಮಾರ ಅಲ್ಲದೆ ಅದೇ ನಂದಿಬೆಟ್ಟದ ಏರಿಯಾದಲ್ಲಿ ITC ಕಂಪನಿ 610 ಎಕರೆ ಭೂಮಿಗೆ ಅಕ್ರಮವಾಗಿ ಬೇಲಿ ಹಾಕಿಕೊಂಡು ಒಂದು ಫೈವ್ ಸ್ಟಾರ್ ಹೋಟೆಲ್ ಕಟ್ಟುತ್ತಿದೆ.

ಇದೆಲ್ಲಾ ಅರಣ್ಯ ಭೂಮಿ!


ಚನ್ನಿಗಪ್ಪನಿಗೂ ಇದು ಗೊತ್ತಿದೆ.

ಆದರೂ ಸುಮ್ಮನಿರುವುದೇಕೆ?

ಅಸಲಿ ಹರಾಮಿತನ ಅಂದರೆ ಇದೇ ತಾನೆ?

-ಈಶ

ಮೇಲುಜಾತಿ ದುರಹಂಕಾರ




ಒಕ್ಕಲಿಗ-ಲಿಂಗಾಯಿತ ಒಕ್ಕೂಟದ ಈಗಿನ ಸರ್ಕಾರದ ವರ್ತನೆ, ವ್ಯಕ್ತಿತ್ವದಲ್ಲೆಲ್ಲಾ ಮೇಲುಜಾತಿ ದುರಹಂಕಾರ ಹಾಗೂ ಫ್ಯೂಡಲ್.

ಠೇಂಕಾರಗಳೇ ತುಂಬಿವೆ. ಆ ತಿಮಿರು ಜಾಸ್ತಿಯಾಗೇ ಒಕ್ಕಲಿಗ ಜಾತಿಯ ಚನ್ನಿಗಪ್ಪ ಹಿರಿಯ ಕಾಂಗ್ರೆಸ್ ನಾಯಕ ಹಾಗೂ ದಲಿತ ಹಿನ್ನೆಲೆಯ ಮಲ್ಲಿಕಾರ್ಜುನ ಖರ್ಗೆಯವರನ್ನು 'ಹರಾಮಿ' ಎಂದು ಬೈಯ್ದಿದ್ದಾನೆ. ಕುಮಾರಸ್ವಾಮಿ ನಿಜಕ್ಕೂ ಸಭ್ಯರಾಗಿದ್ದರೆ ಚನ್ನಿಗಪ್ಪನಂತಹ ಮೂರನೇ ದರ್ಜೆ ಹೊಲಸು ಬಾಯನ್ನು ತಮ್ಮ ಹತ್ತಿರಕ್ಕೂ ಬಿಟ್ಟುಕೊಳ್ಳುತ್ತಿರಲಿಲ್ಲವೇನೋ!

ಇದು ಚನ್ನಿಗಪ್ಪನ ಲೆವೆಲ್ಲು ಎಷ್ಟು ಎಂಬುದಕ್ಕಿಂತಾ ಈತನನ್ನು ಹತ್ತಿರ ಬಿಟ್ಟುಕೊಂಡಿರುವ ದೇವೇಗೌಡ-ಕುಮಾರಸ್ವಾಮಿಯವರ ಮಟ್ಟ ತೋರಿಸುತ್ತಿದೆ ಅಷ್ಟೇ. ಈ ಅಪ್ಪ-ಮಗ ತಮಗಾದವರ ವಿರುದ್ಧ ತಾವಾಡಲಾಗದ ಹೊಲಸು ಮಾತಿನ ದಾಳಿ ನಡೆಸಲು ಚನ್ನಿಗಪ್ಪನನ್ನು ಬಳಸಿಕೊಳ್ಳುತ್ತಿದ್ದಾರೆ ಅಷ್ಟೇ.

ಇನ್ನು ನಾಡಿನ ಯಾವೊಬ್ಬ ರಾಜಕಾರಣಿಯಾಗಲಿ, ದಲಿತ ಸಂಘಟನೆಗಳಾಗಲಿ ಇದರ ಬಗ್ಗೆ ಮಾತೇ ಆಡದಿರುವುದನ್ನು ನೋಡಿದರೆ ಇವರೆಲ್ಲಾ ದಿವಂಗತರಾಗಿ ಬಹಳ ಕಾಲವಾಗಿರಬೇಕು ಎನ್ನಿಸುತ್ತಿದೆ.



ಡಾ. ವೆಂಕಟರೆಡ್ಡಿ, ಡಾ. ಶ್ರೀನಿವಾಸ್, ವೆಂಕಟೇಶ್


ರೈತ ಸಂಘದ ದಿಟ್ಟ ಹೋರಾಟ

ರಾಜ್ಯ ರೈತ ಸಂಘದ ಅಧಿನಾಯಕ ಕೋಡಿಹಳ್ಳಿ ಚಂದ್ರಶೇಖರ್ ಇತ್ತೀಚೆಗೆ ಸೈಟ್ ಡೀಲ್ ಒಂದರಲ್ಲಿ ಹದಿನೈದು ಲಕ್ಷ ಕಿತ್ತು ಬೊಲೆರೊ ಕಾರ್ ಹತ್ತಿಕೊಂಡು ಮಜವಾಗಿ ಓಡಾಡಿಕೊಂಡಿರುವಾಗ, ಅತ್ತ....

ದೊಡ್ಡಬಳ್ಳಾಪುರದ ರೈತ ಸಂಘದ ಹೋರಾಟಗಾರರು ಈಗ ಸಚಿವ ಚನ್ನಿಗಪ್ಪನ ಶಿಷ್ಯರ ಅಕ್ರಮ ಗಣಿಗಾರಿಕೆ ವಿರುದ್ಧ ಶತಾಯ-ಗಥಾಯ ಹೋರಾಟಕ್ಕಿಳಿದಿದ್ದಾರೆ.

ತಹಶೀಲ್ದಾರ್ ಕಚೇರಿ ಮೆಳೆಕೋಟೆ ಗ್ರಾಮ ಪಂಚಾಯಿತಿಗಳ ಮುಂದೆ ಈಗಾಗಲೇ ಪ್ರತಿಭಟನೆ ನಡೆಸಿರುವ ರೈತರು ಗಣಿಗಾರಿಕೆ ನಡೆಯುತ್ತಿರುವ ಸ್ಥಳಕ್ಕೂ ಹೋಗಿ ಜೆಸಿಬಿ ಇನ್ನಿತರ ಮೆಷಿನ್‌ಗಳನ್ನು ಹಲ ಬಾರಿ ಸ್ಥಗಿತಗೊಳಿಸಿ ಬಂದಿದ್ದಾರೆ. ಶಶಿಕುಮಾರ

ರೈತ ಸಂಘದವರ ಪ್ರತಿಭಟನೆ



ಅರಣ್ಯ ಪ್ರದೇಶದೊಳಗೆಯೇ 2-3 ಕಿ.ಮೀ. ವರೆಗೂ ಅಕ್ರಮವಾಗಿ ಕಚ್ಚಾ ರಸ್ತೆ ಮಾಡಿಸಿದ್ದನ್ನು ಮುಚ್ಚಿ ಮತ್ತೆ ಲಾರಿಗಳು ಓಡಾಡದಂತೆ ಗುಂಡಿ ಅಗೆದು ಬಂದಿದ್ದಾರೆ.

ನಂದಿಬೆಟ್ಟದ ಸುತ್ತಾ ಇಷ್ಟೆಲ್ಲಾ ಗಲಾಟೆಗಳಾಗುತ್ತಿದ್ದರು ದೊಡ್ಡಬಳ್ಳಾಪುರದ ಶಾಸಕ ನರಸಿಂಹಸ್ವಾಮಿಯಾಗಲೀ ಅಥವಾ ಸಂಸದ ಜಾಲಪ್ಪನಾಗಲೀ ತುಟಿ ಪಿಟಿಕ್ ಎನ್ನುತ್ತಿಲ್ಲ, ಬರಿ ಹೆಸರಿಗಷ್ಟೇ ಇವರು ಕಾಂಗ್ರೆಸ್, ವಿರೋಧ ಪಕ್ಷವಾಗಿದ್ದರೂ ಒಳಗಡೆ ಜಲ್ಲಿಕಳ್ಳರ ಪರವಾಗಿ ಇದ್ದಾರೆ. ಇವರೊಂದಿಗೆ ದೇವೇಗೌಡರ ಶಿಷ್ಯ ಕುರುವಗೆರೆ ನರಸಿಂಹಯ್ಯನೆಂಬ ತರಲೆ, ತಾಲ್ಲೂಕು ಪಂಚಾಯಿತಿ ಮೆಂಬರ್ ತುಂಗಭದ್ರಮ್ಮನ ಗಂಡ ಚಿದಾನಂದ, ಲೋಕಲ್ ಪುಢಾರಿ ಬಸವರಾಜನೂ ಈ ಜಲ್ಲಿಕಳ್ಳರೊಂದಿಗೆ ಶಾಮೀಲಾಗಿ ದ್ದಾರೆ.

ಇಷ್ಟೆಲ್ಲಾ ದುಷ್ಟಶಕ್ತಿಗಳು ಒಟ್ಟಾಗಿದ್ದರೂ ರೈತ ಸಂಘದ ಡಾ. ವೆಂಕಟರೆಡ್ಡಿ ಡಾ. ಶ್ರೀನಿವಾಸ್ ಹಾಗೂ ನಾಗರಾಜ್ ಛಲದಿಂದ ತಮ್ಮ ಹೋರಾಟ ಮುಂದುವರೆಸಿರುವುದು ಮೆಚ್ಚಬೇಕಾದ ವಿಚಾರ. ನಗರದ ನಾಗರಿಕರು, ಪರಿಸರವಾದಿಗಳು ಇವರನ್ನು ಬೆಂಬಲಿಸಬೇಕಿದೆ.

ಸಚಿವ ಚನ್ನಿಗಪ್ಪ ದೊಡ್ಡಬಳ್ಳಾಪುರಕ್ಕೆ ಹೋಗಿದ್ದಾಗ ರೈತ ಸಂಘದವರ ಕೈಗೆ ಸಿಕ್ಕುಬಿದ್ದ, ರೈತ ಕಾರ್ಯಕರ್ತರ ಪ್ರತಿಭಟನೆ ಹಾಗೂ ಅವರು ನೀಡಿದ ದಾಖಲೆಗಳೆಲ್ಲವನ್ನೂ ನೋಡಿದ ಚನ್ನಿಗಪ್ಪ ಕೋಲಾರ ಎಸಿಎಫ್ ಕೆಂಪರಾಜ್ ಹಾಗೂ ಆರ್‌ಎಫ್‌ಓ ಸತ್ಯನಾರಾಯಣನನ್ನು ಸಸ್ಪೆಂಡ್ ಮಾಡುವಂತೆ ಸ್ಥಳದಲ್ಲೇ ಆದೇಶ ನೀಡಿದ್ದ. ಚನ್ನಿಗಪ್ಪನ ಈ ಪೌರುಷ ಪತ್ರಿಕೆಗಳಲ್ಲೂ ದೊಡ್ಡದಾಗಿ ವರದಿಯಾಯಿತು. ಆದರೆ ಹೀಗೆ ಸಸ್ಪೆಂಡಾದ ಅರಣ್ಯ ಇಲಾಖೆ ಆಫೀಸರ್‌ಗಳು ಮಾರನೇ ದಿನವೇ ಮತ್ತೆ ಡ್ಯೂಟಿಗೆ ಹಾಜರಾಗಿದ್ದಾರೆ. ಸಚಿವ ಚನ್ನಿಗಪ್ಪನ ಯೋಗ್ಯತೆ ಏನೆಂದು ಇದರಿಂದಲೇ ಗೊತ್ತಾಗುವುದಿಲ್ಲವೆ?

ಇದಾದ ಮಾರನೇ ದಿನ ಜಲ್ಲಿಕಳ್ಳ ಜಾಲಳ್ಳಿ ಶಶಿಕುಮಾರ ರೈತ ಸಂಘದವರಿಗೆ "ನೋಡಿದ್ರಾ ನನ್ ಪವರ್‍ರು. ನೀವೇನ್ ಮಾಡ್ಕೋತಿರೋ ಮಾಡ್ಕೋ ಹೋಗ್ರಿ" ಎಂದು ಪೋಲೀಸರ ಎದುರಿಗೆ ರೋಫ್ ಹಾಕಿದ್ದಾನೆ.

ಇದೇನು ಹೀಗಾಯಿತಲ್ಲ ಎಂದು ರೈತ ಸಂಘದವರು ಚನ್ನಿಗಪ್ಪನ ಮನೆಗೇ ಹೋಗಿ ಕೇಳಿದರೆ "ಅವರು ನಂ ಹುಡುಗ್ರೇ ಬಿಡ್ರಿ" ಎಂದನಂತೆ ಈ ಮುಠ್ಠಾಳ ಮಂತ್ರಿ ಚನ್ನಿಗಪ್ಪ.

"ಗಣಿ ಇಲಾಖೆ ಅಧಿಕಾರಿಗಳು ಅರಣ್ಯ ಭೂಮಿಗೇ ಸರ್ವೆ ನಂಬರ್ ಹಾಕಿಬಿಟ್ಟಿದ್ದಾರೆ" ಎಂದು ದಾಖಲೆ ತೋರಿಸಿದರೆ "ಹೌದೇನ್ರಿ? ನಂ ಅಧಿಕಾರಿಗಳು ಏನೇನ್ ಮಾಡ್ತಾರೆ ನೋಡಿ" ಎಂದು ಪಟಾರನೆ ನಕ್ಕನಂತೆ ಈ ಅವಿವೇಕಿ ಚನ್ನಿಗಪ್ಪ.

ಇಷ್ಟೆಲ್ಲಾ ಆದರೂ ಈ ಅಕ್ರಮ ಗಣಿಗಾರಿಕೆ ನಿಲ್ಲಿಸುವ ಬಗ್ಗೆ ಚನ್ನಿಗಪ್ಪ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ ಏಕೆ?

ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ಅಕ್ರಮ ಕ್ವಾರಿ ನಡೆಸಿದರೆ ಕೇಸು, ಅದೇ ಚನ್ನಿಗಪ್ಪನ ಶಿಷ್ಯ ಶಶಿಕುಮಾರ ಕಳ್ಳತನ ಮಾಡಿದರೆ ರಕ್ಷಣೆ....

ಕೋ-ಜಾ ಸರ್ಕಾರದ ಪಾಲಿಸಿ ಇದು.

ದಿನಾಂಕ 18.11.2003ರ ಸರ್ಕಾರದ FEE 215 ENV 2002 ಆದೇಶದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯ ಹಾಗೂ ಅದರ ನದೀ ಪಾತ್ರದ ಉದ್ದಕ್ಕೂ ಎರಡು ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಗಣಿಗಾರಿಕೆ, ಪರಿಸರ ದೂಷಣ ಕೆಲಸ ನಡೆಯಬಾರದೆಂದು ಸ್ಪಷ್ಟವಾಗಿ ಹೇಳಲಾಗಿದೆ.

ಆದರೆ ಈ ಆದೇಶವನ್ನು ಕೇರ್ ಮಾಡದೆ ಶಶಿಕುಮಾರ್, ಲೋಕಲ್ ಗ್ಯಾಂಗ್ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ.

ಅರಣ್ಯ ಮಂತ್ರಿ ಚನ್ನಿಗಪ್ಪ ಹೊಟ್ಟೆಗೆ ಅನ್ನ ತಿನ್ನುವ ಮನುಷ್ಯನಾಗಿದ್ದರೆ ಇಂತದ್ದಕ್ಕೆ ಅವಕಾಶ ಕೊಡುತ್ತಿದ್ದನಾ?

-ಬಿಳಿದಾಳೆ ಈಶ

ಚೆನ್ನಿಗಪ್ಪನ ಪುಂಡ ಮಗ ಗೌರಿಶಂಕ್ರ


ನೆಲಮಂಗಲದ ಜೋಡಿ ಕೊಲೆಯ ಮೂಲ ಹುಡುಕುತ್ತಾ ಹೋದರೆ ಕೊನೆಗೆ ಬರುವ ಹೆಸರೇ ಗೌರಿಶಂಕರ್!

ಈತ ಅರಣ್ಯ ಮಂತ್ರಿ ಚನ್ನಿಗಪ್ಪನವರ ಕುಲಪುತ್ರ. ಬೆಂಗಳೂರಿನ ಕಾಮಾಕ್ಷಿಪಾಳ್ಯ ಪೀಣ್ಯ ಮತ್ತು ಮಾಕಳಿಯ ಪುಂಡ ಹುಡುಗರ ಪಡೆ ಕಟ್ಟಿಕೊಂಡು ಸದಾ ನೆಲಮಂಗಲದಲ್ಲಿ ಅಡ್ಡೆ ಹಾಕುವುದು ಈತನ ವಯೋಸಹಜ ಹಾಬಿ ಎಂದೇ ಜನ ಭಾವಿಸಿದ್ದರು. ಯಾವತ್ತು ನೆಲಮಂಗಲ ಸಮೀಪದ ಫಾರ್ಮ್ ಹೌಸ್ ಒಂದರಲ್ಲಿ ದಂಧೆ ನಡೆಸುತ್ತಿದ್ದ ಬೆಂಗಳೂರಿನ ಡಜನ್ನುಗಟ್ಟಲೇ ಲೈವ್ ಬ್ಯಾಂಡ್ ಹುಡುಗಿಯರನ್ನು ಎಸ್‌ಐ ಪರಮೇಶ್ ರೇಡು ಬಿದ್ದು ಎಳೆದೊಯ್ದರೋ ಆಗ ಹೊರಬಿದ್ದ ಹೆಸರೇ ಗೌರಿ ಶಂಕರ್!

ಪೋಲೀಸ್ ಕಮೀಷನರ್ ಅಜಯ್‌ಕುಮಾರ್ ಸಿಂಗ್ ಇಲ್ಲಿನ ಬ್ಯಾಂಡ್ ಅಡ್ಡೆಗಳನ್ನೆಲ್ಲ ಮುಚ್ಚಿಸುತ್ತಿದ್ದಂತೆ ಇಡೀ ಬ್ಯಾಂಡ್ ದಂಧೆ ಬೆಂಗಳೂರು ಹೊರವಲಯದ ರೆಸಾರ್ಟ್, ಫಾರ್ಮ್ ಹೌಸ್‌ಗಳಿಗೆ ಸ್ಥಳಾಂತರಗೊಂಡಿದ್ದರಲ್ಲಿ ಈತನ ಪಾತ್ರವೇ ದೊಡ್ಡದಿತ್ತು, ಎಸ್‌ಐ ಪರಮೇಶ್ ಕೈಗೆ ಸಿಕ್ಕಿಬಿದ್ದ ಬ್ಯಾಂಡ್ ಹುಡುಗಿಯರನ್ನು ಬಿಟ್ಟು ಕಳಿಸುವಂತೆ ಮಂತ್ರಿ ಚನ್ನಿಗಪ್ಪನವರೇ ಫೋನ್ ಮಾಡಿ ದಬಾಯಿಸಿದ್ದರು. ಆದರೆ ಪರಮೇಶ್ ಕೇಸು ಜಡಿದು ಕೋರ್ಟಿಗೆ ಸಾಗ ಹಾಕಿದ್ದರು. ಚೆತ್ತನಗೆರೆ ಬಸವಯ್ಯನ ಕೊಲೆಯ ಎಲ್ಲಾ ಆರೋಪಿಗಳು ಸಿಕ್ಕರಾದರೂ ಹಂತಕರ ನಾಯಕ ಶ್ರೀನಿವಾಸ್ ಮಾತ್ರ ಕೊನೆತನಕ ಸಿಗಲೇ ಇಲ್ಲ. ಕಾರಣವಿಷ್ಟೇ, ಈ ಶ್ರೀನಿವಾಸ್‌ನನ್ನು ಸದಾ ತನ್ನ ಜೊತೆಗಿಟ್ಟುಕೊಂಡೇ ಗೌರಿಶಂಕರ್ ಓಡಾಡಿಕೊಂಡಿದ್ದ. ಹಿಡಿಯಬೇಕೆಂದರೆ ಎಸ್‌ಐ ಪರಮೇಶ್ ಮಂತ್ರಿ ಚನ್ನಿಗಪ್ಪನ ಮನೆ ಮೇಲೆ ರೇಡು ಮಾಡಬೇಕು. ಹಾಗಂಥ ನಿಷ್ಠುರಿ ಸಬ್‌ಇನ್ಸ್‌ಪೆಕ್ಟರ್ ಪರಮೇಶ್ ಸುಮ್ಮನಾಗಲಿಲ್ಲ. ಸದ್ದಿಲ್ಲದೇ ಗೌರಿಶಂಕರ್ ಬೆನ್ನು ಹತ್ತಿದ್ದಾರೆ. ಇದು ಗೊತ್ತಾಗಿದ್ದೇ ತಡ ಹಂತಕ ಶ್ರೀನಿವಾಸನನ್ನು ಬೇರೆಡೆಗೆ ಕಳಿಸಿದ ಗೌರಿಶಂಕರ್ ತಾನು ಮಾತ್ರ ಸಾಚಾನಂತೆ ಓಡಾಡಿಕೊಂಡಿದ್ದಾನೆ.



ಒಬ್ಬ ಮಂತ್ರಿಯ ಮಗ ಹೇಗಿರಬೇಕು? ಆದರೆ ಚೆನ್ನಿಗಪ್ಪನವರ ಮಗ ಗೌರಿಶಂಕರ್‌ನ ಜಾಯಮಾನವೇ ಬೇರೆ. ಅಪ್ಪ ಶಾಸಕನಾಗಿದ್ದಷ್ಟೂ ದಿನ ಯಶವಂತಪುರದ ಪೋರ್ಕಿ ಹುಡುಗರ ಜೊತೆ ಅಡ್ಡೆ ಹಾಕುತ್ತಿದ್ದ. ಕಳೆದ ಕಾರ್ಪೊರೇಷನ್ ಚುನಾವಣೆಯಲ್ಲಿ ಯಶವಂತಪುರದಿಂದ ದಳದ ಅಭ್ಯರ್ಥಿಯಾಗಲು ಯತ್ನಿಸಿದ್ದ.



ಕೃಷ್ಣಮೂರ್ತಿ, ವಕೀಲ ದೇವರಾಜ್

ಎಲ್.ಜಿ. ಕೃಷ್ಣಪ್ಪ ಅಡಿಷನಲ್ ಎಸ್ಪಿಯಾಗಿ ಬಂದ ಮೇಲಂತೂ ಗೌರಿಶಂಕ್ರನ ಅಟ್ಟಹಾಸ ಅತಿಯಾಯಿತು. ಹಂತಕ ಶ್ರೀನಿವಾಸನ ಪಡೆ ಮಂತ್ರಿ ಮಗನ ಬೆನ್ನಲ್ಲೇ ಇತ್ತಾದ್ದರಿಂದ ಸಹಜವಾಗೇ ಎಸ್‌ಐ ಪರಮೇಶ್ ಕಣ್ಣಿಟ್ಟಿದ್ದಾರೆ. ನೆಲಮಂಗಲದ ಹಳೇ ಕೇಸುಗಳನ್ನು ಹುಡುಕುತ್ತಾ ಹೋದಂತೆಲ್ಲ ಇಲ್ಲಿನ ಕ್ರೈಂಗಳ ಹಿಂದೆ ಭೂಗಳ್ಳರ ದೊಡ್ಡ ಜಾಲವೇ ಕಾರ್ಯಪ್ರವೃತ್ತವಾಗಿದ್ದು ಗೊತ್ತಾಯಿತು. ಇವರೆಲ್ಲರಿಗೂ ಎಎಸ್ಪಿ ಕೃಷ್ಣಪ್ಪನ ಆಶ್ರಯವಿತ್ತಾದರೂ ಅವರಿಗೆ ನಾಯಕನಂತಿದ್ದವನು ಕಾಮಾಕ್ಷಿಪಾಳ್ಯದ ಮಾಜಿ 'ಕೌನ್ಸಿಲರ್ ಹಂತಕ ಗೋಪಾಲಯ್ಯ. ಅಷ್ಟೊತ್ತಿಗಾಗಲೇ ನೆಲಮಂಗಲ ಪೋಲೀಸ್ ಠಾಣೆಯಲ್ಲಿ ಗೋಪಾಲಯ್ಯ, ಕಡಬಗೆರೆಯ ಪಾಯ್ಸನ್ ರಾಮು ಮತ್ತು ದಾಬಾ ಸೀನರ ಮೇಲೆ ಒಂದಲ್ಲ ಎರಡು 307 ಕೇಸುಗಳಿದ್ದವು. ಹಾಗಿದ್ದೂ ರಾಜಾರೋಷವಾಗಿ ನೆಲಮಂಗಲದಲ್ಲಿ ಅಡ್ಡೆ ಹಾಕುತ್ತಿದ್ದ ಹಂತಕ ಪಡೆಯನ್ನು ಜೈಲಿಗಟ್ಟಲು ಎಸ್.ಐ. ಪರಮೇಶ್ ಮುಂದಾಗಿದ್ದಾರೆ.

ಅದೇ ಹೊತ್ತಿಗೆ ಇವರೆಲ್ಲರೂ ಸೇರಿ ಮಚ್ಚನನ್ನು ಮುಗಿಸಿಬಿಟ್ಟರು. ಅದೇ ಹೊತ್ತಿಗೆ ಎಸ್‌ಐ ಪರಮೇಶ್ ಕೂಡ ಈ ಜೆಡಿಎಸ್ ಹಂತಕರ ಬೆನ್ನು ಬಿದ್ದು ಕಂಡಕಂಡ ಫಾರ್ಮ್ ಹೌಸ್, ರೆಸಾರ್ಟುಗಳ ಮೇಲೆ ರೇಡು ಮಾಡಲಾರಂಭಿಸಿದಾಗಲೇ ಗೌರಿಶಂಕರನ ಲೈವ್‌ಬ್ಯಾಂಡ್ ದಂಧೆ ಬೆಳಕಿಗೆ ಬಂದದ್ದು. ಮಂತ್ರಿ ಚನ್ನಿಗಪ್ಪನವರೇ ಬ್ಯಾಂಡ್ ಹುಡುಗಿಯರನ್ನು ಬಿಟ್ಟು ಕಳಿಸುವಂತೆ ಫೋನ್ ಮಾಡಿದಾಗಲೂ ಪರಮೇಶ್ ಕ್ಯಾರೇ ಎನ್ನಲಿಲ್ಲ.

ಇದು ಮಂತ್ರಿ ಮಗ ಗೌರಿಶಂಕರ್‌ಗಾದ ಮೊದಲ ಮುಖಭಂಗವಾಗಿತ್ತು. ಚನ್ನಿಗಪ್ಪ ಕೂಡ ಎಸ್.ಐ. ಪರಮೇಶ್ ವಿರುದ್ಧ ಒಳಗೊಳಗೇ ಹಲ್ಲು ಕಡಿಯುತ್ತಿದ್ದರು. ಅದೇ ಹೊತ್ತಿಗೆ ಚನ್ನಿಗಪ್ಪನವರ ಮನೆಯಾಳಂತಿದ್ದ ಅಡಿಷನಲ್ ಎಸ್ಪಿ ಕೃಷ್ಣಪ್ಪನವರಿಗೇ ಎಸ್.ಐ. ಪರಮೇಶ್ ಬರೆ ಹಾಕಿಬಿಟ್ಟರು. ಕೃಷ್ಣಪ್ಪನ ಭೂಕಬಳಿಕೆ ವಿರುದ್ಧ ಶುರುವಿನಿಂದಲೂ ಹೋರಾಡಿಕೊಂಡೇ ಬಂದಿದ್ದ ಲಕ್ಕಸಂದ್ರದ ಯುವ ನಾಯಕ ಗಂಗರಾಜು ಎಎಸ್ಪಿ ಕೃಷ್ಣಪ್ಪ ಮತ್ತು ಅವರ ಸಂಬಂಧಿಕರ ವಿರುದ್ಧ ನೀಡಿದ ದೂರನ್ನು ಪರಮೇಶ್ ಸ್ವೀಕರಿಸಿ ಎಸ್.ಸಿ.ಆರ್. ನೀಡಿದ್ದಾರೆ. ಒಬ್ಬ ಅಡಿಷನಲ್ ಎಸ್ಪಿಯ ವಿರುದ್ಧದ ದೂರನ್ನು ಆತನ ಅಧೀನದ ಸಬ್‌ಇನ್ಸ್‌ಪೆಕ್ಟರ್ ಒಬ್ಬ ದಾಖಲು ಮಾಡುವುದು ಅಂದರೇನು?

ಈ ಹಂತದಲ್ಲಿ ಅಡಿಷನಲ್ ಎಸ್ಪಿ ಕೃಷ್ಣಪ್ಪನವರ ನೆರವಿಗೆ ಬಂದವನು ಚನ್ನಿಗಪ್ಪನವರ ಮಗ ಗೌರಿಶಂಕರ್. ಎಎಸ್ಪಿ ಕೃಷ್ಣಪ್ಪ ಆತನನ್ನೇ ಮುಂದೆಬಿಟ್ಟು, ಪರಮೇಶ್ ಎತ್ತಂಗಡಿಗೆ ಕೈಹಾಕಿದ್ದರೆಂಬುದು ಇವತ್ತಿಗೂ ನೆಲಮಂಗಲದಲ್ಲಿ ಕೇಳಿಬರುತ್ತಿರುವ ಆರೋಪ. ಮಗನ ಮಾತು ಕೇಳಿಯೇ ಮಂತ್ರಿ ಚನ್ನಿಗಪ್ಪ ಎಸ್‌ಐ ಪರಮೇಶ್ ವರ್ಗಾಯಿಸುವಂತೆ ಮುಖ್ಯಮಂತ್ರಿ ಕುಮಾರಣ್ಣನಿಗೆ ದುಂಬಾಲು ಬಿದ್ದಿರಬೇಕು.

ದುರಂತವೆಂದರೆ ಜೋಡಿ ಕೊಲೆಯ ಹಿಂದಿನ ದಿನವೇ ಎಸ್‌ಐ ಪರಮೇಶ್ ಎತ್ತಂಗಡಿಯಾಗಿತ್ತು, ಪರಮೇಶ್ ವರ್ಗಾವಣೆ ಆದೇಶ ಹೊರಬಿದ್ದ ಸುದ್ದಿ ಮೊದಲು ತಲುಪಿದ್ದು ಚನ್ನಿಗಪ್ಪನ ಮಗ ಗೌರಿಶಂಕರ್‌ಗೆ. ಆತ ಅದನ್ನು ತನ್ನ ಅಪ್ತ ಬಂಟ ಚೆತ್ತನಗೆರೆ ಶ್ರೀನಿವಾಸನಿಗೆ ಹೇಳಿರಬೇಕು. ವರ್ಗಾವಣೆಯಾದ ಮರುದಿನಕ್ಕೇ ಶ್ರೀನಿವಾಸನ ಹಂತಕ ಪಡೆ ಜೋಡಿ ಹತ್ಯೆಯಂಥ ಪೈಶಾಚಿಕ ಕೃತ್ಯಕ್ಕೆ ಕೈ ಹಾಕಿತ್ತು.

ಒಬ್ಬ ಮಂತ್ರಿ ಮಗ, ಆತನ ಪುಂಡಾಟಕ್ಕೆ ಅವನಿಗೆ ಪೋಲೀಸ್ ಕುಮ್ಮಕ್ಕು-ಇವೆಲ್ಲವೂ ಸೇರಿದಾಗ ನೆಲಮಂಗಲದ ರಕ್ತ ಪಾತವಾಗುತ್ತದೆ.

ಸಚಿನ್ ತೆಂಡುಲ್ಕರ್ ಹೊಡೆದನೆಂದರೆ ಅದಕ್ಕೂ ಯಾವುದೋ ಹಾವಿಗೂ ಸಂಬಂಧವಿದೆಯೆ? ಪದೇಪದೇ ಕ್ರಿಕೆಟ್ ಅಂಪೈರ್‌ಗೇ ಸಚಿನ್ ಬೌಲ್ಡ್ ಆಗುತ್ತಾನೆಂದರೆ ಅದು ಯಾವ ಹಾವಿನ ಶಾಪ? ಹಾಗಂಥ ಸಚಿನ್ ಅಭಿಮಾನಿಗಳೆಲ್ಲ ಕಂಡಕಂಡ ಹಾವನ್ನು ಕೊಲ್ಲಲಾರಂಭಿಸಿದರೆ...?


ನಂಬುವರೆ ನಂಬಿ ಬಿಟ್ಟರೆ ಬಿಡಿ: ಕರಿಷ್ಮಾ ಕಪೂರ್ ನಟಿಸಿದ ಯಾವುದೋ ಸಿನಿಮಾ ತೋಪೆದ್ದರೆ ಅದರಲ್ಲಿ ಯಾವುದೋ ಹಾವಿನ ಕೈವಾಡವಿರುತ್ತದಂತೆ. ಜೂಹಿ ಚಾವ್ಲಾಗೆ ವಯಸ್ಸಾದರೆ ನಾಗದೇವತೆಗಳ ಬಳಿ ಅದಕ್ಕೂ ಪರಿಹಾರವಿದೆಯಂತೆ. ಹೋಗಲಿ, ನಮ್ಮ ಕೂರ್ಗಿ ಹುಡುಗ ರಾಬಿನ್ ಉತ್ತಪ್ಪನಿಗೇನಾಯಿತು? ಹೋಗಿ ಹೋಗಿ ತನ್ನೆಲ್ಲಾ ಕ್ರಿಕೆಟ್ ಪ್ರತಿಭೆಯನ್ನು ಸರ್ಪಕ್ಕೆ ಆರೋಪಿಸಿ ಬಿಟ್ಟನಲ್ಲ, ಆತ ರಾಷ್ಟ್ರಮಟ್ಟದ ಕ್ರಿಕೆಟರ್ ಪಟ್ಟಕ್ಕೇರಿದ್ದು ಯಾವ ಹಾವಿನ ದಯೆಯಿಂದ?

ಪಾಪ ಪತಾಕೆಗೆ ಬಿದ್ದು ಸಚಿನ್ ಸರ್ಪ ಸನ್ನಿಗೆ ಬಲಿಯಾಗಿದ್ದಾನೆ. ಅಂಥಾ ಸಚಿನ್‌ನೇ ಸರ್ಪದೋಷ ಕಳೆಕೊಳ್ಳಲು ಸುಬ್ರಹ್ಮಣ್ಯಕ್ಕೆ ಬಂದದ್ದು ಗೊತ್ತಾಗಿದ್ದೇ ಕರ್ನಾಟಕದ ರಾಬಿನ್ ಉತ್ತಪ್ಪ ಬುಟ್ಟಿಗೆ ಬಿದ್ದಿದ್ದಾನೆ. ಇನ್ನೂ ದುರಂತವೆಂದರೆ ಸೋಕಾಲ್ಡ್ ಸಮಾಜವಾದಿ, ಬುದ್ಧಿಜೀವಿ ಎಂದೆಲ್ಲ ಪೋಸು ಕೊಡುವ 'ಮುಕ್ತ' ಧಾರಾವಾಹಿಯ ಕರ್ತೃ ಟಿ.ಎನ್. ಸೀತಾರಾಮ್ ಲಜ್ಜೆಗೆಟ್ಟು ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದು ಸರ್ಪ ಸಂಸ್ಕಾರ ನೆರವೇರಿಸಿದ್ದಾರೆ. ತೀರ ಲೇಟೆಸ್ಟ್ ಸುದ್ದಿಯೇನೆಂದರೆ ಇದೇ ಮೇ ಹದಿಮೂರರಂದು ನಟ ವಿಷ್ಣುವರ್ಧನ್ ಕೂಡ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಪ್ರತ್ಯಕ್ಷರಾಗಿ ಆಶ್ಲೇಷ ಬಲಿ ಕೊಟ್ಟಿದ್ದಾರೆ. ಇನ್ನೊಂದು ತಿಂಗಳಲ್ಲಿ ಸ್ಟಾರ್ ಕ್ರಿಕೆಟರ್ ಮಹೇಂದ್ರಸಿಂಗ್ ದೋನಿ ಕೂಡ ಕುಕ್ಕೆಗೆ ಬರಲಿದ್ದಾನಂತೆ. ಇದು ನಾಯಕ್ ಹುಟ್ಟಿ ಹಾಕಿದ ಸರ್ಪ ಸನ್ನಿಯ ಸಾಮಾಜಿಕ ದುಷ್ಪರಿಣಾಮ.

ರಾ. ಸೋಮನಾಥ್

ಸರ್ಪ ಕಂಟಕ ವಿ.ಎಸ್. ನಾಯಕ್ ಯಾರು?


ಇದು ಸ್ನೇಕ್ ಸಿಂಡ್ರೋಮ್!



ವಿ.ಎಸ್. ನಾಯಕ್




ಸಚಿನ್ ಕುಕ್ಕೆ ಸುಬ್ರಮಣ್ಯಕ್ಕೆ ಭೇಟಿ ಇತ್ತಾಗ



ಟಿ.ಎನ್. ಸೀತಾರಾಮ್ ಕುಕ್ಕೆ ಸುಬ್ರಮಣ್ಯದಲ್ಲಿ



ವಿಷ್ಣು ದಂಪತಿಗಳಿಗೆ ಕುಕ್ಕೆ ಶ್ರೀಗಳಿಂದ ಆಶೀರ್ವಾದ



ರಾಬಿನ್ ಉತ್ತಪ್ಪ ಕುಕ್ಕೆ ಸುಬ್ರಮಣ್ಯದಲ್ಲಿ

ಇದೊಂಥರದ ಸರ್ಪಸನ್ನಿ! ಅರ್ಥಾತ್ ಸ್ನೇಕ್ ಸಿಂಡ್ರೋಮ್!

ಖತರ್‌ನಾಕ್ ಜ್ಯೋತಿಷಿಯೊಬ್ಬ ಏನೆಲ್ಲಾ ಅನಾಹುತ ಹುಟ್ಟಿಸಬಲ್ಲ ಎಂಬುದಕ್ಕೆ ಇವೆಲ್ಲವೂ ಉದಾಹರಣೆಗಳಷ್ಟೇ. ಆತನ ಹೆಸರು ವಿ.ಎಸ್. ನಾಯಕ್. ಜ್ಯೋತಿಷ್ಯವೇ ಈತನಿಗೆ ಹೊಟ್ಟೆಪಾಡು. ಸಚಿನ್, ಜೂಹಿ ಚಾವ್ಲಾ, ಕಪೂರ್ ಫ್ಯಾಮಿಲಿ ಇತ್ಯಾದಿಗಳನ್ನೆಲ್ಲ ಕುಕ್ಕೆ ಸುಬ್ರಹ್ಮಣ್ಯಕ್ಕೆ ಕರೆತಂದು ಕಾಳಸರ್ಪ ಯೋಗದ ಹೆಸರಲ್ಲಿ ಮಣ್ಣಿಗೆ ತಲೆ ಬೋಳಿಸುವ ಹೈಟೆಕ್ ವಂಚಕ!

ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಾಲಿವುಡ್ ಮೆರುಗು ತಂದು ಕೊಟ್ಟ ಈ ವಿ.ಎಸ್. ನಾಯಕ್ ಇಲ್ಲಿಗೆ ಆರು ತಿಂಗಳ ಹಿಂದೆಯೇ ಬಚ್ಚನ್ ಫ್ಯಾಮಿಲಿಯನ್ನು ಕರೆತರುವವನಿದ್ದ. ಏನು ಯಡವಟ್ಟಾಯಿತೋ? ಅಮಿತಾಭ್ ಬಚ್ಚನ್ ತಮ್ಮ ಕುಟುಂಬ ಸಮೇತ ಮುಂದಿನ ತಿಂಗಳು ಸುಬ್ರಹ್ಮಣ್ಯಕ್ಕೆ ಬರುತ್ತಾರಂತೆ. ಇನ್ನೆರಡು ವಾರದೊಳಗೆ ಮತ್ತೊಬ್ಬ ಬಾಲಿವುಡ್ ನಟಿ ಡಿಂಪಲ್ ಕಪಾಡಿಯಾಳನ್ನೂ ಕರೆತಂದೇ ತೀರುತ್ತೇನೆಂದು ನಾಯಕ್ ಚಾಲೆಂಜ್ ಮಾಡಿದ್ದಾನೆ. ಅಷ್ಟಕ್ಕೂ ಈ ವಿ.ಎಸ್. ನಾಯಕ್ ಯಾರು? ದೊಡ್ಡ ದೊಡ್ಡ ಬಾಲಿವುಡ್ ನಟರೆಲ್ಲ ಈತನ ಬುಟ್ಟಿಗೇ ಏಕೆ ಬೀಳುತ್ತಾರೆ? ಎಂಬುದೇ ಅಸಲೀ ಪ್ರಶ್ನೆ.

ತೀರ ಕೆದಕುತ್ತಾ ಹೋದರೆ ಈ ನಾಯಕ್ ಬೆಂಗಳೂರಿನ ಮಹಾಲಕ್ಷ್ಮಿ ಲೇಔಟಿನ ಮೂಕಾಂಬಿಕಾ ದೇವಸ್ಥಾನದ ಸಂಸ್ಥಾಪಕ, ನಿರ್ಮಾಪಕ, ಅರ್ಚಕ, ಮಾಂತ್ರಿಕ ಎಲ್ಲವೂ ಹೌದು. ಮೂಲತಃ ಮಂಗಳೂರಿನ ಈತ ಪ್ರಾರಂಭದಲ್ಲಿ ಮುಂಬಯಿಯ ಫಿಲಿಪ್ಸ್ ಇಂಡಿಯಾ ಕಂಪನಿಯಲ್ಲಿ ಇಂಜಿನಿಯರ್ ಆಗಿದ್ದ. ಜ್ಯೋತಿಷ್ಯ ಈತನ ಪಾರ್ಟ್‌ಟೈಂ ಹಾಬಿಯಾಗಿತ್ತು. ಮುಂಬಯಿಯಲ್ಲಿ ಮಂಗಳೂರು ಮೂಲದ ಶೆಟ್ಟಿ ಹೋಟೆಲಿಯರ್‌ಗಳು ಪರಿಚಯವಾದಂತೆಲ್ಲ ಪಾರ್ಟ್ ಟೈಮಿಗಿದ್ದ ಜ್ಯೋತಿಷ್ಯ ಫುಲ್‌ಟೈಂ ಕಸುಬಾಯಿತು. ಮುಂದೆ ಫಿಲಿಪ್ಸ್ ಕಂಪನಿಯ ಇಂಜನಿಯರ್ ಕೆಲಸಕ್ಕೆ ಗುಡ್‌ಬೈ ಹೇಳಿ ಘಾಟ್ಕೋಪರ್ ಏರಿಯಾದಲ್ಲೊಂದು ಮೂಕಾಂಬಿಕಾ ಜ್ಯೋತಿಷ್ಯಾಲಯ ತೆರೆದ. ಹಾಗೇ ಶುರುವಾದ ನಾಯಕ್‌ನ ಸರ್ಪ ಕೈಂಕರ್ಯವನ್ನು ಬಾಲಿವುಡ್‌ಗೆ ಪರಿಚಯಿಸಿದ್ದು ಫೈಟರ್ ರಾಮ್‌ಶೆಟ್ಟಿ ಮತ್ತು ನಟ ಸುನೀಲ್ ಶೆಟ್ಟಿ!

ಮುಂದೆ ಮುಂಬಯಿಯ ಕೆಲ ಜ್ಯೋತಿಷಿಗಳ ಜೊತೆ ರಹಸ್ಯ ಡೀಲ್ ಕುದುರಿಸಿಕೊಂಡೇ ನಾಯಕ್ ಬೆಂಗಳೂರಿಗೆ ಬಂದ. ಮಹಾಲಕ್ಷ್ಮಿ ಲೇಔಟ್‌ನ ಎರಡನೇ ಮೇನ್ ಹದಿನೈದನೇ ಕ್ರಾಸಿನಲ್ಲೊಂದು ಸೈಟು ಖರೀದಿಸಿ ಅಲ್ಲೇ ಮನೆ ಕಂ ಮೂಕಾಂಬಿಕಾ ದೇವಸ್ಥಾನವನ್ನು ಕಟ್ಟಿಸಿದ. ತನ್ನ ಮೂವರು ಗಂಡು ಮಕ್ಕಳ ಪೈಕಿ ಹಿರಿಯ ಮಗ ಸತ್ಯೇಂದ್ರನನ್ನೇ ತನ್ನ ಸರ್ಪ ಕೈಂಕರ್ಯದ ಏಜಂಟ್ ಆಗಿ ನೇಮಿಸಿಕೊಂಡ. ಆತನ ಪತ್ನಿ ಸೋನಾಲಿ ಕೂಡ ಸರ್ಪದೋಷ ನಿವಾರಣೆಗೆಂದು ಬರುವ ನಾರ್ತ್ ಇಂಡಿಯನ್ ಶ್ರೀಮಂತರ ಮೇಜುವಾನಿಗೆ ನಿಂತಳು. ಖಮಾಯಿ ಶುರುವಾಗಿತ್ತು.

ನಾಯಕ್‌ನ ಸರ್ಪಕಾಯಕಕ್ಕೆ ದೊಡ್ಡ ಮಟ್ಟದ ಸಂಪಾದನೆ ಶುರುವಾಗಿದ್ದೇ ಆತ ಕುಕ್ಕೆ ಸುಬ್ರಹ್ಮಣ್ಯದಲ್ಲಿ 'ಅಕ್ಷಯ ಶೇಷನಾಗ್' ಎಂಬ ಐಷಾರಾಮಿ ಹೋಟೆಲ್ ಕಟ್ಟಿಸಿದ ಮೇಲೆ. ಯಾತ್ರಾರ್ಥಿಗಳಿಗೆಂದು ಧರ್ಮಛತ್ರ ಕಟ್ಟಿಸುತ್ತೇನೆಂದು ದೇವಸ್ಥಾನದ ಜಮೀನು ಗಿಟ್ಟಿಸಿಕೊಂಡ



ಕಾಳಸರ್ಪಕ್ಕೂ ಕುಕ್ಕೆಗೂ ಎಲ್ಲಿಂದೆಲ್ಲಿಯ ನಂಟು?

ಅಷ್ಟಕ್ಕೂ ಕಾಳ ಸರ್ಪಯೋಗ ಅಥವಾ ಸರ್ಪದೋಷಕ್ಕೂ ಕುಕ್ಕೆ ಸುಬ್ರಹ್ಮಣ್ಯಕ್ಕೂ ಏನೇನೂ ಸಂಬಂಧವಿಲ್ಲ. ಈ ಬಗ್ಗೆ ಪೌರಾಣಿಕ ವ್ಯಾಖ್ಯೆ ಸಿಗುವುದು ಗರುಡ ಪುರಾಣದಲ್ಲಿ. ಪೂರ್ವ ಜನ್ಮದಲ್ಲಿ ಬ್ರಾಹ್ಮಣರನ್ನು ಕೊಂದಿದ್ದರೆ ಸಹಜವಾಗೇ ಸರ್ಪದೋಷ ಬರುತ್ತದೆ. ಹಾವುಗಳನ್ನು ಕೊಲ್ಲುವುದು ಕೂಡ ಬ್ರಹ್ಮಹತ್ಯೆಯಷ್ಟೇ ಪಾಪಕಾರಿ. ಶೃಂಗಿ ಋಷಿಯ ಶಾಪದಿಂದ ಸರ್ಪರಾಜ ತಕ್ಷಕನಿಂದ ಕಚ್ಚಲ್ಪಟ್ಟು ಸತ್ತವನು ಭರತಖಂಡದ ಚಕ್ರವರ್ತಿ ಪರೀಕ್ಷಿತ. ಈತ ಅಭಿಮನ್ಯುವಿನ ಮೊಮ್ಮಗ. ಈತನ ಮಗನೇ ಜನಮೇಜಯ. ತನ್ನ ತಂದೆ ಪರೀಕ್ಷಿತನು ಸರ್ಪದಷ್ಟನಾಗಿ ಮೃತನಾದ್ದರಿಂದ ಲೋಕದಲ್ಲಿ ಸರ್ಪಕುಲವೇ ಇಲ್ಲದಂತೆ ಮಾಡಲು ಸಂಕಲ್ಪಿಸಿ ಸರ್ಪಯಾಗವನ್ನು ಹಮ್ಮಿಕೊಂಡ. ಸರ್ಪಗಳೆಲ್ಲ ಒಂದೊಂದಾಗಿ ಯಜ್ಞಕುಂಡಕ್ಕೆ ಬಿದ್ದು ಭಸ್ಮಗೊಳ್ಳತೊಡಗಿದವು.

ಆಗ ಭೂಮಂಡಲದ ಸರ್ಪಗಳೆಲ್ಲ ತಮ್ಮ ಕುಲಮಾತೆ ಭೃಗುವಂಶದ ವಾಸುಕಿಯ ತಂಗಿ ಜರತ್ಕಾರುವಿನ ಮೊರೆ ಹೊಕ್ಕರು. ಆಕೆ ತನ್ನ ಮಗನಾದ ಆಸ್ತೀಕನನ್ನು ಜನಮೇಜಯನಲ್ಲಿಗೆ ಕಳುಹಿಸಿ ಸರ್ಪ ಹತ್ಯೆ ಬ್ರಾಹ್ಮಣ ಹತ್ಯೆಗೆ ಸಮ; ಸರ್ಪ ಮತ್ತು ಬ್ರಾಹ್ಮಣ ಬೇರೆಬೇರೆಯಲ್ಲ ಎಂದು ಸರ್ಪಯಾಗವನ್ನು ನಿಲ್ಲಿಸುವಂತೆ ಮನವೊಲಿಸಿದಳು. ಸರ್ಪದೋಷ ಪರಿಹಾರಕ್ಕಾಗಿ ಜನಮೇಜಯ ಬ್ರಾಹ್ಮಣರಿಗೆ ಗೋಧಾನ, ಭೂಧಾನ ಸ್ವರ್ಣ ದಾನ ಮಾಡಿ ಶಾಪ ವಿಮುಕ್ತನಾದ!

ಇದು ಸರ್ಪ ದೋಷ ಮುಕ್ತಿಯ ಬಗೆಗಿನ ಪೌರಾಣಿಕ ವ್ಯಾಖ್ಯೆ. ಒಂದಾನೊಂದು ಕಾಲಕ್ಕೆ ಮೆರೆದವರು, ಯಶಸ್ಸಿನ ತುತ್ತ ತುದಿಯಲ್ಲಿದ್ದವರಿಗೆ ಇದ್ದಕ್ಕಿದ್ದಂತೆ ದುಸ್ಥಿತಿಯಾಯಿತೆಂದರೆ, ಅಪಖ್ಯಾತಿ ಶುರುವಾಯಿತೆಂದರೆ ಸಹಜವಾಗೇ ಜ್ಯೋತಿಷ್ಯದ ಮೊರೆ ಹೋಗುತ್ತಾರೆ. ಜ್ಯೋತಿಷಿಗಳು ಅದನ್ನು ಕಾಳಸರ್ಪಯೋಗ ಎಂದು ನಂಬಿಸುತ್ತಾರೆ. ಸರ್ಪದೋಷವಿರುವುದರಿಂದಲೇ ಕಾಳ ಸರ್ಪಯೋಗ ಬಂದಿದೆಯೆಂದು ಬಂಡಲ್ ಬಿಡುತ್ತಾರೆ. ಜಾತಕದ ಮಿಕ್ಕೆಲ್ಲಾ ಗ್ರಹಗಳೂ ರಾಹು-ಕೇತುಗಳ ಮಧ್ಯೆ ಬಂದವೆಂದರೆ ಅದು ಕಾಳಸರ್ಪ ಯೋಗವೆಂದೇ ಅರ್ಥ!


ಅದಕ್ಕೆ ಆಶ್ಲೇಷ ಬಲಿ ಕೊಟ್ಟು ಸರ್ಪ ಸಂಸ್ಕಾರ ಮಾಡಬೇಕು. ಈ ಆಶ್ಲೇಷ ಬಲಿಯೆಂದರೆ ಬ್ರಾಹ್ಮಣನಿಗೆ ಗೋಧಾನ, ಸ್ವರ್ಣದಾನ ಮಾಡಿ ಬ್ರಾಹ್ಮಣರ ಶವಸಂಸ್ಕಾರದಂತೆ ಹಾವಿಗೆ ಪಿಂಡ ಬಿಡುವುದು!

ಹಾಗಂಥ ಇದ್ಯಾವುದನ್ನೂ ಕುಕ್ಕೆ ಸುಬ್ರಹ್ಮಣ್ಯದಲ್ಲೇ ಮಾಡಬೇಕಿಲ್ಲ! ಆದರೆ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಇಂಥ ಸರ್ಪ ಸಂಸ್ಕಾರವನ್ನೇ ಹೊಟ್ಟೆ ಪಾಡಾಗಿಸಿಕೊಂಡ ಜ್ಯೋತಿಷಿಗಳ ಹಿಂಡೇ ಇದೆ. ಅಂಥವರಿಗೆ ಬೆಂಗಳೂರಿನ ದ್ವಾರಕನಾಥ್, ಚಂಭಟ್ಟ, ವಿ.ಎಸ್. ನಾಯಕ್ ಥರದವರ ಲಿಂಕ್ ಇದೆ. ಅಧಿಕಾರ ವಂಚಿತ ಶ್ರೀಮಂತ ರಾಜಕಾರಣಿಗಳು, ಚಿತ್ರನಟರು, ಉದ್ದಿಮೆಪತಿಗಳನ್ನು ಇವರು ಹಿಡಿದು ಸರ್ಪದೋಷದ ಕತೆ ಕಟ್ಟುತ್ತಾರೆ. ಬಲೆಗೆ ಬಿದ್ದ ಮಿಕದಿಂದ ಸುಲಿದಿದ್ದರಲ್ಲಿ ಒಂದು ಭಾಗವನ್ನು ಲೋಕಲ್ ಜ್ಯೋತಿಷಿಗಳು, ದೇವಸ್ಥಾನದವರು ಹಂಚಿಕೊಂಡರೆ, ದೊಡ್ಡ ಪಾಲನ್ನು ನಾಯಕ್ ಥರದವರು ನುಂಗುತ್ತಾರೆ. ಅದಕ್ಕೆ ಸುಬ್ರಹ್ಮಣ್ಯನ ವಾಹನ ನವಿಲಾದ್ದರಿಂದ, ನವಿಲು ಹಾವಿಗೆ ವೈರಿಯಾದ್ದರಿಂದ ಸರ್ಪಬಾಧೆ ತಪ್ಪುತ್ತದೆಯೆಂದೇ ಸುಬ್ರಹ್ಮಣ್ಯಕ್ಕೆ ಕರೆತರಲಾಗುತ್ತದೆ. ಕುಕ್ಕೆ ಹೆಸರಾಗಿದ್ದೇ ಇಂಥ ಜ್ಯೋತಿಷಿಗಳು ಹೆಣೆದ ಸರ್ಪಸನ್ನಿಯ ಜಾಲದಿಂದಾಗಿ.

[illegible]

ದೊಡಲೇ ಮುಂಬಯಿ, [illegible]ರತ್ ಮತ್ತು ದೆಹಲಿಯ [illegible]ಲ ಜ್ಯೋತಿಷಿಗಳನ್ನು ಬುಕ್ ಮಾಡಿಕೊಂಡು ಅವರು [illegible]ವತಕೊಟ್ಟ ಗಿಫಾರಿಗಳಿಂದ [illegible]ಲಿದ ದುಡ್ಡಲ್ಲಿ ಅರ್ಧ [illegible]ಡುತ್ತೇನೆಂದು ಮಾತು [illegible]ಟ್ಟವನಲ್ಲ; ಕುಕ್ಕೆ [ಸು]ಬ್ರಹ್ಮಣ್ಯದ ದೇವಾಲಯದ ಪ್ರಧಾನ ಅರ್ಚಕ ಕೇಶವ [ಜ]ೋಗಿತ್ತಾಯನಿಗೂ ಅರ್ಧಕ್ಕರ್ಧ ಪರ್ಸೆಂಟ್ ಒಪ್ಪಂದ ಮಾಡಿಕೊಂಡ. ಹಾಗೇ ತಮಿಳುನಾಡಿನ ಅನೇಕ





ಜ್ಯೋತಿಷಿಗಳ ಕಾಂಟ್ಯಾಕ್ಟ್ ಗಿಟ್ಟಿಸಿದ ನಾಯಕ್ ಅವರನ್ನೂ [ತ]ನ್ನ ದಂಧೆಯ ಪಾಲುದಾರರನ್ನಾಗಿಸಿಕೊಂಡ.

ಹೀಗೆ ವ್ಯಾಪಿಸಿದ ನಾಯಕ್‌ನ ಸರ್ಪಸನ್ನಿಗೆ ಮುಂಬಯಿಯ ಶೆಟ್ಟಿ ಹೋಟೆಲಿಯರ್‌ಗಳು ಜನ [ಸ]ೇಜಯನ [ಸ]ರ್ಪಯಾಗಕ್ಕೆ [ಬ]ಲಿಯಾದ [ಹ]ಾವುಗಳಂತೆ [ಬ]ಂದುಬಿದ್ದರು. [ಮ]ೊದಲು ಬಾಲಿವುಡ್ [ನ]ಟಿ ಜೂಹಿ [ಚ]ಾವ್ಲಾಳನ್ನು ಕುಕ್ಕೆ [ಸು]ಬ್ರಹ್ಮಣ್ಯಕ್ಕೆ ಕರೆತಂದ [ನ]ಾಯಕ್‌ನ ಬುಟ್ಟಿಗೆ [ಹ]ಿಂದಿ ಚಿತ್ರರಂಗದ [ಆ]ಧಾರ [ಸ್ತ]ಂಭಗಳಲ್ಲೊಂದಾದ [ರ]ಾಜ್‌ಕಪೂರ್ [ಕ]ುಟುಂಬವೇ [ಬ]ಲಿಯಾಯಿತು. ಇಲ್ಲಿ ನಾಯಕ್‌ನ ತಂತ್ರವಿಷ್ಟೇ. [ಒ]ಂದಾನೊಂದು ಕಾಲಕ್ಕೆ ಐಷಾರಾಮದಿಂದ ಮೆರೆದ [ಸ]ಾಹುಕಾರ ಹುತ್ತಕ್ಕೆ ತನ್ನ ಛೇಲಾ ಜ್ಯೋತಿಷಿಗಳನ್ನು ಛೂ [ಬ]ಿಡುತ್ತಾನೆ. ನಿಮಗೆ ಕಾಳ ಸರ್ಪ ಯೋಗವಿದೆ, [ಸ]ರ್ಪದೋಷವಿದೆ; ಅದಕ್ಕೇ ಈ ಗತಿಯಾಗಿದೆ ಎಂದು





[illegible]

ನಂಬಿಸುತ್ತಾನೆ. ಸಿನೆ ದೊಡ್ಡ ತನಕ ಮೆರೆದು ನೆಲಕಚ್ಚಿದವರ ಸ್ವಕಾಲಜಿಯೇ ಹಾಗಿರುತ್ತದೆ. ಹತಾಶೆಯಲ್ಲಿ ಯಾರೇನೇ ಅಂದರೂ ಅದನ್ನೂ ಒಮ್ಮೆ ಪರೀಕ್ಷಿಸಿ ಬಿಡುವ ಮನಸ್ಥಿತಿಯಿದು. ಹಾಗೇ ನಾಯಕ್‌ನ ಮಂಕುಬೂದಿಗೆ ಬಲಿಯಾಗಿ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದು ಸರ್ಪ ಸಂಸ್ಕಾರ ಮಾಡಿದ ಮೇಲಾದರೂ ಜೂಹಿ ಚಾವ್ಲಾಳ ಬೇಡಿಕೆ ಕುದುರಬೇಕಿತ್ತು. ಹೋಗಲಿ ರಿಷಿ. ಕಪೂರ್, ಶಶಿ ಕಪೂರ್‌ಗಾದರೂ ಲಕ್ಕು ಕುದುರಿತೆ?

ಈಗ ಸಚಿನ್ ತೆಂಡೂಲ್ಕರ್ ಬುಟ್ಟಿಗೆ ಬಿದ್ದಿದ್ದಾನೆ. ಏನೆಲ್ಲಾ ಫಿಜಿಯೋ ಥೆರಪಿ ಮಾಡಿಸಿಕೊಂಡರೂ ತನ್ನ ಮೊದಲಿನ ಫಾರ್ಮ್ ಕಂಡುಕೊಳ್ಳಲು ಸಚಿನ್ ಕೈಲಾಗಲಿಲ್ಲ. ಅಲ್ಲಿಗೆ ಸಚಿನ್‌ನ ಬ್ಯಾಟಿಂಗ್ ಸ್ಟ್ರೋಕ್ಸ್ ಹಿಂದಿನಂತಿಲ್ಲ ಎಂದೇ ಅರ್ಥ. ಅದಕ್ಕೂ ಸರ್ಪ ದೋಷಕ್ಕೂ ಥಳಕು ಹಾಕಿ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದು ಆಶ್ಲೇಷ ಬಲಿ, ಸರ್ಪ ಸಂಸ್ಕಾರ ಮಾಡಿದಾಕ್ಷಣ ಸಚಿನ್ ಹಿಂದಿನಂತೆ ಬ್ಯಾಟ್ ಮಾಡುವುದೇ ಆಗಿದ್ದರೆ ವಿನೋದ್ ಕಾಂಬ್ಳಿ, ಸೌರವ್ ಗಂಗೂಲಿ, ವಿ.ವಿ.ಎಸ್. ಲಕ್ಷ್ಮಣ್, ಜಾವಗಲ್ ಶ್ರೀನಾಥ್, ಸಂಜಯ್ ಮಾಂಜ್ರೇಕರ್ ಮುಂತಾದವರೆಲ್ಲ ಕುಕ್ಕೆ ಸುಬ್ರಹ್ಮಣ್ಯದಲ್ಲೇ ಠಿಕಾಣಿ ಹೂಡಬೇಕಿತ್ತು.

ಪಾಪ ಹತಾಶೆಗೆ ಬಿದ್ದು ಸಚಿನ್ ಸರ್ಪಸನ್ನಿಗೆ ಬಲಿಯಾಗಿದ್ದಾನೆ. ಅಂಥಾ ಸಚಿನ್‌ನೇ ಸರ್ಪದೋಷ ಕಳಕೊಳ್ಳಲು ಸುಬ್ರಹ್ಮಣ್ಯಕ್ಕೆ ಬಂದದ್ದು ಗೊತ್ತಾಗಿದ್ದೇ ಕರ್ನಾಟಕದ ರಾಬಿನ್ ಉತ್ತಪ್ಪ ಬುಟ್ಟಿಗೆ ಬಿದ್ದಿದ್ದಾನೆ. ಇನ್ನೂ ದುರಂತವೆಂದರೆ ಸೋಕಾಲ್ಡ್ ಸಮಾಜವಾದಿ, ಬುದ್ಧಿಜೀವಿ ಎಂದೆಲ್ಲ ಪೋಸು ಕೊಡುವ 'ಮುಕ್ತ' ಧಾರಾವಾಹಿಯ ಕರ್ತೃ ಟಿ.ಎನ್. ಸೀತಾರಾಮ್ ಲಜ್ಜೆಗೆಟ್ಟು ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದು ಸರ್ಪ ಸಂಸ್ಕಾರ ನೆರವೇರಿಸಿದ್ದಾರೆ. ತೀರ ಲೇಟೆಸ್ಟ್ ಸುದ್ದಿಯೇನೆಂದರೆ ಇದೇ ಮೇ ಹದಿಮೂರರಂದು ನಟ ವಿಷ್ಣುವರ್ಧನ್ ಕೂಡ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಪ್ರತ್ಯಕ್ಷರಾಗಿ ಆಶ್ಲೇಷ ಬಲಿ ಕೊಟ್ಟಿದ್ದಾರೆ. ಇನ್ನೊಂದು ತಿಂಗಳಲ್ಲಿ ಸ್ಟಾರ್ ಕ್ರಿಕೆಟರ್ ಮಹೇಂದ್ರಸಿಂಗ್ ದೋನಿ ಕೂಡ ಕುಕ್ಕೆಗೆ ಬರಲಿದ್ದಾನಂತೆ. ಇದು ನಾಯಕ್ ಹುಟ್ಟಿ ಹಾಕಿದ ಸರ್ಪ ಸನ್ನಿಯ ಸಾಮಾಜಿಕ ದುಷ್ಪರಿಣಾಮ.

ಇತ್ತ ಟಿ.ಎನ್. ಸೀತಾರಾಮ್‌ರ 'ಮುಕ್ತ' ಧಾರಾವಾಹಿಯು ಮುಕ್ತಾಯಗೊಳ್ಳುತ್ತಿದೆ. ವಿಷ್ಣುಗೆ ಕಳೆದುಹೋದ ಯೌವನದ ನೆನಪುಗಳು ಕಾಡುತ್ತಿವೆ. ಆದರೆ ಸರ್ಪ ಪೂಜೆಯಿಂದ 'ಮುಕ್ತ' ಪುನರ್‌ಜನ್ಮ ಪಡೆಯುವುದೂ, ವಿಷ್ಣು ಯುವಕನಾಗುವುದೂ ಕನಸಿನ ಮಾತು!

ತಮಾಷೆಯೆಂದರೆ ಇಂಥಾದೊಂದು ಸಿಂಡ್ರೋಮ್ ಹುಟ್ಟು ಹಾಕಿದ ವಂಚಕ ನಾಯಕ್‌ನ ಮಹಾಲಕ್ಷ್ಮಿ ಲೇಔಟ್‌ನ ಬಂಗಲೆ ಮತ್ತು ಕುಕ್ಕೆ ಸುಬ್ರಹ್ಮಣ್ಯದಲ್ಲಿ ಆತನ ಹೋಟೆಲ್ ಎರಡೂ ದಿನೇದಿನೇ ಕೊಬ್ಬುತ್ತಲೇ ಇವೆ. ಕೆಲವರಿಗೆ ನಸೀಬು ಕೆಟ್ಟರೆ ಅದನ್ನೇ ಬಂಡವಾಳ ಮಾಡಿಕೊಳ್ಳುವ ವಂಚಕರು ಭಾರತದಲ್ಲಲ್ಲದೇ ಮತ್ತೆಲ್ಲಿದ್ದಾರು? ಕುರಿ ಕೊಬ್ಬಿದಷ್ಟೂ ಕುರುಬನಿಗೇ ಲಾಭ. ಮುಠ್ಠಾಳರಿರುವ ತನಕ ನಾಯಕ್‌ನ ಸರ್ಪ ಸುಲಿಗೆಗೆ ಭಂಗವಿಲ್ಲ! ■

ಪೂಜೆಯ ನಂತರ ದಕ್ಷಿಣೆ ಕೊಡುತ್ತಿರುವ ಸಚಿನ್

ಸಾಹಿತ್ಯ ಅಕಾಡೆಮಿ

ಅಗ್ರಹಾರ ವಿರುದ್ಧ ವ್ಯಗ್ರರಾರು?

ಸ್ವತಃ ಅಗ್ರಹಾರ ಕೃಷ್ಣಮೂರ್ತಿಗೂ ಅರ್ಥವಾಗದ ಬೇರೆಯವರ ಗ್ರಹಿಕೆಗೂ ಸಿಗುತ್ತಿರದ ವಿಷಯವಿದು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಯಾಗಿ ಇದೇ ಮೇ 31 ರಂದು ಅಧಿಕಾರ ಸ್ವೀಕರಿಸಬೇಕಿರುವ ಕನ್ನಡ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿಯ ಬಗ್ಗೆ ದೂರದ ದೆಹಲಿಯಲ್ಲಿ ದೊಡ್ಡ ಮಟ್ಟದ ಗಲಾಟೆಗಳಾಗುತ್ತಿವೆ. ಜ್ಞಾನಪೀಠ ಪುರಸ್ಕೃತೆ ಮಹಾಶ್ವೇತಾ ದೇವಿ, ಕೃಷ್ಣ ಸೋಬ್ತಿ, ರಾಜೇಂದ್ರ ಯಾದವ್, ಚಂದ್ರಕಾಂತ್ ಪಾಟೀಲ್, ಕೆ.ಜಿ. ಶಂಕರ್ ಪಿಳ್ಳೆ ಇನ್ನೂ ಮುಂತಾದವರು ಇಷ್ಟು ದಿನ ಕೇವಲ ಪತ್ರಿಕಾ ಹೇಳಿಕೆಗಳ ಸಮರ ಸಾರಿದ್ದಲ್ಲದೆ ಈಗ ರಾಷ್ಟ್ರಪತಿಯನ್ನೇ ಕಾಣಲು ಹೊರಟಿದ್ದಾರೆ. ಇವರಲ್ಲಿ ಮಹಾಶ್ವೇತಾ ದೇವಿ ಹೊರತುಪಡಿಸಿ ಮಿಕ್ಕವರು ಕನ್ನಡ ಓದುಗರಿಗೆ ಅಷ್ಟು ಪರಿಚಿತ ಹೆಸರುಗಳಲ್ಲ. ಇನ್ನು ಬೆಂಗಾಳಿ ಲೇಖಕಿ ಮಹಾಶ್ವೇತಾ ದೇವಿ ತಮ್ಮ ಸಾಮಾಜಿಕ ಬದ್ಧತೆ, ಕಳಕಳಿಯ ಕಾರಣಕ್ಕೆ ಹೆಸರಾಗಿರುವವರು. ಹೀಗಿದ್ದಾಗಲೂ ನಿರಪರಾಧಿ ಅಗ್ರಹಾರ ವಿರುದ್ಧ ಇವರು ಜಗಳಕ್ಕೆ ಬಿದ್ದಿರುವುದೇಕೆ? ಕೇಂದ್ರ ಸಾಹಿತ್ಯ ಅಕಾಡೆಮಿಯ ಈಗಿನ ಅಧ್ಯಕ್ಷ ಗೋಪಿಚಂದ್ ನಾರಾಂಗ್ ಇದಕ್ಕೆ ಮೂಲ ಕಾರಣ ಎಂದು ಕಾಣುತ್ತಿದೆ. ಈ ನಾರಂಗ್ ಭ್ರಷ್ಟ ವ್ಯಕ್ತಿ ಎಂಬ ಆರೋಪಗಳು ಬಹಳ ಕಾಲದಿಂದ ಇವೆ. ಅಕಾಡೆಮಿ ಅಧ್ಯಕ್ಷನಾಗುವ ಮೊದಲು ಅಲ್ಲೇ ಉಪಾಧ್ಯಕ್ಷನಾಗಿಯೂ ಇದ್ದಾತ ಈ ನಾರಾಂಗ್. ಅಧ್ಯಕ್ಷನಾದ ಮೇಲೆ ಈತ ತನ್ನ ಚೇಂಬರಿಗೊಂದು ಶೌಚಾಲಯ ಕಟ್ಟಿಸಿಕೊಂಡು ಅನಾಮತ್ತು 20 ಲಕ್ಷ ಖರ್ಚು ತೋರಿಸಿದ್ದನಂತೆ.



ಅಗ್ರಹಾರ ಈ ನಾರಂಗ್ ಕ್ಯಾಂಡಿಡೇಟ್ ಎಂಬ ಶಂಕೆಯಿಂದ ಅವರ ನೇಮಕಾತಿಗೆ ವಿರೋಧ ವ್ಯಕ್ತವಾಗುತ್ತಿದೆ ಎಂಬ ಮಾತುಗಳಿವೆ. ಆದರೆ ಅಗ್ರಹಾರ ಆಯ್ಕೆಯಾದದ್ದು ನಾರಂಗ್‌ರಿಂದಲ್ಲ, ಹನ್ನೊಂದು ಜನರ ಆಯ್ಕೆ ಸಮಿತಿ ಎದಿರು ಮತ್ತು ಅರ್ಹ ಮಾನದಂಡಗಳ ಪ್ರಕಾರ ಎಂಬ ಸತ್ಯ ಈಗ ಯಾರಿಗೂ ಬೇಡವಾಗಿದೆ.

ಅಗ್ರಹಾರ ವಿರುದ್ಧ ಇದ್ದ ಹಣ ದುರುಪಯೋಗದ ಆರೋಪ ಸಾಬೀತಾಗಲಿಲ್ಲ, ಸಿಬಿಐ ತನಿಖಾ ವರದಿ ಎಂಬಿತ್ಯಾದಿಯಾಗಿ ಈಗ ಕೆಲ ಪತ್ರಕರ್ತರು ಬೊಂಬಡಾ [illegible] ಸಾಬೀತಾಗಲಿಲ್ಲ. ನಂತರ ಅಗ್ರಹಾರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದಾಕೆ [illegible] ಜಾತಿ ಪತ್ರ ನೀಡಿ ಸಿಕ್ಕಿಬಿದ್ದ ನಂತರ ಈಗ ಸಸ್ಪೆಂಡಾಗಿದ್ದಾಳೆ.

ಅಗ್ರಹಾರ ಇಷ್ಟೆಲ್ಲಾ ಅಗ್ನಿ ಪರೀಕ್ಷೆ ದಾಟಿ ಬಂದ ನಂತರವೂ ಮತ್ತೆ ಹಳೆ ವಿಷಯ ಕೆದಕುತ್ತಿರುವ, ಅಂತದಕ್ಕೆ ವ್ಯಾಪಕ ಪ್ರಚಾರ [illegible] ಪತ್ರಕರ್ತರು [illegible] ಬೇರೇನೂ ಸಾಧಿಸಲಾರರು.

ಈ ಸಂದರ್ಭದ ವಿಷಾದದ ಸಂಗತಿ ಎಂದರೆ ಯು.ಆರ್. ಅನಂತಮೂರ್ತಿಯವರ ನಡವಳಿಕೆ. ನೈತಿಕವಾಗಿ ಅಷ್ಟೇ ಅಲ್ಲ ಬಹಿರಂಗವಾಗಿಯೂ ಅಗ್ರಹಾರ ನೇಮಕದ ಪರ ಇರಬೇಕಿದ್ದ ಅವರು "ಅಕಾಡೆಮಿಯೇ ಇನ್ನೊಮ್ಮೆ ತನಿಖೆ ನಡೆಸಲಿ, ಅಗ್ರಹಾರನೂ ಒಪ್ಪಿಕೊಳ್ಳಲಿ" ಎಂದು ಪತ್ರ ಬರೆದಿದ್ದು ಅವರ [illegible] ತಕ್ಕುದಾಗಿರಲಿಲ್ಲ.


ಹೀಗೆ ಅಗ್ರಹಾರ ವಿರುದ್ಧ ವ್ಯಗ್ರರಾಗಿರುವವರ್ಯಾರೆಂದು ನೋಡುತ್ತಾ ಹೋದರೆ ಒಬ್ಬೊಬ್ಬರಿಗೆ ಒಂದೊಂದು ಕಾರಣವಿರುವಂತಿದೆ.

ಇಷ್ಟಾದರೂ ಅಗ್ರಹಾರ ಕಾರ್ಯದರ್ಶಿಯಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರವೇಶಿಸುವುದನ್ನು ಇವರು ತಡೆಯಲಾಗದು... ಇದು ಮಾತ್ರ ಖಚಿತ.

ಯಾರದ್ದೋ ಸ್ವಾರ್ಥಕ್ಕೆ, ಮತ್ಯಾರದ್ದೋ ಕುತಂತ್ರಕ್ಕೆ ಅಗ್ರಹಾರ ಬಲಿಯಾಗಬಾರದು. ಇಂತಹವರ ಮಸಲತ್ತುಗಳನ್ನೆಲ್ಲ ಮೀರಿ ಅಗ್ರಹಾರ ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿ ಕ್ರಿಯಾಶೀಲರಾಗಿ ತಮ್ಮ ಜವಾಬ್ದಾರಿ ನಿರ್ವಹಿಸುವಂತಾಗಲಿ. ■

ಧರ್ಮಸಿಂಗ್ ಮನೆಗೆ, ಸಚಿನ್ ಪೆವಿಲಿಯನ್ನಿಗೆ!

ಬೆಂಗಳೂರಿನ ಸುಬ್ರಹ್ಮಣ್ಯನಗರದ ಮತ್ತೊಬ್ಬ ಜ್ಯೋತಿಷಿ ಶಂಕರ್ ಹೆಗಡೆಯವರ ಪ್ರಕಾರ ಸಚಿನ್‌ಗೆ ಕಾಳಸರ್ಪ ಯೋಗವಿತ್ತೆಂಬುದೇ ಶುದ್ಧ ಸುಳ್ಳು. ಆತನನ್ನು ಜ್ಯೋತಿಷಿ ನಾಯಕ್ ಯಾಮಾರಿಸಿದ್ದಾನೆ!



ಶಂಕರ್ ಹೆಗಡೆ

ಶಂಕರ್ ಹೆಗಡೆಯವರು ಸಚಿನ್ ಜನ್ಮ ಕುಂಡಲಿಯನ್ನು ಹಿಡಿದೇ ಈ ಮಾತು ಹೇಳುತ್ತಾರೆ. ಸಚಿನ್ ಹುಟ್ಟಿದ್ದು 1973 ರ ಏಪ್ರಿಲ್ ಇಪ್ಪತ್ನಾಲ್ಕಕ್ಕೆ. ಜನ್ಮ ಕುಂಡಲಿಯ ಪ್ರಕಾರ ಪಂಚಮಾಧಿಪತಿ ಬುಧ ಮತ್ತು ಲಗ್ನಾಧಿಪತಿ ಶುಕ್ರ ಇದ್ದವರಿಗೆ ನಾಗದೋಷ ಬರುವುದೇ ಇಲ್ಲ. ಕಾಳ ಸರ್ಪಯೋಗ ಬರುವುದೇನಿದ್ದರೂ ವೃಷಭ ಲಗ್ನದಲ್ಲಿ ಹುಟ್ಟಿದವರಿಗೆ ಮಾತ್ರ. ಆದರೆ ಸಚಿನ್ ಹುಟ್ಟಿದ್ದು ಪೂರ್ಣಿಮಾದ ನಕ್ಷತ್ರದಲ್ಲಿ.

ಹಾಗೊಮ್ಮೆ ಸಚಿನ್ ಜಾತಕದಲ್ಲೇ ನಾಗದೋಷವಿದ್ದಿದ್ದರೆ ಈ ಹೊತ್ತಿಗಾತ ಗಟಾರದಲ್ಲಿರಬೇಕಿತ್ತು. ಈಗಲೂ ಸಚಿನ್‌ಗೆ ವರ್ಷಕ್ಕೆ 200 ಕೋಟಿ ಆದಾಯವಿದೆ. ಇದೇ ಜನವರಿಯಲ್ಲಿ ಜರ್ಮನ್ ಕಂಪನಿಯೊಂದು ನೂರು ದಶಲಕ್ಷ ಡಾಲರ್ ಜಾಹೀರಾತು ಒಪ್ಪಂದ ಮಾಡಿಕೊಂಡಿದೆ. ಇಷ್ಟೆಲ್ಲದರ ಮಧ್ಯೆಯೂ ತನ್ನ 35ನೇ ಸೆಂಚುರಿ ಬಾರಿಸಿ ಸುನೀಲ್ ಗಾವಸ್ಕರ್ ದಾಖಲೆ ಮುರಿದಿದ್ದಾನೆ. ಸರ್ಪದೋಷ ಇದ್ದಿದ್ದೇ ಆಗಿದ್ದರೆ ಇದೆಲ್ಲ ಸಾಧ್ಯವಿತ್ತೆ? ಏಕೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದ? ಸಚಿನ್ ತನ್ನ ವೈಫಲ್ಯಕ್ಕೆ ವೈಜ್ಞಾನಿಕ ಕಾರಣ ಹುಡುಕಬೇಕೇ ಹೊರತು ವಂಚಕ ಜ್ಯೋತಿಷಿಗಳನ್ನು ನಂಬುವುದಲ್ಲ ಎಂಬುದು ಶಂಕರ್ ಹೆಗಡೆಯವರ ವಾದ.

ತಮಾಷೆಯೆಂದರೆ ಇದೇ ನಾಯಕ್ ಕಳೆದ [illegible] ಪತ್ನಿ ಪ್ರಭಾವತಿಯವರನ್ನು ತನ್ನ ಮಹಾಲಕ್ಷ್ಮಿ ಲೇಔಟ್ ಆಫೀಸಿಗೆ ಕರೆಸಿದ್ದ. ನಿಮ್ಮ [illegible] ಇರೋದರಿಂದಲೇ ದೇವೇಗೌಡರು ಕಿರಿಕಿರಿ ಮಾಡ್ತಿದ್ದಾರೆ ಅದಕ್ಕೆ ಶಾಂತಿ ಮಾಡ್ತೀನಿ' ಎಂದೇ [illegible] ಪೂಜೆ ಮಾಡಿದ್ದ, ಆದಾಗಿ ಒಂದು ತಿಂಗಳಿಗೇ ಧರ್ಮಸಿಂಗ್ ಮಾಜಿಯಾಗಿದ್ದರು!

ನೆಲಮಂಗಲದ ನೆಲಗಳ್ಳರಿಗೆ ಎಎಸ್ಪಿ ಕೃಷ್ಣನೇ ನಾಯಕ!

ಐಪಿಎಸ್ ಗ್ರೇಡಿನ ಪೊಲೀಸ್ ಅಧಿಕಾರಿಯೊಬ್ಬ ತನ್ನ ಹೆಂಡತಿಯನ್ನು ಗ್ರಾಮ ಪಂಚಾಯ್ತಿ ಚುನಾವಣೆಗೆ ನಿಲ್ಲಿಸಿದ್ದನ್ನು ಕೇಳಿದ್ದೀರಾ? ಖಾಕಿ ಯೂನಿಫಾರ್ಮ್ ತೊಟ್ಟು ಪಂಚಾಯ್ತಿ ಚುನಾವಣೆಯಲ್ಲಿ ರಾಜಕೀಯ ಪಕ್ಷವೊಂದರ ಪರ ಪ್ರಚಾರ ನಡೆಸುವುದುಂಟೆ?

ತಾನೊಬ್ಬ ಪೊಲೀಸ್ ಅಧಿಕಾರಿ, ಅದೂ ಐಪಿಎಸ್ ಗ್ರೇಡಿನ ಅಧಿಕಾರಿ. ಇವೆಲ್ಲ ಕಾನೂನಿಗೆ ವಿರುದ್ಧ ಎಂಬ ಕನಿಷ್ಠ ಪ್ರಜ್ಞೆಯೂ ಬೆಂಗಳೂರು ಗ್ರಾಮಾಂತರ ಅಡಿಷನಲ್ ಎಸ್ಪಿ ಎಲ್.ಜಿ. ಕೃಷ್ಣಪ್ಪ ಸಾಹೇಬರಿಗೆ ಇದ್ದಂತಿಲ್ಲ. ಇಂಥೊಬ್ಬ ಅಧಿಕಾರಿಯ ಕೈಗೆ ಬೆಂಗಳೂರಿನ ಹೊರವಲಯದ ಒಂಭತ್ತು ತಾಲ್ಲೂಕುಗಳು ಸಿಕ್ಕಿಬಿಟ್ಟರೆ ಏನೆಲ್ಲಾ ಅನಾಹುತವಾದೀತು ಎಂಬುದಕ್ಕೆ 2005 ರ ಜೂನ್ 16 ರಂದು ಕೊಲೆಯಾದ ನೆಲಮಂಗಲದ ಚಿತ್ತನಗೆರೆ ಬಸವಯ್ಯ ಮತ್ತು ಆತನ ಕೊಲೆಗೆ ಸಾಕ್ಷಿದಾರರಾಗಿದ್ದ ವಕೀಲ ದೇವರಾಜ್ ಮತ್ತು ಗ್ರಾಮ ಪಂಚಾಯ್ತಿ ಮೆಂಬರ್ ಕೃಷ್ಣಮೂರ್ತಿ ಇದೇ ಮೇ ಐದಕ್ಕೆ ನಡುರಸ್ತೆಯಲ್ಲಿ ಕೊಲೆಯಾದದ್ದು ಸಹಜ ನಿದರ್ಶನಗಳಷ್ಟೇ.

ಜಾತ್ಯತೀತ ದಳ ಮತ್ತು ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಎಲ್.ಜಿ. ಕೃಷ್ಣಪ್ಪನವರ ಲಕ್ಕು ಕುದುರಿತು. ಸ್ವತಃ ದೇವೇಗೌಡರೇ ನಿಂತು ಬೆಂಗಳೂರು ಗ್ರಾಮಾಂತರಕ್ಕೆ ಅಡಿಷನಲ್ ಎಸ್ಪಿಯನ್ನಾಗಿ ಹಾಕಿಸಿಕೊಂಡ ಮೇಲೆ ಕೇಳುವವರ್ಯಾರು? ಕೆ. ಶ್ರೀನಿವಾಸ್ ಕೇವಲ ನಾಮಕಾವಸ್ತೆಗಷ್ಟೇ ಎಸ್ಪಿಯಾದರೆ ಇಡೀ ಗ್ರಾಮಾಂತರದ ಪೊಲೀಸ್ ಕಾರುಬಾರುಗಳೆಲ್ಲ ಕೃಷ್ಣಪ್ಪನವರ ಅಧೀನಕ್ಕೊಳಪಟ್ಟವು. ಅಲ್ಲಿಗೆ ಬೆಂಗಳೂರಿನ ಸುತ್ತಲ ಸಮಸ್ತ ಲ್ಯಾಂಡ್ ಡೀಲುಗಳು ಪೊಲೀಸ್ ಠಾಣೆಗಳು ಮತ್ತು ಪಂಚಾಯ್ತಿ ರಗಳೆಗಳೆಲ್ಲ ಜೆಡಿ(ಎಸ್)ನ ಮರ್ಜಿಗನುಗುಣವಾಗಿ ಇತ್ಯರ್ಥಗೊಳ್ಳುವ ಇಂಥ ಪ್ರವೃತ್ತಿಯನ್ನು ಹುಟ್ಟು ಹಾಕಿದ್ದೇ ಕೃಷ್ಣಪ್ಪ.



ಶ್ರೀನಿವಾಸ್

ಹಿಂದಾದರೆ ಕನಿಷ್ಠ ತೋರ್ಪಡಿಕೆಗಾದರೂ ಪೊಲೀಸರು ನಿಷ್ಪಕ್ಷವಾಗಿರುತ್ತಿದ್ದರು. ಈಗ ಹಾಗಲ್ಲ, ಅಡಿಷನಲ್ ಎಸ್ಪಿ ಕೃಷ್ಣಪ್ಪನವರೇ ತಮ್ಮ ಪತ್ನಿ ಭಾಗ್ಯಲಕ್ಷ್ಮಮ್ಮನವರನ್ನು ನೆಲಮಂಗಲದ ಅರೆಬೊಮ್ಮನಹಳ್ಳಿ ಪಂಚಾಯ್ತಿ ಚುನಾವಣೆಗೆ ಲಕ್ಕಸಂದ್ರದಿಂದ ನಿಲ್ಲಿಸಿದರು. ಹೇಳಿಕೇಳಿ ಕೊರಟಗೆರೆ ಶಾಸಕ ಚನ್ನಿಗಪ್ಪನವರ ಕ್ಷೇತ್ರ. ಭಾಗ್ಯಲಕ್ಷ್ಮಮ್ಮ ಸ್ಪರ್ಧಿಸಿದ್ದು ಜಾತ್ಯತೀತ ಜನತಾದಳದ ಅಭ್ಯರ್ಥಿಯಾಗಿ. ಇನ್ನು ಅಡಿಷನಲ್ ಎಸ್ಪಿ ಸಾಹೇಬರನ್ನು ಕೇಳಬೇಕೆ? ತಮ್ಮ ಪತ್ನಿಯ ಪರವಾಗಿ ಖಾಕಿ ಯೂನಿಫಾರ್ಮ್ ತೊಟ್ಟೇ ಪಂಚಾಯ್ತಿ ಚುನಾವಣೆಯಲ್ಲಿ ಪ್ರಚಾರಕ್ಕಿಳಿದರು.



ಭಾಗ್ಯಲಕ್ಷ್ಮಮ್ಮ

ಅಡಿಷನಲ್ ಎಸ್ಪಿಯಾದವನೇ ಜೆಡಿ(ಎಸ್) ಪರ ಪ್ರಚಾರಕ್ಕಿಳಿದ ಮೇಲೆ ಅದೇ ಪಕ್ಷದ ಪುಡಿ ಪುಢಾರಿಗಳ ಅಟ್ಟಹಾಸ ಇನ್ನೆಷ್ಟಿರಬೇಡ? ಆಗ ಎದ್ದು ನಿಂತವನು ಚಿತ್ತನಗೆರೆಯ ಹಂತಕ ಶ್ರೀನಿವಾಸ್. ನೆಲಮಂಗಲದ ತನ್ನ ಬಾಳೇಕಾಯಿ ಮಂಡಿಯಲ್ಲಿ ಕೂತಿದ್ದ ತನ್ನ ರಾಜಕೀಯ ವೈರಿ ಚಿತ್ತನಗೆರೆಯ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಬಸವಯ್ಯನನ್ನು ಬರ್ಭರವಾಗಿ ಕೊಲ್ಲಿಸಿಬಿಟ್ಟ. ಆಗ ನೆಲಮಂಗಲ ಪೊಲೀಸ್ ಠಾಣೆಗೆ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಪರಮೇಶ್ ಡೈನಾಮಿಕ್ ಅಧಿಕಾರಿ. ಸೀನನ ಹಂತಕ ಪಡೆಯಲ್ಲಿದ್ದ ಮಚ್ಚು ಮುನಿಯ, ಶಂಕ್ರ, ಆಟೋ ಬೀರಯ್ಯ, ಅನಂತ ಎಲ್ಲರೂ ಜೈಲು ಪಾಲಾದರು. ಆದರೆ, ಗ್ಯಾಂಗ್ ಲೀಡರ್ ಶ್ರೀನಿವಾಸ್ ಮಾತ್ರ ಬಂಧಿತನಾಗಲೇ ಇಲ್ಲ.

> ಕೃಷ್ಣಪ್ಪನವರ ಖಾಕಿ ಸೇವೆ ಶುರುವಾಗಿದ್ದು ಬಳ್ಳಾರಿಯ ಕೌಲ್‌ಬಜಾರ್ ಪೊಲೀಸ್ ಠಾಣೆಯಿಂದ. ಅಲ್ಲಿದ್ದಷ್ಟೂ ದಿನ ಕೌಲ್‌ಬಜಾರ್ ಮಟ್ಕಾ ಮತ್ತು ಮೈದಂಧೆಯ ಬೀಡಾಗಿತ್ತು. 1995 ರಲ್ಲಿ ಬಡ್ತಿ ಪಡೆದು ಕನಕಪುರಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಬಂದ ಕೃಷ್ಣಪ್ಪ ತಾನೆಂಥಾ ಜಾತಿವಾದಿ ಎಂಬುದನ್ನು ವಿಧಾನಸಭೆಯ ತನಕ ಸಾರಿಬಿಟ್ಟರು. ಬೆಂಗಳೂರು ಗ್ರಾಮಾಂತರಕ್ಕೆ ಕಾಲಿಟ್ಟದ್ದೇ ಕೃಷ್ಣಪ್ಪ ನೆಲಮಂಗಲದ ನಟೋರಿಯಸ್ ನೆಲಗಳ್ಳರಾದ ವಡೇರಹಳ್ಳಿ ಜಯರಾಮ್, ಚಿತ್ತನಗೆರೆಯ ಹಂತಕ ಶ್ರೀನಿವಾಸ್, ಈತನ ಭಾವ ಯಡಾಳು ದೇವಿಗೆ ಬೆನ್ನೆಲುಬಾಗಿ ನಿಂತರು.



ಹಂತಕ ಶ್ರೀನಿವಾಸ್ ಕೂಡ ಜೆಡಿ(ಎಸ್)ನ ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದರಿಂದ ಆತನ ತಂಟೆಗೆ ಹೋಗಬೇಡಿ ಎಂದು ಅಡಿಷನಲ್ ಎಸ್ಪಿ ಸಾಹೇಬರೇ ಫರ್ಮಾನು ಹೊರಡಿಸಿದ್ದರು!

ಪೊಲೀಸ್ ವ್ಯವಸ್ಥೆಯೇ ಜೆಡಿಎಸ್ ಹಂತಕರ ಪರವಿತ್ತಾದ್ದರಿಂದ ಸಹಜವಾಗೇ ಬಸವಯ್ಯನ ಹತ್ಯೆಗೆ ಸಾಕ್ಷಿಯಾಗಿದ್ದ ವಕೀಲ ದೇವರಾಜು ಮತ್ತು ಕೃಷ್ಣಮೂರ್ತಿ ಅನ್ಯಾಯವಾಗಿ ಕೊಲೆಯಾದರು. ಇದು ಕೇವಲ ನೆಲಮಂಗಲದ ಕತೆಯಾದರೆ ಇನ್ನು ಬೆಂಗಳೂರು ಗ್ರಾಮಾಂತರದ ಉಳಿದ ತಾಲ್ಲೂಕುಗಳ ಗತಿ ಏನಾಗಿರಬೇಕು? ಇವತ್ತು ದೇವನಹಳ್ಳಿ ಪೊಲೀಸ್ ಠಾಣೆ ಅಕ್ಷರಶಃ ರಿಯಲ್ ಎಸ್ಟೇಟ್ ಏಜನ್ಸಿಯಾಗಿದೆ. ಕನಕಪುರದ ತಲಘಟ್ಟಪುರ ಪೊಲೀಸ್ ಠಾಣೆಯಂತೂ ನೆಲಗಳ್ಳರ ಪಾಲಿನ ಸ್ವರ್ಗ. ಮಾಗಡಿ ರಸ್ತೆಯ ತಾವರೆಕೆರೆ, ಹೊಸಕೋಟೆ, ಹೆಬ್ಬಗೋಡಿ, ಬಿಡದಿ ಮುಂತಾದ ಪೊಲೀಸ್ ಠಾಣೆಗಳೆಲ್ಲ ರಿಯಲ್ ಎಸ್ಟೇಟ್ ಅಡ್ಡೆಗಳೆ.


ರಾ. ಸೋಮನಾಥ್

ಮೂಲತಃ ತುಮಕೂರು ತಾಲ್ಲೂಕು ನಾಗವಲಿ ಬಳಿಯ ಲಕ್ಕೇನಹಳ್ಳಿಯ ಕೃಷ್ಣಪ್ಪ ಹುಟ್ಟಾ ಶ್ರೀಮಂತರೇನಲ್ಲ. ತಂದೆ ಗಂಗಭೋರಯ್ಯ ಬಡರೈತ. ಆತನ ಮೂವರು ಮಕ್ಕಳ ಪೈಕಿ ಕೃಷ್ಣಪ್ಪ ಕೊನೆಯವರು. ಅಣ್ಣ ಗಂಗಾಧರ ಇವತ್ತಿಗೂ ಒಂದೆಕರೆ ಖುಷ್ಕಿ ಭೂಮಿಯಲ್ಲೇ ಬದುಕುತ್ತಿದ್ದಾನೆ. ಅಕ್ಕ ಬೋರಮ್ಮನದೂ ಇದೇ ಪಾಡು. ಆದರೆ ಕೃಷ್ಣಪ್ಪ ಓದಲೆಂದು ಬಂದದ್ದು ತನ್ನ ಸೋದರ ಮಾವ ನೆಲಮಂಗಲದ ವೀರಭದ್ರಯ್ಯನವರ ಮನೆಗೆ. ಅನುಕೂಲಸ್ಥರಾಗಿದ್ದ ವೀರಭದ್ರಯ್ಯನವರೇ ಕೃಷ್ಣಪ್ಪನನ್ನು ಓದಿಸಿ, ಸಬ್‌ಇನ್ಸ್‌ಪೆಕ್ಟರ್ ಕೆಲಸವನ್ನೂ ಕೊಡಿಸಿ, ತಮ್ಮ ಮಗಳು ಭಾಗ್ಯಲಕ್ಷ್ಮಮ್ಮನನ್ನು ಕೊಟ್ಟು ಮದುವೆ ಮಾಡಿದ್ದರು.

ಕೃಷ್ಣಪ್ಪನವರ ಖಾಕಿ ಸೇವೆ ಶುರುವಾಗಿದ್ದು ಬಳ್ಳಾರಿಯ ಕೌಲ್‌ಬಜಾರ್ ಪೊಲೀಸ್ ಠಾಣೆಯಿಂದ. ಅಲ್ಲಿದ್ದಷ್ಟೂ ದಿನ ಕೌಲ್‌ಬಜಾರ್ ಮಟ್ಕಾ ಮತ್ತು ಮೈದಂಧೆಯ ಬೀಡಾಗಿತ್ತು. 1995 ರಲ್ಲಿ ಬಡ್ತಿ ಪಡೆದು ಕನಕಪುರಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಬಂದ ಕೃಷ್ಣಪ್ಪ ತಾನೆಂಥಾ ಜಾತಿವಾದಿ ಎಂಬುದನ್ನು ವಿಧಾನಸಭೆಯ ತನಕ ಸಾರಿಬಿಟ್ಟರು. ಕನಕಪುರದ ಅರಳಾಳು ಗ್ರಾಮದಲ್ಲಿ ದಲಿತರಿಗೂ ಸವರ್ಣೀಯರಿಗೂ ಮೊದಲೇ ಜಮೀನು ವಿವಾದವಿತ್ತು. ತನ್ನ ಜಾತಿಯ ಉಯಿಲೇಗೌಡ ಎಂಬ ಭೂಮಾಲೀಕನ ಪರವಹಿಸಿದ ಕೃಷ್ಣಪ್ಪ ಆತನ ಭೂಕಬಳಿಕೆ ವಿರುದ್ಧ ಹೋರಾಟಕ್ಕಿಳಿದಿದ್ದ ಎಪ್ಪತ್ತೊಂಭತ್ತು ಮಂದಿ ದಲಿತರನ್ನು ಹೆಂಗಸರು ಮಕ್ಕಳೆನ್ನದೆ ಜೈಲಿಗಟ್ಟಿಬಿಟ್ಟರು. ಆವತ್ತು ಯಾರೋ ಕೇಳಿದ್ದಕ್ಕೆ 'ಅಲ್ರೀ ದಲಿತರು ಜೈಲಲ್ಲಿದ್ದರೇನೇ ಸೇಫ್ ಅಲ್ವೇನ್ರೀ?' ಎಂದು ಅಬ್ಬರಿಸಿದ್ದರು ಕೃಷ್ಣಪ್ಪ.


ಪೊಲೀಸರು ಯಾರನ್ನು ರಕ್ಷಿಸಬೇಕಿತ್ತೋ ಅವರನ್ನೇ ಜೈಲಿಗಟ್ಟಿದಾಗ ದಲಿತ ಕವಿ ಸಿದ್ಧಲಿಂಗಯ್ಯ ವಿಧಾನಪರಿಷತ್ತಿನಲ್ಲಿ ಪ್ರತಿಭಟಿಸಿದರು. ಸರ್ಕಾರ ಕೃಷ್ಣಪ್ಪನನ್ನು ಸಸ್ಪೆಂಡ್ ಮಾಡಿತು. ಆದರೆ ಮುಖ್ಯಮಂತ್ರಿ ಜೆ.ಎಚ್. ಪಟೇಲರ ಮೇಲೆ ದೇವೇಗೌಡರು ಒತ್ತಡ ತಂದು ಬಡ್ತಿ ಕೊಡಿಸಿ ಚಿತ್ರದುರ್ಗಕ್ಕೆ ಡಿವೈಎಸ್‌ಪಿಯನ್ನಾಗಿ ಹಾಕಿಸಿದರು. ಅಲ್ಲಿಂದ ಸಿರಾಕ್ಕೆ ವರ್ಗಾ ಮಾಡಿಸಿಕೊಂಡ ಕೃಷ್ಣಪ್ಪ ಐಪಿಎಸ್ ಆಗಿ ಬಡ್ತಿ ಗಿಟ್ಟಿಸಿ ಬೆಂಗಳೂರು ಗ್ರಾಮಾಂತರಕ್ಕೆ ವಕ್ಕರಿಸಿದ್ದು ಇಲ್ಲಿಗೆ ಎರಡು ವರ್ಷಗಳ ಹಿಂದೆ.

ಬೆಂಗಳೂರು ಗ್ರಾಮಾಂತರಕ್ಕೆ ಕಾಲಿಟ್ಟದ್ದೇ ಕೃಷ್ಣಪ್ಪ ನೆಲಮಂಗಲದ ನಟೋರಿಯಸ್ ನೆಲಗಳ್ಳರಾದ ವಡೇರಹಳ್ಳಿ ಜಯರಾಮ್, ಚಿತ್ತನಗೆರೆಯ ಹಂತಕ ಶ್ರೀನಿವಾಸ್, ಈತನ ಭಾವ ಯಡಾಳು ದೇವಿಗೆ ಬೆನ್ನೆಲುಬಾಗಿ ನಿಂತರು. ಇವರನ್ನು ಮುಂದಿಟ್ಟುಕೊಂಡೇ ಪತ್ನಿ ಭಾಗ್ಯಲಕ್ಷ್ಮಮ್ಮ, ಪುತ್ರಿ ಕೀರ್ತಿರಾಜ್ ಹೆಸರಲ್ಲಿ ಕಂಡಕಂಡ ಜಮೀನಿಗೆ ಬಾಯಿಬಿಟ್ಟರು. ನೆಲಮಂಗಲದ ತ್ಯಾಮಗೊಂಡ್ಲು ಹೋಬಳಿಯ ಪತ್ನಿಯ ತವರೂರು ಲಕ್ಕಸಂದ್ರದ ಸ.ನಂ. 58/2 ರಲ್ಲಿ ಹದಿನೇಳು ಗುಂಟೆ, 20/3 ರಲ್ಲಿ ಹದಿನೈದು ಗುಂಟೆ 57 ರಲ್ಲಿ ಹನ್ನೊಂದು ಗುಂಟೆ, 59/1 ರಲ್ಲಿ ಎರಡು ಎಕರೆ ಏಳು ಗುಂಟೆ, 20/2 ರಲ್ಲಿ ಇಪ್ಪತ್ತು ಗುಂಟೆ, 19/2 ರಲ್ಲಿ 35 ಗುಂಟೆ; ಹೀಗೆ ಎಲ್ಲೆಲ್ಲಿ ದಲಿತರ ಜಮೀನಿತ್ತೋ ಅದೆಲ್ಲವನ್ನೂ ಸೇರಿಸಿ ಒಟ್ಟೂ ಎಂಟೆಕರೆಯನ್ನು ಪತ್ನಿ ಭಾಗ್ಯಲಕ್ಷ್ಮಮ್ಮನವರ ಹೆಸರಲ್ಲಿ ಕಬಳಿಸಿ ಅಲ್ಲೊಂದು ಸಮೃದ್ಧ ಅಡಿಕೆ ತೋಟ ಎಬ್ಬಿಸಿದರು.



ಎಸ್.ಐ. ಪರಮೇಶ್

ಇದನ್ನು ವಿರೋಧಿಸಿದ ಎಂಬ ಒಂದೇ ಕಾರಣಕ್ಕೆ ಲಕ್ಕಸಂದ್ರದ ಮಾಜಿ ಗ್ರಾಮ ಪಂಚಾಯ್ತಿ ಸದಸ್ಯ ಗಂಗರಾಜುವನ್ನು ತಲೆಗೆ ರಿವಾಲ್ವರ್ ಇಟ್ಟು ಬೆದರಿಸಿದರು. ಇವತ್ತು ಕೃಷ್ಣಪ್ಪನವರ ಅಡಿಕೆ ತೋಟವೇ ಒಂದು ಕೋಟಿ ಬೆಲೆ ಬಾಳುತ್ತದೆ. ಸಾಲದ್ದಕ್ಕೆ ಇದೇ ಲಕ್ಕಸಂದ್ರದ ದಲಿತರಿಂದ ಮತ್ತೆರಡು ಎಕರೆ 20 ಗುಂಟೆ ಕಿತ್ತುಗೊಂಡು ಅಲ್ಲಿ ಹೂವಿನ ತೋಟ ನಿರ್ಮಿಸಿದರು. ರಜಾ ದಿನಗಳಲ್ಲಿ ಮಜಾ ಮಾಡುವುದಕ್ಕೆಂದು ಹುಟ್ಟೂರು ಲಕ್ಕೇನಹಳ್ಳಿಯಲ್ಲಿ ಮತ್ತೆ ಐದೆಕರೆ ಸರ್ಕಾರಿ ಭೂಮಿ ಕಬಳಿಸಿ ಅಲ್ಲೊಂದು ಐಷಾರಾಮಿ ಗೆಸ್ಟ್‌ಹೌಸ್ ಕಟ್ಟಿಸಿದ್ದಾರೆ.



ಬಿನ್ನಮಂಗಲ ಕೃಷ್ಣಪ್ಪ

ಇವಿಷ್ಟೂ ತಮ್ಮ ಹುಟ್ಟೂರು ಪತ್ನಿಯ ಊರಿನ ಖಯಾಯಿಯಾದರೆ ಬೆಂಗಳೂರಿನ ಹೆಗ್ಗನಹಳ್ಳಿ ಕ್ರಾಸ್‌ನಲ್ಲಿ 100 X 80 ಸೈಟು, ಮೈಸೂರು ರಿಂಗ್‌ರೋಡ್ ಬಳಿ ಮೂರು ಎಕರೆ ಜಮೀನು, ನೆಲಮಂಗಲದ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಒಂದೆಕರೆ ಭೂಮಿ, ಪಕ್ಕದ ಪರಿಮಳ ನಗರದಲ್ಲಿ ಆರು ಸೈಟುಗಳು; ಹೀಗೆ ಕೃಷ್ಣಪ್ಪನವರ ಸ್ಥಿರಾಸ್ತಿಗಳ ಪಟ್ಟಿ ಬೆಳೆಯುತ್ತಲೇ ಇದೆ.

ಸಾಲದ್ದಕ್ಕೆ ತಮ್ಮ ಪತ್ನಿಯ ಊರಾದ ಲಕ್ಕಸಂದ್ರದ ಆಂಜನೇಯಸ್ವಾಮಿ ದೇವಸ್ಥಾನದ ಇನಾಮು ಜಮೀನನ್ನೂ ಕೃಷ್ಣಪ್ಪ ಬಿಡಲಿಲ್ಲ. ಅದು ಎರಡೆಕರೆ ಇಪ್ಪತ್ತು ಗುಂಟೆ ವಿಶಾಲ ಭೂಮಿ. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಮರಗಳಿವೆ. ಕಾಲಾಂತರದಿಂದ ಅದನ್ನು ದಲಿತರು ಉಳುಮೆ ಮಾಡಿಕೊಂಡೇ ಬಂದಿದ್ದಾರೆ. ದೇವಸ್ಥಾನದ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿಸುತ್ತೇನೆಂದು ದಲಿತರಿಂದ ಖಾಲಿ ಸ್ಟ್ಯಾಂಪ್ ಪೇಪರ್‌ಗೆ ಸಹಿ ಪಡೆದ ಕೃಷ್ಣಪ್ಪ ಇಡೀ ಜಮೀನನ್ನು ತಮ್ಮ ಪತ್ನಿ ಮಕ್ಕಳು ಸಂಬಂಧಿಕರಿಂದ ತುಂಬಿದ ಟ್ರಸ್ಟ್‌ಗೆ ವರ್ಗಾಯಿಸಿಕೊಂಡರು. ಇದನ್ನು ತಿಳಿದು ದಲಿತರು ತಿರುಗಿಬಿಟ್ಟರು. ತನ್ನ ಪೊಲೀಸ್ ಬುದ್ಧಿ ಉಪಯೋಗಿಸಿದ ಕೃಷ್ಣಪ್ಪ ದಲಿತ ಯುವಕರಾದ ಚಂದ್ರಶೇಖರ್ ಮತ್ತು ಸಂಗಸ್ವಾಮಿ ಎಂಬಿಬ್ಬರನ್ನು ಕಳ್ಳಭಟ್ಟಿ ಕೇಸ್ ಹಾಕಿಸಿ ಜೈಲಿಗಟ್ಟಿದ್ದಾರೆ.

ಕುರಿಮಂದೆ ಕಾಯಲು ತೋಳ ಬಿಟ್ಟರೆ ಏನಾಗುತ್ತದೋ ಅದೇ ಬೆಂಗಳೂರು ಗ್ರಾಮಾಂತರ ತುಂಬ ಸಂಭವಿಸುತ್ತಿದೆ. ಅದಕ್ಕೆ ಲೇಟೆಸ್ಟ್ ಉದಾಹರಣೆಯೆಂದರೆ- ನೆಲಮಂಗಲದ NH4 ರ ಸ.ನಂ. 202 ರಲ್ಲಿದ್ದ 12 ಗುಂಟೆ ಜಮೀನನ್ನು ಕೃಷ್ಣಪ್ಪ ತನ್ನ ಮಗಳು ಕೀರ್ತಿರಾಜ್ ಹೆಸರಲ್ಲಿ ನುಂಗಿದ್ದು. ಅದನ್ನು ಭೂರಹಿತ ದಲಿತರಿಗೆ ಸರ್ಕಾರ ಮಂಜೂರು ಮಾಡಬೇಕಾಗಿತ್ತು, ಆದರೆ ಕೃಷ್ಣಪ್ಪ ಪ್ರಭಾವ ಬೀರಿ ತನ್ನ ಮಗಳು ಅಂಗವಿಕಲೆ, ನಿರುದ್ಯೋಗಿ ಸಾಲದ್ದಕ್ಕೆ ಕೃಷಿ ಕೂಲಿಯವಳು ಎಂಬಂತೆ ಖೊಟ್ಟಿ ಪ್ರಮಾಣ ಪತ್ರ ಸಲ್ಲಿಸಿ ನುಂಗಿದ್ದಾನೆ. ಸದ್ಯ ಅಡಿಷನಲ್ ಎಸ್ಪಿ ಛೇಂಬರ್ ಜೆಡಿ(ಎಸ್)ನ ಕಛೇರಿಯಾಗಿದ್ದು ಒಂದು ದುರಂತವಾದರೆ ಒಂದೊಂದಾಗಿ ಕಾಂಗ್ರೆಸ್ ಕಾರ್ಯಕರ್ತರ ತಲೆ ಉರುಳುತ್ತಿರುವುದು ಮತ್ತೊಂದು ದುರಂತ. ಕೃಷ್ಣಪ್ಪನ ದುರಾಡಳಿತದ ವಿರುದ್ಧ ಕಾಂಗ್ರೆಸ್ ನಾಯಕ ಖರ್ಗೆಯವರೇ ಬೀದಿಗಿಳಿದು ಪ್ರತಿಭಟಿಸುತ್ತೇನೆಂದು ಎಚ್ಚರಿಕೆ ಕೊಟ್ಟಾಗಲೂ ಕುಮಾರಸ್ವಾಮಿಗೆ ಬಿಸಿ ಮುಟ್ಟಲ್ಲ, ಏಕೆಂದರೆ ಆತ ಅಪ್ಪನ ಬಲುವಳಿಯಲ್ಲವೆ?

ಮುಂದಿನ ಟಾರ್ಗೆಟ್ ಬಿನ್ನಮಂಗಲ ಕೃಷ್ಣಪ್ಪ

ನೆಲಮಂಗಲದ ಜೆಡಿಎಸ್ ಹಂತಕರಿಗೂ ಎಎಸ್ಪಿ ಕೃಷ್ಣಪ್ಪನವರಿಗೂ ಇದ್ದ ನಂಟಿನ ವಿರುದ್ಧ ಶುರುವಿನಿಂದಲೂ ಪ್ರತಿಭಟಿಸುತ್ತಲೇ ಬಂದದ್ದು ಬಿನ್ನಮಂಗಲ ಕೃಷ್ಣಪ್ಪ. ಈತ ನೆಲಮಂಗಲದ ಅರಿಶಿನಕುಂಟೆ ಕ್ಷೇತ್ರದ ಜಿಲ್ಲಾ ಪಂಚಾಯ್ತಿ ಸದಸ್ಯ, ಹೇಳಿಕೇಳಿ ನೆಲಮಂಗಲದ ಕಿಂಗ್‌ಮೇಕರ್.

ಚಿತ್ತನಗೆರೆ ಬಸವಯ್ಯನ ಹತ್ಯೆಯಾದ ನಂತರ ಹಂತಕ ಶ್ರೀನಿವಾಸನ ವಿರುದ್ಧ ಸಾಕ್ಷಿಗಳನ್ನು ರೆಡಿ ಮಾಡಿ, ಲೋಕಲ್ ಕಾಂಗ್ರೆಸ್ಸಿಗರಿಗೆ ಧೈರ್ಯ ಕೊಟ್ಟುಕೊಂಡೇ ಬಂದ ಬಿನ್ನಮಂಗಲ ಕೃಷ್ಣಪ್ಪನನ್ನೇ ಮುಗಿಸಿಬಿಟ್ಟರೆ?

ಇದು ಹಂತಕ ಶ್ರೀನಿವಾಸನ ಹುನ್ನಾರ. ಜೋಡಿ ಕೊಲೆಯ ನಂತರ ನೆಲಮಂಗಲದ ಇನ್ಸ್‌ಪೆಕ್ಟರ್ ಜಗನ್ನಾಥ್ ರೈಗೆ ಫೋನ್ ಮಾಡಿ 'ನನ್ನನ್ನು ಸುಮ್ಮನೇ ಯಾಕೆ ಹುಡುಕ್ತೀರಾ? ಇನ್ನಿಬ್ಬರನ್ನು ಮುಗಿಸಿದ ನಂತರವೇ ನಾನು ಸರೆಂಡರ್ ಆಗೋದು. ಒಬ್ಬ ಬಿನ್ನಮಂಗಲ ಕೃಷ್ಣಪ್ಪ ಮತ್ತೊಬ್ಬ ಚಿಕ್ಕನಾಗಯ್ಯ, ಅವರ ತಲೆ ತೆಗೆದೇ ಸರೆಂಡರ್ ಆಗ್ತೀನಿ. ಸುಮ್ನೆ ಯಾಕೆ ತೊಂದ್ರೆ ತಗೋತೀರಾ?'

ಹಾಗಂಥ ಹಂತಕ ಶ್ರೀನಿವಾಸನೇ ಇನ್ಸ್‌ಪೆಕ್ಟರ್‌ಗೆ ಫೋನ್ ಮಾಡಿದ್ದಾನೆ. ಮೂರು ಕೊಲೆ ಮಾಡಿ ತಲೆ ಮರೆಸಿಕೊಂಡವನೊಬ್ಬ ಪೊಲೀಸರಿಗೇ ಫೋನ್ ಮಾಡಿ ಇಂಥಿಂಥವರನ್ನೇ ಮುಗಿಸ್ತೀನಿ ಎಂದು ದೌಲತ್ತು ಮೆರೆಯುತ್ತಾನೆಂದರೆ; ನೆಲಮಂಗಲದ ಪೊಲೀಸ್ ವ್ಯವಸ್ಥೆ ಇನ್ನೆಷ್ಟು ಕುಲಗೆಟ್ಟಿರಬೇಡ?

ಚಿಕ್ಕಮಗಳೂರಿನಲ್ಲಿ
ರ್ಮದರ್ಶಿಯಾಗಿ ಸ್ಥಾಪಿಸಲ್ಪಟ್ಟಿರುವ ಎಂ.ಎಸ್. ನಂಜುಂಡಸ್ವಾಮಿ ಎಂಬ ಐನಾತಿ. ಗೆ ಬದುಕು-ಭವಿಷ್ಯ ನೀಡಿದ ಲಾಖೆಯ ನೌಕರ ಸಂಘಕ್ಕೆ ಸೇರಿದ ಕ್ಷಾಂತರ ರೂಪಾಯಿ ಮೌಲ್ಯದ ಸ್ತಿಯನ್ನು ಆಪೋಶನ ಮಾಡಿಕೊಂಡು ಅಂದಾದುಂದಿ ನಡೆಸುತ್ತಿದ್ದಾನೆ. ಪಶು ವೈದ್ಯಕೀಯ ಲಾಖೆಯಲ್ಲಿ ಪಶುವೈದ್ಯ ಪರೀಕ್ಷಕನಾಗಿದ್ದ ನಂಜುಂಡಸ್ವಾಮಿ ಮತ್ತು ಲಕ್ಷಾಂತರ ರೂಪಾಯಿ ಆಸ್ತಿಯ ಒಡೆಯನಾದದ್ದು ಹೇಗೆ? ಇವನು ಧರ್ಮದರ್ಶಿಯಾದ ಹಿನ್ನೆಲೆ ಏನು? ಸಂಘದ ಆಸ್ತಿಯನ್ನು ಕೈವಶ ಮಾಡಿಕೊಳ್ಳಲು ಅನುಸರಿಸಿದ ತಂತ್ರಗಳೇನು? ಇವೆಲ್ಲವನ್ನೆಲ್ಲಾ ಕೆದಕುತ್ತಾ ಹೋದರೆ ನಂಜುಂಡಸ್ವಾಮಿಯ ಧರ್ಮದರ್ಶಿತ್ವದ ಮುಖವಾಡ ಕಳಚಿ ನಿಜ ರೂಪ ಅನಾವರಣಗೊಳ್ಳುತ್ತದೆ.



ಶ್ರೀ ಕಾಮಧೇನು ಗಣಪತಿ ದೇವಸ್ಥಾನ

ಸಂಘ ಶುರುವಾಯಿತು

1967 ರಲ್ಲೇ ಕರ್ನಾಟಕ ಪಶು ವೈದ್ಯಕೀಯ ಪರೀಕ್ಷಕರ ಸಂಘ ಅಸ್ತಿತ್ವಕ್ಕೆ ಬಂತು. ನಗರಸಭೆ ಇದಕ್ಕೆ ನಿವೇಶನ ನೀಡಿತು. ಈ ನಿವೇಶನವನ್ನು ಸಂಘದ ಅಧ್ಯಕ್ಷನಾಗಿದ್ದ ಎಂ.ಎಸ್. ನಂಜುಂಡಸ್ವಾಮಿಯ ಹೆಸರಲ್ಲೇ ನೀಡಲಾಗಿತ್ತು. ಇಲ್ಲಿ ಕಟ್ಟಡ ನಿರ್ಮಾಣ ಕೈಗೆತ್ತಿಕೊಳ್ಳುವಾಗ ಸಂಘವು ಪಶು ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಾಲಯ ಸ್ಥಾಪನೆ, ನಿವೃತ್ತಿ ಹೊಂದಿದ ಪರೀಕ್ಷಕರು ಮತ್ತು ಮೇಲ್ವಿಚಾರಕರಿಂದ ಜಾನುವಾರುಗಳ ಸೇವೆ, ಚಿಕಿತ್ಸೆ ಮಾಡುವುದು, ಇದಕ್ಕೆ ಅಗತ್ಯವಾದ ಔಷಧಿಗಳನ್ನು ಉಚಿತವಾಗಿ ಸರಬರಾಜು ಮಾಡುವ ಉದ್ದೇಶ ಹೊಂದಿತ್ತು.

ಆದರೆ ಇದಾವುದೂ ಜಾರಿಗೆ ಬರಲಿಲ್ಲ. ಸಂಘದ ನಿವೇಶನದಲ್ಲಿ ಕೊಠಡಿಗಳ ನಿರ್ಮಾಣ ಪ್ರಾರಂಭವಾದಾಗ ಜಿಲ್ಲೆಯ ಎಲ್ಲಾ ಪಶುವೈದ್ಯ ಪರೀಕ್ಷಕರು ತಲಾ 500 ರೂ.ಗಳಂತೆ ಧನ ಸಹಾಯ ಮಾಡಿದರು. ಕೊಡಿಗೆರೆಯ ಸಂಘವೊಂದೇ 60-70 ಸಾವಿರ ರೂ ಕ್ರೋಢೀಕರಿಸಿ ಕೊಟ್ಟಿತು. ಹೀಗೆ ನೌಕರರಿಂದ ಇಲಾಖೆಯ ಲಕ್ಷಾಂತರ ರೂಪಾಯಿ ಸಂಗ್ರಹಿಸಿದರೆ ಖಾಸಗಿಯಾಗಿ ರಾಜಕಾರಣಿಗಳು, ಗಣ್ಯರು, ವ್ಯಾಪಾರಿಗಳಿಂದಲೂ ಲಕ್ಷಾಂತರ ದೇಣಿಗೆ ಸಂಗ್ರಹಿಸಿದ. ಜೊತೆಗೆ ಕಟ್ಟಡ ನಿರ್ಮಾಣಕ್ಕೆ ಪಶು ಆಸ್ಪತ್ರೆಯ ಹಳೆಯ ಕಟ್ಟಡದ ಕಲ್ಲು, ಮರ-ಮುಟ್ಟು ಗಳನ್ನು ಬಳಸಿಕೊಂಡ. ನಿಯಮಾವಳಿಗಳ ಪ್ರಕಾರ ಇವನ್ನೆಲ್ಲಾ ಹರಾಜು ಹಾಕಬೇಕಿತ್ತು. ಅಂತೂ ಇಂತೂ ಜಿಲ್ಲಾ ಕೇಂದ್ರದ ಕಾಮಧೇನು ಭವನದ ಕೊಠಡಿಗಳ ನಿರ್ಮಾಣ ಕಾರ್ಯ ಮುಗಿಯಿತು.

ಈ ಕಾಮಧೇನು ಭವನದ ಕೊಠಡಿಗಳನ್ನು ಸಂಘ ಸಂಸ್ಥೆಗಳಿಗೆ ಬಾಡಿಗೆ ನೀಡುವ ಮೂಲಕ ಸ್ವಾಹಾ ಮಾಡಲು ಪ್ರಾರಂಭಿಸಿದ. ಈ ಬಗ್ಗೆ ಲೆಕ್ಕ ಪತ್ರವೊಂದನ್ನೂ ನೀಡಲಿಲ್ಲ.



ಡಾ. ಜೆ.ಪಿ.ಕೃಷ್ಣೇಗೌಡ

ಅಸಮಾಧಾನದ ಕಿಡಿ

ಸಂಘದ ಬೈಲಾ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಇಪ್ಪತ್ತೈದು ವರ್ಷಗಳ ಕಾಲ ಅಧ್ಯಕ್ಷನಾಗಿಯೇ ಮುಂದುವರಿದುಕೊಂಡು ಬರುತ್ತಿದ್ದ ನಂಜುಂಡಸ್ವಾಮಿಯ ವಿರುದ್ಧ ಸಂಘದ ಪದಾಧಿಕಾರಿಗಳಲ್ಲಿ ಅಸಮಾಧಾನದ ಕಿಡಿ ಹೊತ್ತಿತು. ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಧಾನ ಕಾರ್ಯದರ್ಶಿ ರಾಮಚಂದ್ರೇಗೌಡನಿಗೂ ನಂಜುಂಡಸ್ವಾಮಿಗೂ ಮನಸ್ತಾಪಗಳುಂಟಾದವು. ರಾಮಚಂದ್ರೇಗೌಡ ಆರಂಭದಲ್ಲೂ ನಂಜುಂಡಸ್ವಾಮಿಗೆ ರಬ್ಬರ್ ಸ್ಟಾಂಪ್‌ನಂತೆ ವರ್ತಿಸುತ್ತಿರಲಿಲ್ಲ. ಹಾಗಾಗಿ [illegible] ನಂಜುಂಡಸ್ವಾಮಿಗೆ ಕಷ್ಟದ ದಿನಗಳಿದ್ದವು, [illegible] ಸಹಯೋಗದಿಂದ ಸಂಘದ ಇತರ ಪದಾಧಿಕಾರಿಗಳಲ್ಲಿ ನಂಜುಂಡಸ್ವಾಮಿಯ ಕಾರ್ಯವೈಖರಿಯನ್ನು [illegible] ಪ್ರಶ್ನಿಸಲಾಯಿತು [illegible] ಕೊಟ್ಟ ಕೇಸ್ ಆಗಿದ್ದ [illegible].



ಶ್ರೀನಿವಾಸ ಶೆಟ್ಟಿ



ಹಲೀಮುಲ್ಲಾ ಷರೀಫ್


ವಿಘ್ನನಿವಾರಕ ಬಂದ

ಇಂತಹ ಬೆಳವಣಿಗೆಗಳ ನಡುವೆಯೇ ನಂಜುಂಡಸ್ವಾಮಿ ಕಾಮಧೇನು ಭವನದ ಪಕ್ಕದ ನಿವೇಶನದಲ್ಲಿ ಗಣಪತಿ ದೇವಸ್ಥಾನ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡ. ಇವನ ಹಕೀಕತ್ತುಗಳನ್ನು ಬಲ್ಲ ಸಂಘದ ಸದಸ್ಯರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಆದರೂ ನಂಜುಂಡಸ್ವಾಮಿ ದೇವಸ್ಥಾನ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡೇ ಬಿಟ್ಟ. ನಂತರ ತನ ಗಾಗದವರ ವಿರುದ್ಧ ಮೇಲಧಿಕಾರಿಗಳಿಗೆ ದೂರು ನೀಡಿ ಕಿರುಕುಳ ನೀಡಲಾರಂಭಿಸಿದ. ಆದರೆ ನಂಜುಂಡಸ್ವಾಮಿಯ ನಖರಾಗಳನ್ನು ಪ್ರಶ್ನಿಸುವುದೇನೂ ನಿಲ್ಲಲಿಲ್ಲ. ನಂಜುಂಡಸ್ವಾಮಿ ತನಗೆ ಸಂಘದ ಉಸಾಬರಿಯೇ ಬೇಡವೆಂದು ಹೋದಲ್ಲಿ ಬಂದಲ್ಲಿ ಮಾತನಾಡುತ್ತಾ ರಾಜೀನಾಮೆ ನಾಟಕ ಶುರುವಿಟ್ಟುಕೊಂಡ. ಹಾಗೇ ರಾಜೀನಾಮೆಯನ್ನು ನೀಡಿದ. ತುರ್ತಾಗಿ ಸಂಘದ ಕಾರ್ಯಕಾರಿ ಸಮಿತಿ ಸಭೆ ಸೇರಿ ಈ ಬಗ್ಗೆ ಚರ್ಚಿಸಿ ನಂಜುಂಡ ಸ್ವಾಮಿಯಿಂದ ಲೆಕ್ಕಪತ್ರಗಳನ್ನು ಪಡೆಯಲು ತೀರ್ಮಾನಿಸಿದರು. ಪರಿಶೀಲನೆಗೆ ನಂಜುಂಡ ಬರಲಿಲ್ಲ. ನಂಜುಂಡ, ರಾಮಚಂದ್ರೇಗೌಡ ಕಾಮಧೇನು ಭವನಕ್ಕೆ ಬೀಗ ಜಡಿದು ನಾಪತ್ತೆಯಾಗಿಬಿಟ್ಟರು. ನಂಜುಂಡಸ್ವಾಮಿಯ ಈ ಸರ್ವಾಧಿಕಾರಿ ಧೋರಣೆಯ ಬಗ್ಗೆ ಅಸಮಧಾನಗೊಂಡ ಸದಸ್ಯರು ಹಳೆಯ ಸಮಿತಿಯನ್ನು ವಜಾ ಮಾಡಿ ನೂತನವಾಗಿ ತಾತ್ಕಾಲಿಕ ಸಮಿತಿಯೊಂದನ್ನು ರಚಿಸಿಕೊಂಡರು.

ಇಷ್ಟೆಲ್ಲಾ ನಡೆಯುತ್ತಿರುವಾಗಲೇ ನಂಜುಂಡಸ್ವಾಮಿ ಕಾಮಧೇನು ಭವನಕ್ಕೆ ಗಣ್ಯರ ಹೆಸರಲ್ಲಿ ತನಗಿಷ್ಟ ಬಂದವರನ್ನು, ದೇಣಿಗೆ ನೀಡುವವರನ್ನು ಕರೆಸಿ ಯಾವಾಗೆಂದರೆ ಆವಾಗ ಶಾಲು ಹೊದಿಸಿ-ಗಂಧದ ಹಾರ ಹಾಕಿ ಸನ್ಮಾನಿಸಿ ನಿರಂತರ ಪ್ರಚಾರದಲ್ಲಿರುತ್ತಿದ್ದ. ಗಣಪತಿ ದೇವಸ್ಥಾನದ ನಿರ್ಮಾಣದ ಹೆಸರಲ್ಲಿ ಎತ್ತುವಳಿ ಕಾಮಗಾರಿಯನ್ನೂ ಮುಂದುವರಿಸಿದ್ದ. ಹಿಂದೆ ರಾಜೀನಾಮೆ ನೀಡಿದ್ದರೂ ಮತ್ತೆ ತನ್ನ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ ಸಭೆ ಹಮ್ಮಿಕೊಂಡು ಪ್ರಧಾನ ಕಾರ್ಯದರ್ಶಿಗಳಿಂದ ಪದಾಧಿಕಾರಿಗಳಿಗೆ ಆಹ್ವಾನ ಕಳಿಸಿದ. ಈ ಆಹ್ವಾನಕ್ಕೆ ಹಿಂದೆ ಉಪಾಧ್ಯಕ್ಷರಾಗಿದ್ದ ಬಿ.ಎಂ. ಸಿದ್ಧರಾಮಪ್ಪ ಒಂದು ಪತ್ರ ಬರೆದು ಸಂಘದಲ್ಲಿ ನಡೆದಿರುವ ವಿದ್ಯಮಾನಗಳು, ಅಧ್ಯಕ್ಷರ ಕಾರ್ಯವೈಖರಿ, ಪದಾಧಿಕಾರಿಗಳನ್ನು ಕಡೆಗಣಿಸುವ ಧೋರಣೆ ಎಲ್ಲವನ್ನೂ ನೆನಪಿಸಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕಾರ್ಯಕಾರಿ ಸಮಿತಿಗೆ ಸಂಘದ ಜವಾಬ್ದಾರಿ ನೀಡಬೇಕೆಂದು ಹೇಳುತ್ತಾರೆ. ನಂಜುಂಡಸ್ವಾಮಿಗಾಗಲಿ, ರಾಮಚಂದ್ರೇಗೌಡನಿಗಾಗಲಿ ಈ ಸಲಹೆ ರುಚಿಸುವುದಿಲ್ಲ.

ಚಿಕ್ಕಮಗಳೂರು

ದೇವಸ್ಥಾನದ ಉದ್ಘಾಟನೆಯ ವಿಷಯ ಬಂದಾಗ ಸಂಘದ ಸದಸ್ಯರು ಇದನ್ನು ಪ್ರತಿಭಟಿಸಿ ಮೊದಲು ಚುನಾವಣೆ ನಡೆಸುವಂತೆ ಒತ್ತಾಯ ಮಾಡುತ್ತಾರೆ. ಆಗ ಊಸರವಳ್ಳಿ ನಂಜುಂಡಸ್ವಾಮಿ 'ಮೊದಲು ದೇವಸ್ಥಾನದ ಉದ್ಘಾಟನೆಗೆ ಸಹಕರಿಸಿ, ನಾನು ಚುನಾವಣೆಗೆ ಸಹಕರಿಸುತ್ತೇನೆ' ಎಂದು ಭರವಸೆ ಕೊಡುತ್ತಾನೆ. ನಂತರ ನಡೆದ ಚುನಾವಣೆಯಲ್ಲಿ ನಿಂಗಪ್ಪ ಅಧ್ಯಕ್ಷರಾಗಿ, ಬಿ.ಎಂ. ಸಿದ್ಧರಾಮಪ್ಪ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗುತ್ತಾರೆ. ನಂಜುಂಡಸ್ವಾಮಿ ನ್ಯಾಯಾಲಯಕ್ಕೆ ಹೋಗಿ ನೂತನ ಸಮಿತಿ ಅಧಿಕಾರ ವಹಿಸಿಕೊಳ್ಳದಂತೆ ತಡೆಯಾಜ್ಞೆ ತರುತ್ತಾನೆ. ನಂತರ ಸಂಘ ಆರು ವರ್ಷಗಳ ಕಾಲ ನಂಜುಂಡ ಸ್ವಾಮಿಯನ್ನು ಉಚ್ಚಾಟಿಸುತ್ತದೆ. ಎರಡು-ಮೂರು ವರ್ಷಗಳ ನಂತರ ನ್ಯಾಯಾಲಯದಲ್ಲಿದ್ದ ಪ್ರಕರಣ ಇತ್ಯರ್ಥವಾಗಿ ಬಿ. ನಿಂಗಪ್ಪನವರ ಅಧ್ಯಕ್ಷತೆಯಲ್ಲಿರುವ ಸಮಿತಿಯೇ ಅಧಿಕೃತ ಸಮಿತಿ ಎಂದು ಮಾನ್ಯ ಮಾಡುತ್ತದೆ.




ಧರ್ಮದರ್ಶಿಯಾದ

ಈ ಯಾವ ಬೆಳವಣಿಗೆಗಳಿಂದಲೂ ವಿಚಲಿತನಾಗದ ನಂಜುಂಡಸ್ವಾಮಿ ತಾನು ಹೇಳಿದಂತೆ ಕೇಳುವ ಒಂದಷ್ಟು ಮಂದಿಯನ್ನು ಸೇರಿಸಿ ಜಿಲ್ಲಾ ಪಶುವೈದ್ಯ ಪರೀಕ್ಷಕರ ಸಂಘ ಎಂಬ ಹೆಸರಲ್ಲಿ ಹೊಸ ಸಂಘವನ್ನು ನೋಂದಣಿ ಮಾಡಿಸಿಕೊಳ್ಳುತ್ತಾನೆ. ನಂತರ ಹನ್ನೊಂದು ಸದಸ್ಯರ ನ್ನೊಳಗೊಂಡ ಕಾಮಧೇನು ಟ್ರಸ್ಟ್ ಮಾಡಿಕೊಳ್ಳುತ್ತಾನೆ. ಸರ್ಕಾರಿ ಸೇವೆಯಲ್ಲಿದ್ದರೂ ತಾನೇ ಟ್ರಸ್ಟಿಯಾಗುತ್ತಾನೆ. ನೋಂದಣಿ ಮಾಡಿಸಿಕೊಳ್ಳುವಾಗ ಕರ್ನಾಟಕ ಪಶುವೈದ್ಯಕೀಯ ಪರೀಕ್ಷಕರ ಸಂಘದ ಕಾಮಧೇನು ಭವನದ ವಿಳಾಸ ಸ್ವಲ್ಪ ಬದಲಾಯಿಸಲಾಗಿದೆ. ಧರ್ಮಸ್ಥಳದ ವೀರೇಂದ್ರ ಹೆಗಡೆ, ಹೊರನಾಡು ಭೀಮೇಶ್ವರ ಜೋಷಿ, ಆದಿಚುಂಚನಗಿರಿಯ ಬಾಲಗಂಗಾಧರನಾಥರಂತವರನ್ನೆಲ್ಲಾ ಸನ್ಮಾನಿಸಿದ ಕೀರ್ತಿಯ ಪ್ರಭಾವಳಿ ನಂಜುಂಡಸ್ವಾಮಿಗೆ ಶೀರಕ್ಷೆಯಂತೆ ಕೆಲಸ ಮಾಡುತ್ತದೆ. ಪ್ರಭಾವವನ್ನು ಬಳಸಿಕೊಂಡಿರುವ ಡಾ. ಜೆ.ಪಿ. ಕೃಷ್ಣೇಗೌಡ, ಶ್ರೀನಿವಾಸ್ ಶೆಟ್ಟಿಯಂತವರ ನ್ನೊಳಗೊಂಡು ಟ್ರಸ್ಟ್ ಮಾಡಿಕೊಂಡಿದ್ದು ಈತನಿಗೆ ಅನುಕೂಲ ಆಯ್ತು. ಹೀಗೆ ದೊಡ್ಡವರಿಗೆ ಶಾಲು ಹೊದಿಸಿ, ಗಂಧದ ಹಾರ ಹಾಕಿ ಪ್ರಚಾರ ಗಿಟ್ಟಿಸಿಕೊಂಡು ತನ್ನ ಕರಾಳ ವ್ಯವಹಾರಗಳನ್ನು ನಡೆಸುತ್ತಿದ್ದ ನಂಜುಂಡಸ್ವಾಮಿ ನಿವೃತ್ತಿಯಾದ ನಂತರ ಫುಲ್‌ಟೈಂ ಟ್ರಸ್ಟಿಯಾಗಿದ್ದಾನೆ. ಗಣಪತಿ ದೇವಸ್ಥಾನದಲ್ಲಿ ತರಹೇವಾರಿ ಪೂಜೆ ಪುರಸ್ಕಾರಗಳನ್ನು ಹಮ್ಮಿಕೊಂಡು ಮುಗ್ಧ ಭಕ್ತಾದಿಗಳಿಂದ ದೋಚುವ ಕಾರ್ಯಕ್ಕೆ ನಿಂತಿದ್ದಾನೆ.

ಕಳೆದ ಫೆಬ್ರವರಿಯಲ್ಲಿ ಕರ್ನಾಟಕ ಪಶು ವೈದ್ಯಕೀಯ ಪರೀಕ್ಷಕರ ಸಂಘವು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ನಂಜುಂಡಸ್ವಾಮಿಯ ನೇತೃತ್ವದ ಸಂಘಕ್ಕೆ ಕೇಂದ್ರ ಸಂಘದ ಮಾನ್ಯತೆ ಇಲ್ಲ, ನೌಕರರ ಹಣದಿಂದ ನಿರ್ಮಿಸಿರುವ ಕಾಮಧೇನು ಭವನವನ್ನು ಅಧಿಕೃತ ಸಂಘಕ್ಕೆ ಕೊಡಿಸಬೇಕು. ಉಳಿದಂತೆ ದೇವಸ್ಥಾನ, ಕಲ್ಯಾಣ ಮಂಟಪದ ಜಾಗ ಸರ್ಕಾರದ್ದಾಗಿದೆ. ಆದರೆ ನಂಜುಂಡಸ್ವಾಮಿ ತನ್ನ ಸ್ವಂತದ್ದೆಂದೇ ಭಾವಿಸಿ ಬರುವ ಆದಾಯವನ್ನೆಲ್ಲಾ ನುಂಗುತ್ತಿದ್ದಾನೆ. ದೇವಸ್ಥಾನ, ಕಲ್ಯಾಣ ಮಂಟಪಗಳನ್ನು ಮುಜರಾಯಿ ಇಲಾಖೆಗೆ ಸೇರಿಸಿ ಸಾರ್ವಜನಿಕರಿಗೆ ಉಪಯೋಗವಾಗುವಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿಕೊಂಡಿದೆ.


ಪದ್ಮಭೂಷಣ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಹಲೀಮುಲ್ಲಾ ಷರೀಫ್, ಗೌರವಾಧ್ಯಕ್ಷ ಬಿ.ಎಂ. ಕುಮಾರ್ ಕೂಡಾ ದೇವಾಲಯ ಮತ್ತು ಕಲ್ಯಾಣ ಮಂಟಪವನ್ನು ಮುಜರಾಯಿಗೆ ಸೇರಿಸುವಂತೆ ಒತ್ತಾಯಿಸಿದ್ದಾರೆ. ಟ್ರಸ್ಟಿಗಳಲ್ಲೊಬ್ಬರಾಗಿರುವ ಡಾ. ಜೆ.ಪಿ. ಕೃಷ್ಣೇಗೌಡ ಇದಕ್ಕೆ ಪ್ರತಿಯಾಗಿ ಹೇಳಿಕೆ ನೀಡಿ, ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಲೆಟರ್‌ಹೆಡ್‌ನಲ್ಲಿ ತನ್ನ ಹೆಸರನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ; ಯಾವುದೇ ಕಾರಣಕ್ಕೂ ಗಣಪತಿ ದೇವಾಲಯವನ್ನು ಮುಜರಾಯಿಗೆ ವಹಿಸಬಾರದೆಂದು ಹೇಳಿದ್ದಾರೆ. ಈ ನಡುವೆ ತಮ್ಮ ಕೋಮುವಾದಿ ಕಾರ್ಯಕ್ರಮಗಳ ಪೂರ್ವಸಿದ್ಧತೆಯ ತಾಣವನ್ನಾಗಿ ಕಾಮಧೇನು ಭವನವನ್ನು ಬಳಸಿಕೊಳ್ಳುತ್ತಿದ್ದ ಚಡ್ಡಿಗಳು ಕಾಮಧೇನು ಭವನವನ್ನು ಮುಜರಾಯಿಗೆ ಸೇರಿಸಬಾರದೆಂಬ ಫರ್ಮಾನು ಹೊರಡಿಸಿದ್ದಾರೆ. ಚಡ್ಡಿಗಳ ಗೋ-ಸಂರಕ್ಷಣೆಯ ಅಜೆಂಡಾ ಪ್ರಾಮಾಣಿಕವಾದುದೇ ಆಗಿದ್ದಲ್ಲಿ ಜಾನುವಾರುಗಳ ಸೇವೆಗಾಗಿ, ಚಿಕಿತ್ಸೆಗಾಗಿ ಮೀಸಲಿರಿಸಿದ್ದ ಸಂಘದ ಕಾಮಧೇನು ಭವನವನ್ನು ಅಧಿಕೃತ ಸಂಘದ ಉಸ್ತುವಾರಿಗೆ ಬಿಡಿಸಿಕೊಡಬೇಕು. ಶಾಸಕ ಸಿ.ಟಿ. ರವಿ ಈ ವಿವಾದದ ಬಗ್ಗೆ ಮೌನ ವಹಿಸಿರುವುದು ಚಡ್ಡಿಗಳು ತೆಗೆದುಕೊಳ್ಳಬಹುದಾದ ನಿಲುವಿಗೆ ದಿಕ್ಸೂಚಿಯಂತಿದೆ.



ಆಡಳಿತ ಮಂಡಳಿಯ ಕಚೇರಿ

ಜಿಲ್ಲಾಧಿಕಾರಿಗಳು ಮಾತ್ರ ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ಅಧಿಕೃತ ಸಂಘಕ್ಕೆ ಕಾಮಧೇನು ಭವನವನ್ನು ಬಿಡಿಸಿಕೊಡುವುದರ ಜೊತೆಗೆ ಸರ್ಕಾರಿ ನಿವೇಶನದಲ್ಲಿ ದೇವಾಲಯ, ಕಲ್ಯಾಣ ಮಂಟಪ ನಿರ್ಮಿಸಿ, ಅದಕ್ಕೊಂದು ಟ್ರಸ್ಟ್‌ನ ಮುಖವಾಡ ಹಾಕಿ ಮಂಚಿಸುತ್ತಾ ಕುಳಿತಿರುವ ಧರ್ಮದರ್ಶಿ ನಂಜುಂಡಸ್ವಾಮಿ ಎಸಗಿರುವ ಅವಾಂತರಗಳೇನೆಂಬುದನ್ನು ಬಯಲಿಗೆಳೆಯಬೇಕು.

-ನವೀನಗಾರ



ಮಂತ್ರಿ ಚೆನ್ನಿಗಪ್ಪ ಹೋದ ಕಡೆಗೆಲ್ಲಾ ವೀರಾವೇಶದ ಹೇಳಿಕೆಗಳನ್ನು ನೀಡುತ್ತಾ ಹೀಗೆ ವರ್ಗಾವರ್ಗಿ ದಂಧೆಗಿಳಿದರೆ ಇಲಾಖೆಯ ಅಧಿಕಾರಿಗಳು, ನೌಕರರಿಂದ ಪ್ರಾಮಾಣಿಕತನವನ್ನು ನಿರೀಕ್ಷಿಸಲಾದೀತೆ?

ಬಳ್ಳಾರಿ: ವರ್ಗಾವಣೆಗೆ ಮಂತ್ರಿ ಚೆನ್ನಿಗಪ್ಪನ ರೇಟ್ ಫಿಕ್ಸಿಂಗ್!

ಅರಣ್ಯ ಮಂತ್ರಿ ಸಿ. ಚೆನ್ನಿಗಪ್ಪ ಬಳ್ಳಾರಿ ಜಿಲ್ಲೆಯ ಹಲವು ವ್ಯವಹಾರಗಳನ್ನು ಬೆಂಗಳೂರಿನಲ್ಲೇ ಕುಳಿತು ನಿಭಾಯಿಸಲು ತೀರ್ಮಾನಿಸಿದ್ದಾರಂತೆ. ನೂತನ ಕೋ-ಚಾ [illegible] ಅಧ್ಯಕ್ಷ ಬಂದಾಕ್ಷಣವೇ ಬಳ್ಳಾರಿಗೆ ಭೇಟಿ ನೀಡಿದ್ದ ಸಚಿವ ಚೆನ್ನಿಗಪ್ಪ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಅಕ್ರಮ-ಗಣಿಗಾರಿಕಾ ಚಟುವಟಿಕೆಗಳಿಗೆ ಕಡಿವಾಣ ಹಾಕುವುದಾಗಿಯೂ, ಅರಣ್ಯ ಭೂಮಿ-ಕಂದಾಯ ಭೂಮಿಗಳ ಬಗ್ಗೆ ಇರುವ ವಿವಾದ, ಗೊಂದಲಗಳನ್ನು ಸ್ಯಾಟಲೈಟ್ ಸರ್ವೆ ಮಾಡಿಸಿ ಬಗೆಹರಿಸುವುದಾಗಿಯೂ ಹೇಳಿದ್ದರು. ಕರ್ತವ್ಯ ಲೋಪದ ಆರೋಪದ ಮೇಲೆ ಫಾರೆಸ್ಟರ್ ರಾಮಮೂರ್ತಿ ಸೇರಿದಂತೆ ಮೂವರನ್ನು ಅಮಾನತು ಮಾಡಿರುವುದಾಗಿ ಹೇಳಿಕೆ ನೀಡಿದ್ದರು.

'ಲಂಕೇಶ್' ಈ ಹಿಂದೆ ವರದಿ ಮಾಡಿದಂತೆ ಅಮಾನತುಗೊಂಡ ಈ ನೌಕರರು ಸೂಟ್‌ಕೇಸ್ ಸೇವೆ ಸಲ್ಲಿಸಿ ಅಮಾನತು ಎಂಬ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಿದ್ದರು. ಇನ್ನು ಅಕ್ರಮ ಗಣಿಗಾರಿಕಾ ಚಟುವಟಿಕೆಗಳ ಬಗ್ಗೆ ವರದಿ ಸಲ್ಲಿಸಿದ್ದರೂ ಅದರ ಮೇಲೆ ಕ್ರಮ ಕೈಗೊಂಡ ನಿದರ್ಶನಗಳು ಕಂಡುಬಂದಿಲ್ಲ. ಇದೇ ಅಕ್ರಮ ಗಣಿಗಾರಿಕೆ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಜನತಾದಳದ ನಾಯಕಮಣಿಗಳು ಈಗ ಪರಸ್ಪರ ದೋಷಾರೋಪಣೆಗೆ ಇಳಿದಿದ್ದಾರೆ. ಪರಿಸ್ಥಿತಿ ಮಾತ್ರ 'ಒಬ್ಬರ ಕೈ ಮತ್ತೊಬ್ಬರ ಜೇಬಿನಲ್ಲಿ' ಎಂಬಂತಿದೆ. ಇದು ಆಡಳಿತರೂಢ ಜನತಾದಳ ಹಾಗೂ ಪ್ರತಿಪಕ್ಷ ಕಾಂಗ್ರೆಸ್‌ಗಳೆರಡಕ್ಕೂ ಬಿಸಿತುಪ್ಪದಂತೆಯೂ ಅನುಕೂಲ ಸಿಂಧು ಕಾರಣದಂತೆಯೂ ಇದೆ. ಈ ಹೇಳಿಕೆ ಪ್ರತಿ ಹೇಳಿಕೆಗಳಿಗೆ ಹೊರತಾಗಿಯೂ ಮಂತ್ರಿ ಚೆನ್ನಿಗಪ್ಪ ಇಲಾಖೆಯ ವರ್ಗಾವರ್ಗಿಗಳನ್ನು ನೇರವಾಗಿ ನಿಯಂತ್ರಿಸುತ್ತಾ ವ್ಯವಹಾರಕ್ಕೆ ಧೋಕಾ ಇಲ್ಲದಂತೆ ಮಾಡಿಕೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯ ಅರಣ್ಯ ಇಲಾಖೆಯ ಅಧಿಕಾರಿಗಳು, ನೌಕರ ವಲಯದಲ್ಲೀಗ ವರ್ಗಾವರ್ಗಿಗಳಿಗಾಗಿ ಮಂತ್ರಿ ಚೆನ್ನಿಗಪ್ಪ ಫಿಕ್ಸ್ ಮಾಡಿರುವರೆನ್ನಲಾದ ಬಿಡ್ಡಿಂಗ್ ರೇಟುಗಳದೇ ಚರ್ಚೆ. ಸದ್ಯಕ್ಕೀಗ ಬಳ್ಳಾರಿ, ಹೊಸಪೇಟೆ, ಸಂಡೂರು, ಸ್ವಾಮಿ ಮಲೈಬ್ಲಾಕ್ (ಎಸ್.ಎಂ.ಬಿ.) ರಾಮನ್ ಮಲೈ ಬ್ಲಾಕ್ (ಆರ್.ಎಂ.ಬಿ.), ಹೊಸಪೇಟೆ ಸೆಕ್ಷನ್‌ಗಳಿಗೆ ವಿಪರೀತ ಡಿಮ್ಯಾಂಡ್ ಇದೆ. ಇಲ್ಲಿ ಫಾರೆಸ್ಟರುಗಳಾಗಿ ಬರುವವರಿಗೆ ಭರ್ಜರಿ ಆಮದನಿ ಸಿಗುವ ನಿರೀಕ್ಷೆಯಿರುವುದರಿಂದ ನಾಮುಂದು ತಾಮುಂದು ಎಂದು ಪೈಪೋಟಿಗಿಳಿದು ಸಚಿವರ ಕೃಪಾಕಟಾಕ್ಷಕ್ಕಾಗಿ ಹಾತೊರೆಯುತ್ತಿದ್ದಾರೆ.

ಪ್ರಸ್ತುತ ವರ್ಗಾವರ್ಗಿಗೆ ಫಿಕ್ಸ್ ಮಾಡಿರುವರೆನ್ನಲಾದ ರೇಟಿಂಗ್ ಹೀಗಿದೆ: ಬಳ್ಳಾರಿ ಕನ್ಸರ್ವೇಟರ್ ಆಗಿ ಬರುವವರಿಗೆ 80 ಲಕ್ಷದಿಂದ ಒಂದು ಕೋಟಿ. ಹೊಸಪೇಟೆ, ಬಳ್ಳಾರಿ, ರಾಮನ್‌ಮಲೈ ಬ್ಲಾಕ್, ಸ್ವಾಮಿ ಮಲೈ ಬ್ಲಾಕ್‌ಗಳಿಗೆ ಫಾರೆಸ್ಟರುಗಳಾಗಿ ಬರುವವರಿಗೆ ಹದಿನೈದರಿಂದ ಇಪ್ಪತ್ತು ಲಕ್ಷ. ವರ್ಗಾವಣೆ ಬಯಸುವವರು ಈ ಮೊತ್ತದ ಹಣವನ್ನು ರೆಡಿಯಾಗಿಟ್ಟುಕೊಂಡೇ ಮುಂದುವರಿಯಬೇಕು. ಈ ಹಣ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಕೊಟ್ಟರೆ ಗೋತಾ. ಯಾವುದೇ ಇಲಾಖೆಯ ಹಿರಿಯ ಅಧಿಕಾರಿಗಳು ವರ್ಗಾವಣೆಯ ವಿಷಯದಲ್ಲಿ ಹಲ್ಲುಕಿತ್ತ ಹಾವುಗಳು, ವರ್ಗಾವಣೆಗೆ ಸಂಬಂಧಿಸಿದ ಏನೇ ವ್ಯವಹಾರವಿದ್ದರೂ ನೇರಾನೇರ ಸಚಿವರನ್ನೇ ಭೇಟಿ ಮಾಡಿ ವ್ಯವಹಾರ ಕುದುರಿಸಿಕೊಂಡು ಬರಬೇಕು. ಆ ನಂತರವೇ ವರ್ಗಾವಣೆಯ ಆದೇಶದ ಫ್ಯಾಕ್ಸ್ ಮೆಸೇಜು ಬಂದು ತಲುಪುತ್ತದೆಯಂತೆ.

ಈಗಿನ ಲೇಟೆಸ್ಟ್ ಬೆಳವಣಿಗೆಯೆಂದರೆ ಸಚಿವರೊಂದಿಗೆ ಖುದ್ದಾಗಿ ಕುದುರಿಸಿಕೊಂಡ ಡೀಲುಗಳೂ ವರ್ಕ್‌ಔಟ್ ಆಗುವುದಿಲ್ಲ ಎಂಬುದು. ಇದು ವರ್ಗಾವಣೆಯ ಉಮ್ಮೇದಿಯಲ್ಲಿರುವವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದೆ. ಇದಕ್ಕೊಂದು ಉದಾಹರಣೆಯೆಂದರೆ ಬಳ್ಳಾರಿಯ ಅರಣ್ಯ ಸಂಶೋಧನಾ ವಿಭಾಗದಲ್ಲಿದ್ದ ಶಾಂತಕುಮಾರ್ ಎಂಬಾತ ಹೊಸಪೇಟೆಯ ಸೆಕ್ಷನ್‌ನಲ್ಲಿದ್ದ ನಾಗಿರೆಡ್ಡಿ ಎಂಬಾತನ ಜಾಗಕ್ಕೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳಲು ಬಯಸಿ ಖುದ್ದು ಸಚಿವರನ್ನೇ ಭೇಟಿ ಮಾಡಿ ಲಕ್ಷಾಂತರ ರೂಪಾಯಿ ಮುಡುಪು ಸಲ್ಲಿಸಿ ಬಂದಿದ್ದನಂತೆ. ಈ ಹಣ ಜೋಡಿಸಲು ಕಷ್ಟವಾಗಿ ತನ್ನ ಮನೆಯನ್ನೂ ಒತ್ತೆ ಇಟ್ಟಿದ್ದನಂತೆ. ಹೊಸಪೇಟೆಗೆ ವರ್ಗಾವಣೆಯ ಆದೇಶವೂ ಹೊರಟಿತ್ತಂತೆ. ಏನು ಮಾಡಿದರೇನು? ಆತನ ನಸೀಬು ಕೈಕೊಟ್ಟಿತ್ತು. ಹೊಸಪೇಟೆಯಲ್ಲಿದ್ದ ನಾಗಿರೆಡ್ಡಿ ಶಾಸಕ ಸೂರ್ಯನಾರಾಯಣರೆಡ್ಡಿ ಬಳಿಗೆ ಹೋಗಿ ಹೇಗಾದರೂ ಮಾಡಿ ನನ್ನ ಟ್ರಾನ್ಸ್‌ಫರ್ ರದ್ದು ಮಾಡಿಸಿ ಎಂದು ದುಂಬಾಲು ಬಿದ್ದನಂತೆ. ಸೂರ್ಯನಾರಾಯಣ ರೆಡ್ಡಿ ತಮ್ಮ ಕುಲಬಾಂಧವನ ಮೊರೆಗೆ ಓಗೊಟ್ಟು ಮಂತ್ರಿ ಚೆನ್ನಿಗಪ್ಪನ ಜೊತೆ ನೇರ ಮಾತನಾಡಿ ಶಾಂತಕುಮಾರ್ ಹೊಸಪೇಟೆಗೆ ಬರುವ ಪ್ರಯತ್ನಕ್ಕೆ ತಡೆಹಿಡಿದರೆನ್ನಲಾಗಿದೆ. ಅಲ್ಲಿಗೆ ಶಾಂತಕುಮಾರ್ ಮಟಾಷ್! ಬರೋಬ್ಬರಿ ಒಂಭತ್ತು ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿರುವ ಶಾಂತಕುಮಾರ್‌ಗೀಗ ವಿಷ ಕುಡಿಯುವ ಪರಿಸ್ಥಿತಿ ಬಂದಿದೆ.

ಅತ್ತ ಕೊಟ್ಟ ಹಣವೂ ವಾಪಸ್ಸು ಬರುವುದಿಲ್ಲ, ಖಾಲಿ ಇರುವ ಉದ್ಯೋಗದಲ್ಲಿ ಹೇಳಿಕೊಳ್ಳುವ ಆಮದನಿಯೂ ಇಲ್ಲ.

ಈ ಪ್ರಕರಣ ವರ್ಗಾವಣೆಯ ಪ್ರಯತ್ನ ... ದುಂದಾಗಿರುವ ಅಧಿಕಾರಿಗಳ, ನೌಕರರ ... ನಡುಗಿಸುತ್ತಿದೆ. ಆದರೂ ಭಂಡತನಕ್ಕೆ ಬಿದ್ದಿರುವ ಅಧಿಕಾರಿಗಳು ಸೂಟ್‌ಕೇಸ್ ಹಿಡಿದು ಮಂತ್ರಿ ಚೆನ್ನಿಗ... ಮನೆಗೆ ಎಡತಾಕುತ್ತಿದ್ದಾರಂತೆ. ಈಗ ಅಸಲಿ ಪ್ರಶ್ನೆಯೆಂ... ಮಂತ್ರಿ ಚೆನ್ನಿಗಪ್ಪ ಹೋದ ಕಡೆಗೆಲ್ಲಾ ವೀರಾವೇ... ಹೇಳಿಕೆಗಳನ್ನು ನೀಡುತ್ತಾ ಹೀಗೆ ವರ್ಗಾವ... ದಂಧೆಗಿಳಿದರೆ ಇಲಾಖೆಯ ಅಧಿಕಾರಿಗಳು, ನೌಕರರಿ... ಪ್ರಾಮಾಣಿಕತನವನ್ನು ನಿರೀಕ್ಷಿಸಲಾದೀತೆ?

ಲಕ್ಷಗಟ್ಟಲೆ ಸುರಿದು ವರ್ಗಾವಣೆ ಮಾಡಿಸಿಕೊ... ಅಧಿಕಾರಿಗಳು ಇಲಾಖೆಯ ನೌಕರರನ್ನು ಗೋ... ಹೊಯ್ದುಕೊಂಡು ಕಲೆಕ್ಷನ್ ದಂಧೆಗೆ ಅಟ್ಟುತ್ತಾರೆ. ಅ... ಎಲ್ಲಿ? ಹೇಗೆ? ಯಾರಿಂದ? ಎಂಬುದೆಲ್ಲಾ ಅಪ್ರಸ್ತು... ಹೇಗಾದರೂ ತಂದು ಸುರಿಯಿರಿ ಎಂದು ದುಂಬಾ... ಬೀಳುತ್ತಾರೆ. ಟ್ರಾನ್ಸ್‌ಫರ್ ದಂಧೆಯ ಎಫೆಕ್ಟ್ ಅಡಿಯಿ... ಮುದಿಯರೆಗೂ ಇಲಾಖೆಯ ಅಧಿಕಾರಿಗಳ... ಭ್ರಷ್ಟಗೊಳಿಸುವ ಪರಿಯಿದು.

ಠಿಕಾಣಿ ಬದಲಾಯಿಸಿಲ್ಲ

ಕೃಷ್ಣ ಲೀಲೆಗಳ ಖ್ಯಾತಿಯ ಸ್ಕ್ವಾಡ್ ಡಿಎಫ್... ರಾಜಶೇಖರನ್ ಈಗ ವರ್ಗಾವಣೆಯಾಗಿ ಬಂದಿ... ಫಾರೆಸ್ಟ್ ಕನ್ಸರ್ವೇಟರ್ ಜಯರಾಂ ಜೊತೆ ಸ್ನೇ... ಬೆಳೆಸಿ ಮತ್ತೊಂದು ಕಡೆ ಅರಣ್ಯ ಮಂತ್ರಿ ಚೆನ್ನಿಗಪ್ಪ... ಛೇಲಾಗಿರಿ ಮಾಡಿಕೊಂಡು ಕೋರ್ಟ್ ಸ್ಟೇ ನೆಪ... ಇಲ್ಲೇ ತಳವೂರಿದ್ದಾನೆ. ಸದ್ಯಕ್ಕೆ ಈತ ಠಿಕಾಣಿ ಬದಲಾ... ಸುವ ಲಕ್ಷಣಗಳಿಲ್ಲ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯ... ಎಫ್.ಡಿ.ಎ. ಈರಣ್ಣ ಮ್ಯಾನೇಜರ್ ರಾಜೇಂದ್ರ ಗೌ... ದಿನಗೂಲಿ ನೌಕರ ಹತಾವುಲ್ಲಾ ಸಂಬಂಧಪ... ನೌಕರರನ್ನೆಲ್ಲಾ ಬದಿಗೆ ಸರಿಸಿ ನಕಲಿ ಪರ್ಮಿಟ್ಟು... ದಂಧೆಗೆ ಇಳಿದು ಬಿಟ್ಟಿದ್ದಾರೆ. ಮೇಲಾಧಿಕಾರಿಗ... ಛೇಲಾಗಿರಿ ಮಾಡಿಕೊಂಡೇ ಮಾನ್ಯತೆ ಪಡೆ... ಕೊಳ್ಳುತ್ತಿರುವ ಈ ದಂಧೆಕೋರರು ಹಗಲು ದರೋಡೆ... ಗಿಳಿದುಬಿಟ್ಟಿದ್ದಾರೆ. ಈ ವಸೂಲಿ ಗಿರಾಕಿಗಳಿಗಿ... ಮರ್ಯಾದೆ ಇಲಾಖೆಯ ಅಧಿಕಾರಿಗಳಿಗೂ ... ಅಕ್ರಮಗಳೇ ಪ್ರಧಾನವಾಗಿರುವ ಬಳ್ಳಾರಿಯ ಅ... ಇಲಾಖೆಯಲ್ಲಿ ಇಂತಹ ವಿದ್ಯಮಾನಗಳು ಜರುಗುತ್ತ... ಇರುತ್ತವೆ. ಬೇಲಿಯೇ ಎದ್ದು ಹೊಲ ಮೇಯ... ಕಾಯುವವರಾರು?

ಕಾಡು ರಕ್ಷಿಸಬೇಕಾದ ಮಂತ್ರಿಯೇ ಕಾಡುಗಳ್ಳನಾದ... ಏನು ಮಾಡುವುದು?

-ಮೇ.ನಾ. ಅಹೋಬಳಪ...

ಸಚಿವ ಈಶ್ವರಪ... ನಗರಸಭೆಯಲ್ಲೂ... ನುಂಗ್ತಾನಪ್ಪ...

ಶಿವಮೊಗ್ಗ ಜಿಲ್ಲೆಯಿಂದ ಮೂವರು ಚಡ್ಡಿ ಸಚಿವರು! ಯಡ್ಡಿ ಶಂಕರಮೂರ್ತಿ ಮಿನಿಸ್ಟರ್ ಸ್ಟೈಲಲ್ಲೇ 'ವ್ಯವಹಾರ' ಮಗ್ನರಾಗಿದ್ದರೆ ಜಲಸಂಪನ್ಮೂಲ ಸಚಿವ ಕೆ.ಎಸ್. ಈಶ್ವರಪ್ಪ ಮಾತ್ರ ನೀರಾವರಿ ಕಾಮಗಾರಿಗಳ ಪರ್ಸೆಂಟೇಜ್‌ಗೆ ತೃಪ್ತನಾಗದೇ ಶಿವಮೊಗ್ಗ ನಗರಸಭೆಯ ತುಂಡ್‌ತುಂಡು ಕೆಲಸಗಳಲ್ಲೂ ಎರಡೂ ಕೈಗಳಿಂದ ಬಾಚುತ್ತಲೇ ಇದ್ದಾನೆ. ಯಡ್ಡಿ ಇಲ್ಲಿ ಜಿಲ್ಲಾ ಉಸ್ತುವಾರಿ ಸಚಿವನಿರಬಹುದು. ಆದರೆ ಶಿಕಾರಿಪುರಕ್ಕೆ ಬರುವಂತಿಲ್ಲ, ಬಂದರೆ 20 ದಿನಗಳಿಂದ ಧರಣಿ ನಡೆಸಿರುವ ಬಗರ್‌ಹುಕುಂ ಸಾಗುವಳಿದಾರರು ಯಡ್ಡಿಯ ಚಡ್ಡಿಯನ್ನು ಬಿಚ್ಚುತ್ತಾರೇನೋ? So, ಮಿ. ಈಶ್ವರಪ್ಪನೇ ಈಗ ಶಿವಮೊಗ್ಗಕ್ಕೆ ಸ್ವಾಹಾ ಸರದಾರ..... ಶಿವಮೊಗ್ಗದಲ್ಲಿ ಈಗ ನಡೆಯುತ್ತಿರುವ ನೀರಾವರಿ ಕಾಮಗಾರಿಗಳ 'ಫಲ'ವನ್ನು ಈಶ್ವರಪ್ಪ ಹೇಗೆ ಬಿಟ್ಟಾನು.... ಇಡೀ ರಾಜ್ಯದ ಕಾಮಗಾರಿಗಳ 'ಸಂಪನ್ಮೂಲ' ಸಾಕಾಗದೇ ಇರುವಾಗ!

ಪೀಸ್ ಪೀಸ್ ಕೆಲಸ-ಅಲ್ಲೂ ಪಾಯಸ!

ನಗರದ ಪ್ರಮುಖ ರಸ್ತೆಗಳ ಅಭಿವೃದ್ಧಿಗಾಗಿ ನಗರಸಭೆಗೆ ಕೆನರಾಬ್ಯಾಂಕ್ 5 ಕೋಟಿ ರೂ. ಸಾಲ ನೀಡಿದೆ. ಬೆಂಗಳೂರಿಗೆ ಸಚಿವ ಈಶ್ವರಪ್ಪನನ್ನು ನೋಡಲು ಬಂದಿದ್ದ ಪುಣ್ಯಾತ್ಮನೊಬ್ಬ ಈ ವಿಷಯ ಈಶ್ವರಪ್ಪನಿಗೆ ಹೇಳಿದ್ದ ತಡ, ದುಂಯ್ಯನೆ 150 ಕಿ.ಮೀ ಸ್ಪೀಡಿನಲ್ಲಿ ಶಿವಮೊಗ್ಗಕ್ಕೆ ಬಂದೇ ಬಿಟ್ಟರು ಈಶ್ವರಪ್ಪ, "ಈ ರಸ್ತೆ ಕಾಮಗಾರಿ ನಾನೇ ಉದ್ಘಾಟಿಸುವೆ"ಎಂದು ಹಠ ಮಾಡಿ ಓಡಿಬಂದು, ಇಲ್ಲೂ ಪರ್ಸೆಂಟೇಜ್‌ಗೆ ನಾಲಿಗೆ ಚಾಚಿದ್ದು ಶಿವಮೊಗ್ಗದ ಜನತೆಗೆ ವಾಕರಿಕೆ ಹುಟ್ಟಿಸಿತ್ತು, ಸಿಟ್ಟಿಗೆದ್ದವನೊಬ್ಬ ಈಶ್ವರಪ್ಪನ 10 ಗ್ರಾಂ ತೂಕದ ಚಿನ್ನದ ಉಂಗುರವನ್ನೇ ಎಗರಿಸಿ ಈಶ್ವರಪ್ಪನ ತಿಪ್ಪಾಟಕ್ಕೆ ತನ್ನದೇ ಆದ ಪ್ರತಿಭಟನೆ ಸಲ್ಲಿಸಿಬಿಟ್ಟಿದ್ದ, ಪರ್ಸೆಂಟೇಜ್‌ಗೆ ಬಾಧೆ ಇಲ್ಲದ್ದರಿಂದ ಈಶ್ವರಿಗೂ ಬೇಜಾರಾಗಿರಲಿಕ್ಕಿಲ್ಲ...

ದುರ್ಗಿಗುಡಿಯಿಂದ ಆರಂಭವಾದ ಕಾಮಗಾರಿಗಳಲ್ಲಿ 22 ಎಂ.ಎಂ. ಡಾಂಬರೀಕರಣ ನಡೆದಿದೆ ಎಂದು ತಿಳಿದ ಕೂಡಲೇ, ಕೆಲಸಗೇಡಿ ಸಚಿವ ಅಧಿಕಾರಿಗಳ ಸಮೇತ ಬಂದು ಪರಿಶೀಲನೆ ಮಾಡಿಹೋದರು. ರೋಡ್ ಕಂಟ್ರೋಲರ್ ಅಧಿಕಾರಿಗಳಿಗೆ ತನಿಖೆ ಮಾಡಲು ಹೇಳಿ ಹೋದರು. ಅಂತೂ ಈ ಕಾಮಗಾರಿ ಕಳಪೆ ಎಂಬುದನ್ನು ತೋರಿಸಬೇಕಾಗಿತ್ತಷ್ಟೇ. ಏನಪ್ಪಾ ಈ ಈಶ್ವರಿ ಅದ್ಯಾವಾಗ ದಕ್ಷರಾದರು ಎನ್ನಬೇಡಿ. ಈ ಮೊದಲು ಈ ಕಾಮಗಾರಿಯಲ್ಲಿ ಈಶ್ವರಿಗೆ ಮೂರು ಪರ್ಸೆಂಟೇಜ್ ನಿಗದಿಗೊಳಿಸಿ, ತಾನು ಐದು ಪರ್ಸೆಂಟೇಜ್ ಫಿಕ್ಸ್ ಮಾಡಿಕೊಂಡಿದ್ದ ನಗರಸಭೆಯ ಅಧ್ಯಕ್ಷ! ಕಾಂಗ್ರೆಸ್ಸಿಗನೊಬ್ಬನಿಂದ ಈ ವಿಷಯ ತಿಳಿದ ಈಶ್ವರಪ್ಪ ಪರಿಶೀಲನೆ ನಾಟಕವಾಡಿ ತಮ್ಮ ಪಾಲನ್ನು 12%ಗೆ ಏರಿಸಿಕೊಂಡನಷ್ಟೇ!

ಧರ್ಮಪ್ಪನ ಅಧರ್ಮ

ಈಶ್ವರಪ್ಪ ಸಚಿವರಾದ ಮೇಲೂ ನಗರಸಭೆ, ಜಿಲ್ಲಾ ಶಿಕ್ಷಣ ಇಲಾಖೆಗಳಿಂದಲೂ ಹೆಚ್ಚೆಚ್ಚು 'ದಕ್ಷಿಣೆ' ಬಯಸಲು ಆತನ ಇಬ್ಬರು ಭಂಟರೇ ಕಾರಣ! ಶಿವಮೊಗ್ಗ ನಗರಸಭೆಯ ಆಯುಕ್ತ ಧರ್ಮಪ್ಪನ ಅಧರ್ಮ ಕಾರ್ಯಗಳಿಗೀಗ ಸುಗ್ಗಿಯ ಕಾಲ! ಕಾರಣಃ ಈತ ಈಶ್ವರಪ್ಪನ ಜಾತಿ ಬಾಂಧವ!! ನಗರಸಭೆಯ ಕಾಮಗಾರಿಗಳ ಪರ್ಸೆಂಟೇಜ್ ಕುದುರಿಸುವವನೇ ಈ ಧರ್ಮಪ್ಪ...


ಶಿಕ್ಷಣ ಇಲಾಖೆಯ ಕಾಮಗಾರಿ, ಪೀಠೋಪಕರಣ ಖರೀದಿ ಇತ್ಯಾದಿ ಕೆಲಸಗಳಲ್ಲಿ ಉಪ ನಿರ್ದೇಶಕ ಎಸ್.ಎಲ್. ಚೌಹಾಣ್ ಮೂಲಕ 'ಅಕ್ಷರ ಭಿಕ್ಷೆ' ಎತ್ತಿಯೇ ಕಾರು ಹತ್ತುತ್ತಾನೆ ಈಶ್ವರಪ್ಪ,

ನಗರಸಭೆಯ ಕಾಮಗಾರಿಯಿಂದಲೇ ಈ ಸೋಗಲಾಡಿ ಸಚಿವನಿಗೆ 12ರಷ್ಟು ಪರ್ಸೆಂಟೇಜ್ ಅಲ್ಲದೇ 'ಸ್ಕಾರ್ಪಿಯೋ' ವಾಹನ ಕೂಡ ಪ್ರಾಪ್ತಿಯಾಗಿರುವುದು ಶಿವಮೊಗ್ಗದಾದ್ಯಂತ ಚರ್ಚೆಯ ವಸ್ತುವಾಗಿದೆ. ಈ ಮೊದಲು ನಗರಸಭೆಯ ಕಾಮಗಾರಿಗಳನ್ನು ಈಶ್ವರಪ್ಪ ತನ್ನ ಹತ್ತಿರದ ಭಂಟ ಬಿಜೆಪಿ ಸ್ಲಮ್ ಮೋರ್ಚಾದ ಎನ್. ಮಂಜುನಾಥ ಎಂಬ ಕಳ್ಳ ಗುತ್ತಿಗೆದಾರನಿಗೆ ಕೊಡಿಸಿದ್ದ. ಡಾಂಬರ್, ಜಲ್ಲಿ ರೇಟು ಹೆಚ್ಚಿದ್ದರಿಂದ ತನಗೆ ನಷ್ಟವಾಗುತ್ತದೆ ಎಂದು ಮಂಜುನಾಥ ರಾಗ ಎಳೆದ. ಆಗ ನಗರಸಭೆಯ ಅಧ್ಯಕ್ಷ ರಮೇಶ್ ಹೆಗ್ಡೆ ಈ ಗುತ್ತಿಗೆಯನ್ನು ಕಾಂಗ್ರೆಸ್‌ನ ಎಚ್.ಎಸ್. ಸುಂದ್ರೇಶ್, ಧನಶೇಖರ್, ರವೀಂದ್ರರಿಗೆ ನೀಡಿದ್ದ. ಆಯುಕ್ತ ಧರ್ಮಪ್ಪನೇ ಮುಂದೆ ನಿಂತು ಎಸ್. ಆರ್. ದರಗಳನ್ನು ಹೆಚ್ಚಿಸಿ, ಈಶ್ವರಪ್ಪನ ಅಣ್ಣ, ನಗರಸಭೆ ಸದಸ್ಯ ಗಂಗಾಧರಪ್ಪನನ್ನು ಕೂರಿಸಿಕೊಂಡು ಡೀಲು ಮುಗಿಸಿದ್ದ. ನಗರಸಭೆ ಸದಸ್ಯರಿಗೂ 8ರಷ್ಟು ಪರ್ಸೆಂಟೇಜ್ ಕೊಡಬೇಕೆಂದು ತಕರಾರು ಎದ್ದಿತ್ತು.

ಎಸ್.ಆರ್. ದರ ಹೆಚ್ಚಿದ್ದು ಕೇಳಿದ ಮಂಜುನಾಥ ಮೀಟಿಂಗ್ ನಡೆಯುತ್ತಿದ್ದ ಕಮೀಷನರ್ ಚೇಂಬರ್‌ಗೆ ಬಂದು ತಾನೇ ಕಾಮಗಾರಿ ಮಾಡುವುದಾಗಿ ಬಾಯಿ ಬಡಕೊಂಡ. ಆದರೆ ಆಗಲೇ ರಾತ್ರಿ 7.30 ಆಗಿದ್ದರಿಂದ ಮಂಜುನಾಥ ನಿರಾಶೆಗೊಂಡ. ಈಗ ಸುಂದ್ರೇಶ್, ಧನಶೇಖರ್, ರವೀಂದ್ರರು ಕಾಮಗಾರಿ ಮಾಡುತ್ತಿದ್ದಾರೆ... ಆದರೆ ಶೇ.12ರಷ್ಟು ಕಮಿಷನ್ ನೀಡುತ್ತಿರುವ ಇವರಿಂದ ಶಿವಮೊಗ್ಗದ ರಸ್ತೆಗಳು ಸುಧಾರಣೆಗೊಳ್ಳುವುದು ಕನಸಿನ ಮಾತು.

ಸಚಿವನೊಬ್ಬ ನಗರಸಭೆಯ
ಕಾಮಗಾರಿಗಳಲ್ಲಿ ಕಮಿಷನ್
ಪಾಲಿಗೆ ನಾಲಿಗೆ ಚಾಚಿದರೆ
ನಗರಸಭೆ ಉಳಿದೀತಾ?
ನಗರಸಭೆ ಹಾಳಾಗಲಿ,
ಶಿವಮೊಗ್ಗ ನಗರದ ಅಭಿವೃದ್ಧಿ
ಹಳ್ಳ ಹಿಡಿಯುತ್ತಿರುವುದು
ಕಳವಳದ ಸಂಗತಿಯಲ್ಲವೆ?

-ವರದಿಗಾರ




ದೇವಾ ಬರೀ ಹೂವೊಂದು ಅಳು ದನಿಯಲ್ಲಿ ಉಸುರಿದ್ದ -ರವೀಂದ್ರನಾಥ ಠಾಗೋರ್

ಕೊಪ್ಪಳ ಡಿವಿಜನ್: ಬಸ್ಸು ನುಂಗುವ ಭಸ್ಸಾಸುರರು!

ಇವನೊಬ್ಬನ ಹೆಸರು ಬಾಸುರಾವ್! ಈ ಬದ್ಮಾಷ್‌ನಿಗೆ ಹುಟ್ಟುತ್ತಲೇ ಬಾಸು'ರಾವ್ ಎಂದು ಹೆಸರಿಟ್ಟಿದ್ದೇ ತಪ್ಪಾಗಿಬಿಟ್ಟಿತೇನೋ? ಈ ಕಿಲಾಡಿ ಕೊಪ್ಪಳದ ಬಸ್ಸುಗಳನ್ನೆಲ್ಲ ತನ್ನ ಮನೆ ಆಸ್ತಿಯಂತೆ ಪರಿಗಣಿಸುತ್ತಾ ಬಕಾಸುರ ಬಸ್'ರಾವ್ ಆಗಿಬಿಟ್ಟಿದ್ದಾನೆ.

ಇವನ ನುಂಗಾಟಕ್ಕೆ ಸಾಥಿ ಆಗಿ ಇನ್ನಿಬ್ಬರು ಬಸ್‌ಗಳ್ಳರಿದ್ದಾರೆ ಇಲ್ಲಿ-ಒಬ್ಬ ಡಿ.ಸಿ. ಪ್ರಭು.... ಇನ್ನೋರ್ವ ಕ್ಲರ್ಕ್ ರಾಮನಗೌಡ!

ವಿಭಾಗೀಯ ಅಧೀಕ್ಷಕ ಬಾಸುರಾವ್, ಡಿ.ಸಿ. ಪ್ರಭು, ಕ್ಲರ್ಕ್ ರಾಮನಗೌಡ ಈ ಮೂವರು ಸೇರಿ ಇಡೀ ಕೊಪ್ಪಳ ಬಸ್ ಸ್ಟ್ಯಾಂಡನ್ನೇ ಹರಾಜಿಗಿಟ್ಟು ಬಿಟ್ಟಿದ್ದಾರೆ. ಬಸ್‌ಸ್ಟ್ಯಾಂಡ್ ಎದುರು ನಿಲ್ಲುವ ಖಾಸಗಿ ಬಸ್‌ಗಳಿಗೆ ಗಿರಾಕಿಗಳನ್ನು ಪರೋಕ್ಷವಾಗಿ ಒದಗಿಸುತ್ತಿರುವುದು ಬಾಸುರಾವ್ ತಂಡವೇ... ಖಾಸಗಿ ಬಸ್‌ಗಳು ಓಡುವ ವೇಳೆಗೆ ಸರ್ಕಾರಿ ಬಸ್‌ಗಳನ್ನು ಬಿಡದೇ ಖಾಸಗಿಯವರಿಗೆ ಕೋ-ಆಪರೇಟ್ ಮಾಡುತ್ತದೆ ಬಾಸುರಾವ್ ಟೀಮ್!



ಪ್ರತಿ ವರ್ಷ ಮಳೆಗಾಲದಲ್ಲಿ ಕೊಪ್ಪಳ ಬಸ್‌ಸ್ಟ್ಯಾಂಡ್ ಕೆರೆ ಆಗಿಬಿಡುತ್ತದೆ. ಭ್ರಷ್ಟ ಕೃಷಿ ಅಧಿಕಾರಿಗಳು ಜಲಾನಯನ ಅಭಿವೃದ್ಧಿ ಹೆಸರಲ್ಲಿ ಕೊಪ್ಪಳ ಬಸ್‌ಸ್ಟ್ಯಾಂಡನ್ನು ತೋರಿಸಿ ಹಣ ನುಂಗುವುದೊಂದು ಬಾಕಿ ಇರುತ್ತದೆ. ಹಾಗೆಯೇ ಕೆರೆಯೆಂತಾದ ಬಸ್‌ನಿಲ್ದಾಣದ ರಿಪೇರಿಗೆಂದು ಬಾಸುರಾವ್, ಪ್ರಭು, ರಾಮನಗೌಡ ಎಲ್ಲರೂ ಸರ್ಕಾರದ 'ಸಖತ್ ನೀರು' ಕುಡಿಯುತ್ತಾರೆ. ಎಲ್ಲ ಕಡೆ ಖಾಸಗೀಕರಣದ ಭೂತ ಹಾರಾಡುತ್ತಿದೆಯಲ್ಲವೇ? ವಾಯುವ್ಯ ಸಾರಿಗೆಯ ಕೇಂದ್ರಬಿಂದು ಹುಬ್ಬಳ್ಳಿಯಲ್ಲಿ ಖಾಸಗಿ ಬಸ್‌ಗಳ ಮಾಫಿಯಾದ ಕುರಿತು ಈ ಹಿಂದೆ 'ಲಂಕೇಶ್' ಬರೆದಿತ್ತು. ಇಲ್ಲೂ ಖಾಸಗೀಕರಣದ ಹೆಸರಲ್ಲಿ ಬಾಸುರಾವ್ 40 ಕ್ಕೂ ಹೆಚ್ಚು ಬಸ್‌ಗಳನ್ನು ಬಿಟ್ಟಿದ್ದಾನೆ. So ಬಾಸುರಾವ್ ಈಗ 'ಬಸ್'ರಾವ್..... ನಲ್ವತ್ತು ಬಸ್‌ಗಳ ಚಾಲೀಸ್ ಚೋರ್!!

ಹಳದಿ ಬಣ್ಣದ ಖಾಸಗಿ ಬಸ್‌ಗಳು ಸರ್ಕಾರಕ್ಕೆ ಟೋಪಿ ಹಾಕಲೆಂದೇ ಓಡುತ್ತಿವೆ. 300 ಕಿ.ಮಿ.ಗೂ ಹೆಚ್ಚು ದೂರದ ಪ್ರಯಾಣಕ್ಕೆ ಇಬ್ಬರು ಡ್ರೈವರ್ ಬದಲು ಒಬ್ಬನನ್ನೇ ಕಳಿಸುವ ಮೂಲಕ ದುಡ್ಡು ನುಂಗುವ ಬಾಸುರಾವ್ ಗ್ಯಾಂಗ್ ಜನರ ಪ್ರಾಣಕ್ಕೂ ಕಂಟಕವಾಗಿಬಿಟ್ಟಿದೆ! ಖಾಸಗಿಯವರ ಹಳದಿ ಬಸ್‌ಗಳು ತುಂಬಿ ತುಳುಕಬೇಕು... ಅವುಗಳ ಹಿಂದೆ ಸರ್ಕಾರದ ಖಾಲಿ ಬಸ್‌ಗಳು ಓಡಬೇಕು...ಇದು ಬಾಸುರಾವ್ & ಟೀಮ್‌ನ ಅಘೋಷಿತ ನಿಯಮ.

ಬಸ್‌ಸ್ಟ್ಯಾಂಡ್‌ನಿಂದ 500 ಮೀ. ವ್ಯಾಪ್ತಿಯಲ್ಲಿ ಖಾಸಗಿ ಬಸ್‌ಗಳು ನಿಲ್ಲಬಾರದು ಎಂಬ ಸುಪ್ರೀಂಕೋರ್ಟ್ ಆದೇಶಕ್ಕೆ ಥೂ ಎಂದು ಉಗುಳುತ್ತಿದೆ ಬಾಸುರಾವ್ ಗ್ಯಾಂಗ್. ಏಕೆಂದರೆ ಇಲ್ಲಿ ಖಾಸಗಿ ಬಸ್‌ಗಳೆಲ್ಲ ಹೆಚ್ಚೂಕಡಿಮೆ ಬಸ್‌ಸ್ಟ್ಯಾಂಡ್ ಒಳಗೇ ಇರುತ್ತವೆ. ಹೊಸಪೇಟೆಯ ಎಸ್.ವಿ.ಕೆ. ಬಸ್‌ಗಳಂತಹ ಖಾಸಗಿ ವಾಹನಗಳೊಂದಿಗೆ ಆಟ ಆಡುತ್ತಲೇ ಇರುವ ಡಿ.ಸಿ. ಪ್ರಭುದಾಸ್‌ನ ಜೇಬು ಸದಾ ಭರ್ತಿಯಾಗುತ್ತಲೇ ಇದೆ.

ಯೂಸ್‌ಲೆಸ್ ರಾಯರೆಡ್ಡಿಯ ಯಲಬುರ್ಗಿಗೆ ಮುಂಜಾನೆ 7 ಗಂಟೆಗೆ ಒಂದು ಬಸ್ ಇದೆ... ಅದು ಬಿಟ್ರೆ 10 ಗಂಟೆಗೇ! ಮಧ್ಯದಲ್ಲಿ ಖಾಸಗಿ ಬಸ್‌ಗಳ ಹಾವಳಿ... ಇದು ಫಿಕ್ಸಿಂಗ್ ಅಲ್ಲದೇ ಇನ್ನೇನು?

ಡಿವಿಜನ್ ಕಂಟ್ರೋಲರ್ ಪ್ರಭುದಾಸ್, ಟೆಂಡರ್ ಸೆಕ್ಷನ್‌ನ ರಾಮನಗೌಡ ಸೇರಿ ಜಿಲ್ಲೆಯ ಸಾರಿಗೆ ಟೆಂಡರ್‌ಗಳಲ್ಲಿ ಮಾಡುತ್ತಿರುವ ಅವ್ಯವಹಾರಗಳಿಂದ ಇಲಾಖೆಗೆ ಲಕ್ಷಾನುಗಟ್ಟಲೆ ಲಾಸು ಆಗುತ್ತಿದೆ. ಬಸ್‌ಸ್ಟ್ಯಾಂಡ್‌ನಲ್ಲಿನ ಪಾನ್‌ಶಾಪ್‌ಗೆ 13 ರಿಂದ 16 ಸಾವಿರದವರೆಗೂ ಟೆಂಡರ್ ಸಿಕ್ಕುಬಿಟ್ಟಿದೆ.

ಮಿಲ್ಕ್ ಪಾರ್ಲರ್‌ಗೆ 13 ಸಾವಿರ ಕೊಡಲು ಜನ ರೆಡಿ ಇದ್ದರೂ ಈ ವರ್ಷ ಏಳು ಸಾವಿರಕ್ಕೇ ನೀಡಿ ಬಿಟ್ಟಿದ್ದಾರೆ. 18 ಸಾವಿರ ನೀಡಬೇಕಾದ ಕ್ಯಾಂಟೀನಿನವನು 12 ಸಾವಿರ ನೀಡಿ ನಿತ್ಯ ಲೂಟಿಗಿಳಿದಿದ್ದಾನೆ.

ಮೊದಲು ಕಂಡಕ್ಟರ್‌ನಾಗಿ ಮೇಯ್ದಿದ್ದ ರಾಮನಗೌಡ ಇವತ್ತು ಅನುಕಂಪದ ಆಧಾರದ ಮೇಲೆ ಬಡ್ತಿ ಹೊಂದಿ ತನ್ನ ಲಫಡಾ ಕೆಲಸ ಮುಂದುವರೆಸುತ್ತಲೇ ಇದ್ದಾನೆ. ಇಲಾಖೆಯ ಚೆಕ್ಕಿಂಗ್ ಆಫೀಸರ್‌ನ ಮಗನೊಬ್ಬ ಫೈನಾನ್ಸ್ ದಂಧೆ ಮಾಡುತ್ತಿದ್ದು, ಹತ್ತಿಪ್ಪತ್ತು ಜನರಿಗೆ ಬಡ್ಡಿ ದುಡ್ಡು ಕೊಟ್ಟು ಬಸ್‌ಸ್ಟ್ಯಾಂಡ್‌ನಲ್ಲಿ ಹೂ, ಹಣ್ಣು ಮಾರಲು ಅವಕಾಶ ನೀಡಿದ್ದಾನೆ.

ಬಾಸುರಾವ್, ಪ್ರಭುದಾಸ್, ರಾಮನಗೌಡರಿಂದ 'ಲಾಸ್'ನಲ್ಲಿರುವ ಕೊಪ್ಪಳ ಡಿವಿಜನ್ 'ಖಲಾಸ್' ಆಗುವ ಎಲ್ಲ ಲಕ್ಷಣಗಳೂ ಇವೆ. ಏಕೆಂದರೆ ಸಾರಿಗೆ ಇಲಾಖೆ ಉಸ್ತುವಾರಿಗೆ ಚೆಲುವ ಎಂಬ ಗಡವ ಇದ್ದಾನಲ್ಲ?

-ವರದಿಗಾರ

ಹುಬ್ಬಳ್ಳಿ : ಜಿಗುಟು ಜನಿವಾರ ಜರ್ನಲಿಸ್ಟ್‌ಗಳು

ಹುಬ್ಬಳ್ಳಿ-ಧಾರವಾಡದಲ್ಲಿ ಮೊದಲಿಂದಲೂ ಈ ಜನಿವಾರಿ ಜರ್ನಲಿಸ್ಟ್‌ಗಳ ಕಾಟ ಇದ್ದದ್ದೇ. ಪುರಾತನ ಪಳೆಯುಳಿಕೆಯಂತಿರುವ 'ಸಂಯುಕ್ತ ಕರ್ನಾಟಕ'ವಂತೂ ಎಂದಿಗೂ ಬ್ರಾಹ್ಮಣರ ಪಹರೆಯೇ. ಅದಕ್ಕೆ ದಿ. ಕೆ. ಶಾಮರಾಯರ 'ಕೊಡುಗೆ' ಅಪಾರವಾದದ್ದು. 'ಸಂ.ಕ'ಗೆ ಪೈಪೋಟಿಯಂತೆ ಎದ್ದು ನಿಂತ 'ವಿಜಯ ಕರ್ನಾಟಕ' ಮೊದಮೊದಲಿಗೆ ಲಿಂಗವಂತರ ಪೇಪರ್ ಎನ್ನಿಸಿದ್ದರೂ, ಈಗದು ಬ್ರಾಹ್ಮಣ ಪತ್ರಕರ್ತರ ಕೈಯಲ್ಲೇ ಇರುವುದು 'ಪುಟ್ಟ' ಆನಂದ ಸಂಕೇಶ್ವರ್‌ಗೂ ಗೊತ್ತು!

ಜಿಲ್ಲಾ ಪತ್ರಕರ್ತರ ಸಂಘದ ಚುನಾವಣೆಯಲ್ಲೂ ಬ್ರಾಹ್ಮಣ ಪ್ರಭೃತಿಗಳು ತಮ್ಮ ಮೂಲಬುದ್ಧಿ ತೋರಿಸಿ ಪತ್ರಕರ್ತರ ಸಂಘವನ್ನೇ ಬ್ರಾಹ್ಮಣೀಕರಣಗೊಳಿಸಿದ್ದು ಈಗ ಅಧ್ವಾನವಾಗಿ ಹೋಗಿದೆ; ಹಾಗೆಯೇ ದಲಿತ, ಅಲ್ಪಸಂಖ್ಯಾತ ಸಮುದಾಯದ ಪತ್ರಕರ್ತರ ಕೆಂಗಣ್ಣಿಗೆ ಗುರಿಯಾಗಿದೆ. ಸುಮಾರು 150 ಜನರ ಸದಸ್ಯತ್ವ ಹೊಂದಿರುವ ಜಿಲ್ಲಾ ಪತ್ರಕರ್ತರ ಸಂಘದ ಚುನಾವಣೆಯನ್ನು ಕೇವಲ 30-40 ಸದಸ್ಯರು ಸೇರಿ ಮುಗಿಸಿ ಹಾಕಿದ್ದಾರೆ. ಚುನಾವಣೆ ನಡೆಸದೇ, ಬೆಂಗಳೂರಿಂದ ಬಂದಿದ್ದ ನಾಯಕರಿಂದ ತಮಗೆ ಬೇಕಾದವರನ್ನು ಪದಾಧಿಕಾರಿಗಳನ್ನಾಗಿ ಮಾಡಿಕೊಂಡಿದ್ದಾರೆ ಬ್ರಾಹ್ಮಣ ಪತ್ರಕರ್ತರು.

ಈ ಅಕ್ರಮ ಜಾತಿಮಯ ಚುನಾವಣೆ(?) ವಿರೋಧಿಸಿ ಅಕ್ಬರ್ ಬೆಳಗಾಂವಕರ್ ಎಂಬ ಪತ್ರಕರ್ತ ಕೋರ್ಟ್ ಮೆಟ್ಟಿಲು ಹತ್ತಿದ್ದಾನೆ. ಇಡೀ ರಾಜ್ಯದ ಯಾವ ಜಿಲ್ಲೆಯ ಪತ್ರಕರ್ತರ ಸಂಘವೂ ಇಷ್ಟು ಹೀನಾಯ ಮಟ್ಟ ಮುಟ್ಟಿಲ್ಲ. 'ಸಂ.ಕ.'ದ ಬ್ರಾಹ್ಮಣ ಪತ್ರಕರ್ತನೊಬ್ಬ ಅನಧಿಕೃತ 'ಗುರು'ವಿನಂತಾಗಿ ಹೋಗಿದ್ದಾನೆ. ಈತನ ಪಿತೂರಿಯಿಂದಲೇ ಮುನವಳ್ಳಿ ಎಂಬ ಮುಸ್ಲಿಂ ವರದಿಗಾರ, ಜಾವೂರ್ ಎಂಬ ಹಿಂದುಳಿದ ವರ್ಗದ ವರದಿಗಾರ 'ಉಷಾ ಕಿರಣ'ದಿಂದ ಕೆಲಸ ಕಳೆದುಕೊಳ್ಳಬೇಕಾಯಿತು. 'ವಿಜಯ ಕರ್ನಾಟಕ'ದ ಬೋಜಗಾರ ಮಹೇಂದ್ರ ಎಂಬ ಪಟ್ಟೇಗಾರ ಕೋಮಿಗೆ ಸೇರಿದ ವರದಿಗಾರ ತನ್ನ ಹೆಸರನ್ನು ಬಿ.ಕೆ. ಮಹೇಂದ್ರ ಎಂದು ಬದಲಾಯಿಸಿದ್ದಾನೆ-ಬ್ರಾಹ್ಮಣ ಪತ್ರಕರ್ತರ ಮಧ್ಯೆ ಬದುಕಬೇಕಲ್ಲ, ಅದಕ್ಕೆ.

ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕದ ಇಬ್ಬರು ಹಿರಿಯ ಬ್ರಾಹ್ಮಣ ಪತ್ರಕರ್ತರ ನೇತೃತ್ವದಲ್ಲಿ ಉಂಡಾಡಿ ಗುಂಡರಂತಿರುವ ಬ್ರಾಹ್ಮಣ ಪತ್ರಕರ್ತರು ಜಿಲ್ಲಾ ಪತ್ರಕರ್ತರ ಸಂಘವನ್ನೇ ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದಾರೆ.

ಅಲ್ಪಸಂಖ್ಯಾತ, ದಲಿತ, ಶೂದ್ರ ಪತ್ರಕರ್ತರ ಮೇಲೆ ಪಿತೂರಿ ನಡೆಸಿ ಹೊರಹಾಕುವ ಕೆಲಸವೂ ನಡೆಯುತ್ತಲೇ ಇದೆ. ಇದಕ್ಕೆ ನಂದಿ ಬ್ರ್ಯಾಂಡಿನ ಪತ್ರಿಕೆಯ ಬ್ರಾಹ್ಮಣ ಪತ್ರಕರ್ತರೊಬ್ಬರು ಮೂಕ ಬೆಂಬಲ ನೀಡುತ್ತಿರುವ ಅನುಮಾನಗಳು ಹುಟ್ಟಿಕೊಂಡಿವೆ.

ಹುಬ್ಬಳ್ಳಿ ಮೊದಲೇ ಕೋಮು ಸೂಕ್ಷ್ಮ ಪ್ರದೇಶ. ಇಂಥಲ್ಲಿ ಇಡೀ ಜಿಲ್ಲಾ ಪತ್ರಕರ್ತರ ಸಂಘವೇ ಬ್ರಾಹ್ಮಣೀಕರಣಗೊಂಡು, ಉಳಿದೆಲ್ಲ ಕೋಮು, ಜಾತಿಗಳ ಪತ್ರಕರ್ತರ ವಿರುದ್ಧ ಚಿತಾವಣೆ ಮಾಡುತ್ತಾ ಕುಳಿತುಕೊಳ್ಳುವುದು ವೃತ್ತಿಗೇ ಬಗೆವ ದ್ರೋಹವಲ್ಲವೆ?

ಜಿಗುಟು ಜನಿವಾರಿ ಜರ್ನಲಿಸ್ಟ್‌ಗಳಿಗೆ ಈಗಲಾದರೂ ಬುದ್ಧಿ ಬಂದೀತೆ?

-ವರದಿಗಾರ

ಮಂಗಳೂರು ವಿ.ವಿ.ಯಲ್ಲಿ ಹಿಂದೂ ತಾಲಿಬಾನ್ ಪಡೆ: ಆತಂಕದಲ್ಲಿ ವಿದ್ಯಾರ್ಥಿನಿಯರು

ಒಂದು ಪತ್ರ

ಕೆಲವು ವರ್ಷಗಳಿಂದಲೂ ಅಲ್ಪಸಂಖ್ಯಾತರ ವಿರುದ್ಧ ಕಾನೂನು ಜಾರಿಗೊಳಿಸುತ್ತಿದ್ದ ಭಜರಂಗಿಗಳು ಈಗ ಮಂಗಳೂರು ವಿಶ್ವವಿದ್ಯಾಲಯವನ್ನೂ ತಮ್ಮ ಆಡಳಿತಕ್ಕೊಳಪಡಿಸಿಕೊಂಡಿವೆ. ಎರಡು ವಾರದ ಹಿಂದೆ ಕೆಲವು ವಿದ್ಯಾರ್ಥಿನಿಯರನ್ನು ಹಿಂಬಾಲಿಸಿದ ಭಜರಂಗಿ ಪಡೆ ಅವರು ಮುಸ್ಲಿಂ ಹುಡುಗರನ್ನು ಭೇಟಿ ಮಾಡಿದ್ದಕ್ಕೆ ಅವರ ಮೇಲೆ ಹಲ್ಲೆನಡೆಸಿದೆ. ಅಲ್ಲದೆ ಆ ವಿದ್ಯಾರ್ಥಿನಿಯರು ನಗರದ ಉಡ್‌ಲ್ಯಾಂಡ್ಸ್ ಹೊಟೆಲ್‌ನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದಾರೆ ಎಂಬ ಆರೋಪ ಮಾಡಿ ಅವರ ಭವಿಷ್ಯವನ್ನು ನಾಶಮಾಡುವ ಹುನ್ನಾರ ನಡೆಸಿದ್ದಾರೆ. ಭಜರಂಗಿಗಳ ಮಂಗಾಟವನ್ನು ಪೋಷಿಸುತ್ತಾ ಬಂದಿರುವ ವಿಶ್ವವಿದ್ಯಾಲಯ ಆಡಳಿತ ಒಂದು ಮಹಿಳಾ ವಿದ್ಯಾರ್ಥಿನಿಲಯದ (ಅದನ್ನು ಉದ್ಯೋಗಸ್ಥ ಮಹಿಳೆಯರ ನಿಲಯ ಎಂದು ಕರೆಯಲಾಗುತ್ತಿದೆ) ನಿಲಯಪಾಲಕರಾದ ಡಾ. ವಿಜಯಲಕ್ಷ್ಮಿ ರಾವ್‌ರವರನ್ನು ರಾಜೀನಾಮೆ ನೀಡುವಂತೆ ಒತ್ತಡ ತಂದು ಭಜರಂಗಿಗಳೊಂದಿಗೆ ನಿಕಟ ಸಂಬಂಧ ಹೊಂದಿರುವ ಮತ್ತೊಂದು ಮಹಿಳಾ ವಿದ್ಯಾರ್ಥಿನಿಲಯದ ನಿಲಯಪಾಲಕಿ ಡಾ. ಅನಿತಾ ರವಿಶಂಕರ್ ಎಂಬುವರಿಗೆ ಆ ಸ್ಥಾನವನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಡಾ. ವಿಜಯಲಕ್ಷ್ಮಿ ರಾವ್‌ರವರು ದಕ್ಷ ನಿಲಯ [illegible] ಹಲವು [illegible] ಸುಧಾರಣೆಗಳನ್ನು [illegible] ಕಟ್ಟುನಿಟ್ಟಾಗಿತ್ತೆಂದರೆ ಕುಲಸಚಿವ ಶ್ರೀ ಸುಂದರ ನಾಯಕ್‌ರವರೇ ಪದೇ ಪದೇ ಕೆಲವು ವಿದ್ಯಾರ್ಥಿನಿಯರನ್ನು ಕಾಲದ ಗಡುವು ಮೀರಿ ವಿದ್ಯಾರ್ಥಿನಿಲಯ ಪ್ರವೇಶಿಸಲು ಒತ್ತಡ ತರುತ್ತಿದ್ದನ್ನು ವಿರೋಧಿಸಿದ್ದರು. ಭಜರಂಗಿಗಳು ಹೇಳುವುದನ್ನೇ ಅಂತಿಮ ಸತ್ಯವೆಂದು ನಂಬುವ ಶ್ರೀ ಸುಂದರ ನಾಯಕ್‌ರವರು ವಿಜಯ



ಲಕ್ಷ್ಮಿಯವರಿಗೆ ಹಾಸ್ಟೆಲ್‌ನಲ್ಲಿದ್ದ ಸೆಕ್ಯುರಿಟಿ ಗಾರ್ಡ್ ಶರೀಫ್‌ರವರನ್ನು ಕೆಲಸದಿಂದ ತೆಗೆಯುವಂತೆ ಸೂಚಿಸಿದರು. ಆತ ಹಾಸ್ಟೆಲ್ ಹುಡುಗಿಯರನ್ನು ಬುಕ್‌ಮಾಡಿ ಕೊಡುತ್ತಿದ್ದ ಏಜೆಂಟ್ ಆಗಿದ್ದ ಎಂಬ ಸುಳ್ಳು ಆರೋಪವನ್ನು ಮಾಡಲಾಗಿತ್ತು. ನಿಷ್ಠೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದ ಶರೀಫ್‌ನನ್ನು ವಿನಾಕಾರಣ ತೆಗೆಯಲು ನಿರಾಕರಿಸಿದ ವಿಜಯಲಕ್ಷ್ಮಿಯವರು ಸ್ವಲ್ಪ ದಿನ ಕಾದು ನೋಡಿ ಶರೀಫ್ ತಪ್ಪಿತಸ್ಥನೆಂದು ಸಾಬೀತಾದಮೇಲೇ ಆತನನ್ನು ತೆಗೆಯುವುದಾಗಿ ಹೇಳಿದ್ದನ್ನು ಕುಲಸಚಿವ ಸುಂದರ ನಾಯಕ್ ಒಪ್ಪದಿದ್ದರಿಂದ ರಾಜಿನಾಮೆ ನೀಡಬೇಕಾಯಿತು. ವಿದ್ಯಾರ್ಥಿನಿಯರ ಚಾರಿತ್ರ್ಯಕ್ಕೆ ಕಳಂಕ ತರುವ ಉದ್ದೇಶ ಹೊಂದಿರುವ ಮತಾಂಧ ಭಜರಂಗಿಗಳ ಆರೋಪವನ್ನೇ ನಂಬಿದ ನಾಯಕ್‌ರವರು ಅವರ ಸಲಹೆಯ ಮೇರೆಗೆ ಸಂಜೆ ಹಾಸ್ಟೆಲ್ ಗೇಟುಗಳನ್ನು ಎರಡು ಗಂಟೆ ಮೊದಲೇ ಮುಚ್ಚುವಂತೆ ಆದೇಶ ಹೊರಡಿಸಿದ್ದಾರೆ. ಕಳೆದ ಎರಡು ದಶಕಗಳಿಂದಲೂ ರಾತ್ರಿ 9.30 ಕ್ಕೆ ಮುಚ್ಚಲಾಗುತ್ತಿದ್ದ ಗೇಟನ್ನು ಈಗ 7.30ಕ್ಕೇ ಮುಚ್ಚಲಾಗುತ್ತಿದೆ. ಇದು ವಿದ್ಯಾರ್ಥಿನಿಯರ ಮೇಲೆ ನಡೆಸಿರುವ ದೌರ್ಜನ್ಯವೇ ಸರಿ. ಅವರ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ. ಹಾಸ್ಟೆಲನ್ನು 7.30 ಕ್ಕೆ ಮುಚ್ಚಿರುವುದೇ ಮಹಾ ಸಾಧನೆಯೆಂದು ಕುಲಸಚಿವ ನಾಯಕ್ ಮತ್ತು ನಿಲಯಪಾಲಕಿ ಅನಿತಾ ರವಿಶಂಕರ್ ಬೀಗುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದಲೂ ಹಿಂದೂ ಯುವತಿಯರು ಮುಸ್ಲಿಂ ಯುವಕರೊಂದಿಗೆ ಮಾತನಾಡುವುದನ್ನೇ ವೇಶ್ಯಾವಾಟಿಕೆ ಎಂಬಂತೆ ಭಜರಂಗಿಗಳು ಮತ್ತು ಅವರ ವಕ್ತಾರರಾಗಿರುವ ಕೆಲವು ಪತ್ರಿಕೆಗಳು ಚಿತ್ರಿಸುತ್ತಾ ಬಂದಿವೆ. ಮಹಿಳೆಯರ ಬಗ್ಗೆ ಕಿಂಚಿತ್ತೂ ಗೌರವವಿಲ್ಲದ ಈ ಸಾಂಸ್ಕೃತಿಕ ಪೋಲಿಸ್ ಕಿಡಿಗೇಡಿಗಳ ಆದೇಶದಂತೆ ವಿಶ್ವವಿದ್ಯಾಲಯ ನಿಯಮಗಳನ್ನು ಜಾರಿಗೊಳಿಸುತ್ತಿರುವುದು ಆಘಾತಕಾರಿ ಬೆಳವಣಿಗೆ.

ಹಿಂದಿನ ಕುಲಪತಿ ಪ್ರೊ. ಹನುಮಯ್ಯನವರ ಕಾಲದಲ್ಲಿ ಬಾಲ ಮುದುರಿಕೊಂಡಿದ್ದ ಈ ಮಂಗಗಳು ಈಗ ತಮ್ಮ ಅಟ್ಟಹಾಸ ಪ್ರದರ್ಶಿಸುತ್ತಿವೆ. ಎಬಿವಿಪಿ ಮತಾಂಧರ ಹಿಡಿತದಲ್ಲಿರುವ ವಿಶ್ವವಿದ್ಯಾಲಯದ ವಿದ್ಯಾರ್ಥಿ ಪರಿಷತ್ತು ಕೋಮುದ್ವೇಶವನ್ನು ಉತ್ತೇಜಿಸುವ ಸಂಘ ಪರಿವಾರದ ನಾಯಕರನ್ನು ಕರೆಸಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಮುಕ್ತ ವಾತಾವರಣ ವಿರಬೇಕಾಗಿದ್ದ ವಿಶ್ವವಿದ್ಯಾಲಯ ಆವರಣವನ್ನು ಹಿಂದೂ [illegible] ವನ್ನಾಗಿಸಲಾಗುತ್ತಿದೆ. [illegible] ವಿದ್ಯಾಲಯ ಹಿಂದೂ ಆಲಯವಾಗುತ್ತಿದೆ. ಇದೆಲ್ಲದರ ಪರಿಣಾಮವೇ ಕ್ಯಾಂಪಸ್‌ಮೇಲೆ ಹೇರಲಾಗುತ್ತಿರುವ ತಾಲಿಬಾನ್ ಸಂಸ್ಕೃತಿ. ಕುಲಪತಿ ಪ್ರೊ. [illegible] ಇದೆಲ್ಲದಕ್ಕೂ ಮೌನ ಸಮ್ಮತಿ ಸೂಚಿಸುತ್ತಿರುವುದು ವಿದ್ಯಾರ್ಥಿಗಳಲ್ಲಿ ಆತಂಕ [illegible] ವಾತಾವರಣವನ್ನು [illegible] ತಾಲಿಬಾನ್ ಸಂಸ್ಕೃತಿ ಹೇರಿಕೆಗೆ ನಾಂದಿ.

(ನನ್ನ ಹೆಸರು ಪ್ರಕಟಿಸುವುದು ಬೇಡ)



ಎಲ್ಲಿಯೂ ಮನೆಯಿಲ್ಲದವಳು

ಹೆಣ್ಣೊಬ್ಬಳು ಲೈಂಗಿಕತೆಯ ಬಗ್ಗೆ ತನ್ನ ಸಾಹಿತ್ಯ ಕೃತಿಗಳಲ್ಲಾಗಲಿ, ಆತ್ಮಕಥನದಲ್ಲಾಗಲೀ ಮಾತೆತ್ತಿದರೂ ತಪ್ಪು. ಲೈಂಗಿಕತೆ ಎನ್ನುವುದು ಗಂಡಸಿನ ಸವಲತ್ತು. ಅವನ ಪುರಾತನ ಪಿತ್ರಾರ್ಜಿತ ಸ್ವತ್ತು. ನಾನು ಒಬ್ಬ ಗಂಡಸಿನಂತೆ ಬರೆಯಬಾರದು. ವಿವೇಚನೆಯಿಂದ ಬರೆಯಬೇಕು. ಎಷ್ಟೆಂದರೂ ನಾನು ಹೆಣ್ಣಲ್ಲವೆ? ಹೆಣ್ಣಿನ ದೇಹದ ಬಗ್ಗೆ ಬರೆಯುವ ಅಧಿಕಾರ ಅವನಿಗೆ ಮಾತ್ರ. ಅವಳ ತೊಡೆ, ಮೊಲೆ, ಸೊಂಟ, ಯೋನಿ ಇತ್ಯಾದಿ ವರ್ಣನೆ ಅವನ ಆಸ್ತಿ. ಹೆಣ್ಣಿಗೇಕೆ ಅದರ ಉಸಾಬರಿ? ನನಗೆ ಕೊಟ್ಟಿಲ್ಲದ ಸವಲತ್ತುಗಳಿಗೆ ಬಾಯಿ ಬಿಡಬಾರದು. ಆದರೆ ಈ ಮಿತಿಗಳನ್ನು ಧಿಕ್ಕರಿಸಿ ನನ್ನ ಸವಲತ್ತನ್ನು ಪಡೆದುಕೊಂಡು ಬಿಟ್ಟೆನಲ್ಲ! ದೇಹದ ಬಗ್ಗೆ ಬರೆದ ತೀವ್ರವಾದ, ವಿಷಾದದ ಕಥನಗಳಾಗಿದ್ದರೂ ಸಹ ನಾನು ಲಕ್ಷ್ಮಣರೇಖೆಯನ್ನು ದಾಟಿದ್ದು ದೊಡ್ಡ ತಪ್ಪು.

ಹಿಂದೆ ತಿರುಗಿ ನೋಡಿದಾಗ ಕಳೆದ ವರ್ಷಗಳೆಲ್ಲವೂ ಬರಡಾಗಿ ಬೂದಿಗಟ್ಟಿದಂತೆ ಕಾಣಿಸುತ್ತವೆ. ಅಚಾನಕ್ಕಾಗಿ, ಈ ಬೂದಿಯ ರಾಶಿಯಿಂದ ಅರೆಬರೆ ಸತ್ತ ಕನಸೊಂದು ಚಿಮ್ಮಿದಂತೆ ನನ್ನೆದುರು ನಿಲ್ಲುತ್ತದೆ. ಸತ್ತಂತಿದ್ದ ನೆನಪುಗಳೆಲ್ಲವೂ ಒಂದೊಂದಾಗಿ ಮೆಲ್ಲಗೆ ನನ್ನ ಮನಸ್ಸಿನ ಕವಾಟ ತೆಗೆದು ಲಗ್ಗೆ ಇಡುತ್ತವೆ. ಅವುಗಳೆದುರು ನಾನು ನಡುಗಿ ಕಣ್ಣೀರಿಡುತ್ತೇನೆ. ನೆನಪಿನಲೆಗಳ ರಭಸದಲ್ಲಿ ನಿಧಾನವಾಗಿ ಹಿಂದೆ ಹಿಂದೆ ಕೊಚ್ಚಿಹೋಗುತ್ತೇನೆ....

ಅಂಕುಡೊಂಕಾದ ಮಸುಕಾಗಿರುವ ಗತದ ಹಾದಿಯಲ್ಲಿ ನೆನಪುಗಳ ತುಣುಕುಗಳಿಗೆ ತಿಣುಕದೆ ಹೇಗಿರಲಿ? ಆದರೆ ಅದರಿಂದ ಉಪಯೋಗವಾದರೂ ಏನು? ಗತವೆಂಬುದು ಗತವೇ -ಮತ್ತೆಂದೂ ಬಾರದಂತಹುದು. ಎಂದೋ ಸತ್ತುಹೋದ ಕನಸುಗಳು ಮತ್ತೆ ಗುರುತಿಸಲಾಗದಂತೆ ಸತ್ತುಬಿದ್ದಿವೆ. ಮೃದು ಬೆರಳುಗಳಿಂದ ಬಲೆಗಳನ್ನು ಝಾಡಿಸಿ ತೆಗೆದರೆ ಆಗುವ ಪ್ರಯೋಜನವಾದರೂ ಏನು? ಹಿಂದೆ ಹೋದದ್ದು ಕಳೆದೇ ಹೋಯಿತು-ಇನ್ನೆಂದೂ ಬಾರದಂತೆ.

ಅದೆಲ್ಲವೂ ನನಗೆ ತಿಳಿದಿರುವುದೇ. ಆದರೂ ಗಡೀಪಾರಿನ ಬದುಕಿನಲ್ಲಿ ಮನಸ್ಸು ಮತ್ತೆ ಮತ್ತೆ ಗತಕ್ಕೆ ಮರಳುತ್ತದೆ. ನೆನಪುಗಳ ಹಂದರದಲ್ಲಿ ದೆವ್ವ ಹೊಕ್ಕಂತೆ ಅಲೆಯುತ್ತದೆ. ರಾತ್ರಿಯಾಗುತ್ತಲೇ ದುಃಸ್ವಪ್ನಗಳ ಕಂತೆಯನ್ನು ಹೊತ್ತ ವಿಷಣ್ಣತೆಯ ಹೊದಿಕೆಯೊಂದು ನನ್ನನ್ನು ತೆಕ್ಕೆಯಲ್ಲಿ ಸೇರಿಸಿಕೊಂಡಂತೆ. ಆ ಗಳಿಗೆಯಲ್ಲಿ ಆ ಪುಟ್ಟ ಹುಡುಗಿ ಎಚ್ಚರಾಗಿ ಕಥೆ ಹೇಳಲು ತೊಡಗುತ್ತಾಳೆ.

ಕಟ್ಟುನಿಟ್ಟಾದ ಕುಟುಂಬವೊಂದರಲ್ಲಿ ಹುಟ್ಟಿ ನಿರ್ಬಂಧಗಳಲ್ಲೇ ಬೆಳೆದ ಬಾಲೆ ಅವಳು. ಸೊಲ್ಲೆತ್ತುವ ಶಕ್ತಿಯಿಲ್ಲದೆ ಉಸಿರುಗಟ್ಟಿ ಬದುಕಿದ ಈ ಹುಡುಗಿಯ ಆಸೆ ಆಕಾಂಕ್ಷೆಗಳೆಲ್ಲವೂ ತಿಪ್ಪೆಯಲ್ಲಿ ಕಸವೆಂದು ನಿರ್ದಯೆಯಿಂದ ಬಿಸಾಕಲ್ಪಟ್ಟವು. ಬೆದರು ಮನಸ್ಸಿನ ಈ ಬಾಲೆಯ ನಿರ್ಬಲ ದೇಹ ರೋಮದ ಎಷ್ಟೋ ಕಪ್ಪು ಕೈಗಳಿಗೆ ಸಿಕ್ಕಿ ನರಳಿತ್ತು. ಈ ಹುಡುಗಿಯ ಕಥೆಯನ್ನು ನಾನು ಈಗಾಗಲೇ ಹೇಳಿದ್ದೇನೆ.

ಹದಿವಯಸ್ಸಿಗೆ ಸಹಜವಾದ ಕೆಲವು ನವ್ಯ ಕನಸುಗಳನ್ನು ಹೊತ್ತು ಸಾಮಾನ್ಯ ಹೆಂಗಸಿನ ಸಾಮಾನ್ಯ ಬದುಕಿಗೆ ಆಸೆಪಟ್ಟು ಈ ಹುಡುಗಿ ಪ್ರೀತಿಸಿ ಗುಟ್ಟಾಗಿ ಮದುವೆಯನ್ನೂ ಆದಳು. ಅವಳ ಕಥೆಯನ್ನೂ ನಾನು ಹೇಳಿದ್ದೇನೆ. ತಾನು ಮನಸಾರೆ ಪ್ರೀತಿಸಿದ ಗಂಡನಿಂದ ವಂಚಿಸಲ್ಪಟ್ಟವಳು, ನಂಬಿಕೆಯ ಗೋಡೆ ಕುಸಿದುಬಿದ್ದ ನೋವಿಗೆ ತುತ್ತಾದವಳು, ದುಃಖ, ದುಮ್ಮಾನ, ಶೋಕ, ವಿಯೋಗವನ್ನು ಅನುಭವಿಸಿ ಬಲ್ಲವಳು, ಸ್ವ-ನಾಶದ ಘೋರ ಹಾದಿಗೆ ನೂಕಲ್ಪಟ್ಟವಳು-ಈ ಸಂತಪ್ತ ಹೆಣ್ಣಿನ ಕಥೆಯನ್ನೂ ಹೇಳೇ ಹೇಳಿದ್ದೇನೆ.

ಮೂರಾಬಟ್ಟೆಯಾದ ಕನಸುಗಳ ತುಣುಕುಗಳನ್ನಾಯ್ದು ಮತ್ತೆ ಬದುಕನ್ನು ಕಟ್ಟಹೊರಟವಳು, ಹೃದಯವಿಲ್ಲದ ಜನರ ಮಧ್ಯೆ ತನ್ನದೇ ಆದ ಪುಟ್ಟ ತಾವನ್ನು ರೂಪಿಸಿಕೊಳ್ಳ ಹೊರಟವಳು, ಸಮಾಜದ ಕಟ್ಟಳೆಗೆ ಮಣಿದು 'ಗಂಡು ರಕ್ಷಕ'ನಿಗೆ ಒಪ್ಪಿಸಿಕೊಂಡವಳು, ಬೆಳೆಯುತ್ತಲೇ ಹೋದ ನೋವಿನದಿ ನಲುಗಿ ನುಣ್ಣಗಾದವಳು, ಹುಟ್ಟುವುದಕ್ಕೂ ಮುಂಚೆಯೇ ಮರೆಯಾದ ಮಗುವಿನ ಅಗಲಿಕೆಯ ತಾಪವನ್ನು ಅನುಭವಿಸಿದವಳು, ಮಾಯದ ಗಾಯಗಳ ವ್ರಣಕ್ಕೆ ಪಕ್ಕಾದವಳು, ವೈಷಮ್ಯ, ಅಪನಂಬಿಕೆ, ಅಸಹನೀಯ ಹೀನಾಯಕ್ಕೆ ಸಿಕ್ಕಿ ಜರ್ಝರಿತಳಾದವಳು- ಈ ಘಾಸಿ ಹೆಣ್ಣಿನ ಕಥೆಯನ್ನೂ ನಿರೂಪಿಸಿದ್ದೇನೆ.

ಈ ಹೆಣ್ಣು ತನ್ನ ಉಳಿದ ಚೂರುಪಾರು ಶಕ್ತಿಯನ್ನು ಒಟ್ಟುಗೂಡಿಸಿಕೊಂಡು, ಯಾರ ಬಲವೂ ಇಲ್ಲದೆ, ಕಳೆದು ಹೋದ ತನ್ನನ್ನು ಮರಳಿ ಕೊಡಬಲ್ಲ ಆಶ್ರಯವನ್ನು ಅರಸುತ್ತಾ ಉಳಿದೆಲ್ಲ ನೆಲೆಗೂ ಬೆನ್ನು ಹಾಕಿ ಹೊರಟಳು. ವಂಚಿಸಿದ, ಒತ್ತರಿಸಿದ ಸಮಾಜದೆದುರು ಸದ್ದುಹೊಡೆದು ನಿಂತು ಛೀ ಥೂ ಎಂದವರಿಗೆ ಜಗ್ಗದೇ ನಿಂತಳು. ನಾನು ಹೇಳಿದ ಇವಳ ಕಥೆ ನಿಮಗೂ ಗೊತ್ತು. ಈ ಹೆಣ್ಣು ಸಮಾಜದ ಕಟ್ಟಳೆಗೆ, ಸಂಪ್ರದಾಯಕ್ಕೆ, ಶಾಸ್ತ್ರಗಳಿಗೆ ದೊಗ್ಗು ಸಲಾಮು ಹೊಡೆಯಲು ಸಿದ್ಧಳಿರಲಿಲ್ಲ, ಎಡವಿದಷ್ಟೂ, ಬಿದ್ದಷ್ಟೂ, ಎಸೆಯಲ್ಪಟ್ಟಷ್ಟೂ, ಆಕೆ ಎದ್ದು ನಿಲ್ಲುವ ಛಲದಲ್ಲಿ ಗಟ್ಟಿಯಾಗುತ್ತಾ ಹೋದಳು. ಎಡವಿದ ಹೆಜ್ಜೆಗಳು ನಡೆಯಲು ಕಲಿಸಿದವು. ಅಲೆದಾಟ ಅವಳ ಹಾದಿಯನ್ನು ಸ್ಪಷ್ಟವಾಗಿಸಿತು. ಮೆಲ್ಲ ಮೆಲ್ಲಗೆ ಅವಳಲ್ಲಿ ಹೊಸ ಪ್ರಜ್ಞೆಯೊಂದು ಮೂಡಲಾರಂಭಿಸಿತು. 'ತನ್ನ ಬದುಕು ತನ್ನದೇ. ಬೇರಾರದ್ದೂ ಆಗಗೊಡಬಾರದು' ಎಂಬ ಮನಸ್ಸಿನ ಪಿಸುಮಾತು ದಿನ ಕಳೆದಂತೆ ದೃಢವಾಗುತ್ತಾ ಹೋಯಿತು. ಈ ಹೆಣ್ಣಿನ ವ್ಯಕ್ತಿತ್ವವನ್ನು ರೂಪಿಸಿದ ಪರಿಸ್ಥಿತಿಗಳ ಬಗ್ಗೆ ನಾನು ಹೇಳಿದ್ದೇನೆ. ಈ ಹೆಣ್ಣು ಪುರುಷಪ್ರಧಾನ ಸಮಾಜದ ಕಟ್ಟುಗಳಲ್ಲಿ ಸುಟ್ಟು ಕರಕಾಗಿ ಬಂದವಳಲ್ಲ, ಬದಲು ಮಿರುಗಾದ ಉತ್ಕಿಸಂತವಳು.

ನಾನು ಮಾಡಿದ್ದು ತಪ್ಪೇ? ನನಗಂತೂ ಹಾಗನ್ನಿಸಿಲ್ಲ. ಆದರೂ ನಾನು ಅವಳ ಕಥೆ ಹೇಳಬಾರದಿತ್ತು ಅಂತ ತುಂಬ ಮಂದಿಗೆ ಅನ್ನಿಸಿದೆ. ಇಂದು ಕಟಕಟೆಯಲ್ಲಿ ನಿಂತು ತೀರ್ಪಿಗೆ ಕಾಯುತ್ತಿದ್ದೇನೆ. ಆ ಹುಡುಗಿ ಯಾರೆಂದು ಹೇಳಿದ್ದೇ ನಾನು ಮಾಡಿದ ಮಹಾ ಅಪರಾಧವಂತೆ. ಯಾಕೆಂದರೆ ಆ ಹುಡುಗಿ ನಾನೇ, ತಸ್ಲೀಮಾ.

ನನ್ನ ಕಲ್ಪನೆಯ ಬಲದಿಂದ ಪುಟಗಟ್ಟಲೆ ಭ್ರಮೆಗಳನ್ನು ಸೃಷ್ಟಿಸಿದ್ದಿದ್ದರೆ ನಾನು ಕ್ಷಮೆಗೆ ಅರ್ಹಳಾಗುತ್ತಿದ್ದೆ. ಆದರೆ "ಆ ಹುಡುಗಿ ನಾನೇ. ದೀರ್ಘ ನೋವಿನಲ್ಲಿ ಬೆಂದು ಈಗ ತಲೆಯೆತ್ತಿ ನಿಂತಿದ್ದೇನೆ, ನನ್ನ ಬದುಕನ್ನು ನನಗೆ ಬೇಕಾದಂತೆ ನಡೆಸಲು ನಿರ್ಧರಿಸಿದ್ದೇನೆ" ಎಂದು ಧೈರ್ಯವಾಗಿ ಹೇಳುವ ಧ್ವನಿಯ ರಕ್ತಮಾಂಸದ ದೇಹವು ನನ್ನದೇ ಎಂದು ಧೈರ್ಯವಾಗಿ ಸಾರುವುದು ಮಾತ್ರ ನಿಷಿದ್ಧ.

ಇಂಥ ಧೈರ್ಯ ನಿಲುವನ್ನು ಈ ಸಮಾಜ ಹೇಗೆ ಒಪ್ಪಿಕೊಂಡೀತು? ಈ ತರಹದ ಧೈರ್ಯ ಹೆಂಗಸಾದವಳಿಗೆ ಇರಬಾರದು. ಹಾಗೆ ಹೇಳುವ ಪುರುಷಪ್ರಧಾನ ಸಮಾಜ ನನ್ನನ್ನು ಬದುಕಲು ಬಿಡುವುದಿಲ್ಲ, ನನ್ನ ತಾಯ್ನಾಡು ಬಂಗಾಲ ದೇಶದಲ್ಲಿ ನಾನೊಂದು ಬಹಿಷ್ಕೃತ ಹೆಸರು, ಒಬ್ಬ ದೇಶಭ್ರಷ್ಟ ಹೆಂಗಸು, ಒಂದು ನಿಷಿದ್ಧ ಪುಸ್ತಕ. ನನ್ನ ಹೆಸರನ್ನು ಯಾರೂ ಹೇಳಲಾಗದು, ನನ್ನ ಪುಸ್ತಕಗಳನ್ನು ಮುಟ್ಟುವುದಾಗಲೀ, ಓದುವುದಾಗಲೀ ಮಾಡಕೂಡದು. ಹಾಗೇನಾದರೂ ಮಾಡಿದಲ್ಲಿ ಅವರ ನಾಲಗೆಗಳು ಕೊಳೆತುಹೋದಾವು, ಕೈಗಳಿಗೆ ಸೋಂಕು ತಗುಲೀತು, ಹೀನವಾಗಿ ಹೇವರಿಸಿಯಾರು.

ವಿಶೇಷ ಲೇಖನ

ಕನ್ನಡಕ್ಕೆ : ಸುಕನ್ಯಾ ಕನರಳ್ಳಿ

ಇದು ನನ್ನ ಹಾದಿ, ನಾನೇ ಆಯ್ದುಕೊಂಡ ಹಾದಿ.

ನನ್ನ ಪುಸ್ತಕ 'ದ್ವಿಖಂಡಿತೊ' ನನ್ನನ್ನು ಸಾವಿರ ಹೋಳುಗಳಾಗಿ ಸಿಗಿದರೂ ಪರವಾಗಿಲ್ಲ, ನಾನು ಮಾಡಿದ್ದು ತಪ್ಪೆಂದು ನಾನು ಕ್ಷಮೆ ಯಾಚಿಸಲಾರೆ. ಒಬ್ಬಳ ಬದುಕನ್ನು ಬರಹದಲ್ಲಿ ಬಿಚ್ಚಿಡುವುದು ತಪ್ಪೆ? ತಾನು ಅನುಭವಿಸಿದ ಕರಾಳ ಸತ್ಯಗಳನ್ನು ಬಯಲಾಗಿಸುವುದು ತಪ್ಪೆ? ಬಯಲಾಗುವುದೇ ಆತ್ಮಕಥೆಯನ್ನು ಬರೆಯುವ ಮೂಲ ಉದ್ದೇಶ. ಜೀವನದ ಅಡಗಿಸಿಟ್ಟ ಅಪರಿಚಿತ ಗುಟ್ಟುಗಳನ್ನು ಹೇಳುವುದು ಅದರ ವಸ್ತು, ನಾನು ಮಾಡಿದ್ದೂ ಅದನ್ನೇ. 'ದ್ವಿಖಂಡಿತೊ' ಎಬ್ಬಿಸಿರುವಷ್ಟು ವಿವಾದದ ಅಲೆಯನ್ನು ನನ್ನ ಮುಂಚಿನ ಎರಡು ಆತ್ಮಕಥಾನಕಗಳು 'ಅಮರ್ ಮೆಯಿಬೆಲ, (ಬಾಲ್ಯ) ಮತ್ತು 'ಉತಲ್ ಹವಾ' (ಬಿರುಗಾಳಿ) ಎಬ್ಬಿಸಲಿಲ್ಲ, ಈ ವಿವಾದವನ್ನು ಹುಟ್ಟುಹಾಕಿದ್ದು ಬೇರೆಯವರೇ. ನಾನಂತೂ ಅಲ್ಲ, ವಿವಾದವನ್ನಲ್ಲದೇ ಇನ್ನೇನನ್ನೂ ಸೃಷ್ಟಿಸುವ ಸಾಮರ್ಥ್ಯವಿಲ್ಲದವಳು ಬೇಕೆಂತಲೇ ರೋಚಕಗೊಳಿಸುವ ಪುಸ್ತಕ ಬರೆದಿದ್ದಾಳೆ ಎನ್ನುವುದು ಅವರು ಹೊರಿಸುವ ಅಪವಾದ. ಆತ್ಮಕಥನದ ವಿಷಯದಲ್ಲಿ ಈ ಪ್ರಶ್ನೆಗಳೇ ಸಲ್ಲ, ನನ್ನ ಬಾಲ್ಯ, ಹದಿಹರೆಯ, ಯೌವ್ವನದ ದಿನಗಳಲ್ಲಿ ನಾನು ಅನುಭವಿಸಿದ್ದೆಲ್ಲವನ್ನಷ್ಟೇ ನಾನು ಬರೆದಿರುವುದು. ನನ್ನ ನೋವು, ನಲಿವು, ಆಸೆ, ನಿರಾಸೆ, ನಂಬಿಕೆ, ಹತಾಶೆ, ನನ್ನ ರೂಪ, ಕುರೂಪ, ಕೋಪ, ಕಣ್ಣೀರು, ದುಗುಡ ದುಮ್ಮಾನ, ಸೋಲು ಇತ್ಯಾದಿಗಳ ಬಗ್ಗೆಯೇ ನಾನು ಬರೆದಿರುವುದು. ಹೀನವಾಗಿ ಜುಮ್ಮೆನಿಸುವ ವಸ್ತುವನ್ನಾಗಲೀ, ಬರೆಯಬಾರದ್ದನ್ನಾಗಲಿ ನಾನೇನೂ ಬರೆದಿಲ್ಲ, ನಾನು ಬರೆದಿರುವುದು ನನ್ನ ನಿಜದ ಬದುಕನ್ನೇ. ಆ ಬದುಕೇ ರೋಚಕವಾಗಿದ್ದರೆ, ಉತ್ತೇಜಿಸುವಂತಿದ್ದರೆ ನಾನೇನು ಮಾಡಲಿ? ಅನವಶ್ಯಕ ವಿವಾದವನ್ನೆಬ್ಬಿಸಲೆಂದೇ ಬರೆದದ್ದು ಎಂದು ನನ್ನ ಮೇಲೆ ಗೂಬೆ ಕೂರಿಸಲಾಗಿದೆ. ಪ್ರತಿಯೊಂದು ಗ್ರಹಿಕೆಯ ಹಿಂದೆಯೂ ಹೀನ ಉದ್ದೇಶ ವಿರುತ್ತದೆ ಎಂಬುದು ಇದರ ಅರ್ಥವೇನು? ಆಳವಾದ ಪ್ರಾಮಾಣಿಕತೆಯ ಮೂಲದಿಂದ ಅದು ಬಂದಿರಬಾರದೇಕೆ? ನನ್ನಲ್ಲಿ ಅಪಾರವಾಗಿದೆ ಎಂದು ಇತರರು ಹೇಳುವ ಧೈರ್ಯವೇ ಇದರ ಸೆಲೆಯಾಗಿರಬಾರದೇಕೆ?

ವಿವಾದ ನನಗೆ ಹೊಸದೇನೂ ಅಲ್ಲ, ಬರೆದದ್ದು ಪ್ರಕಟವಾದ ದಿನದಿಂದ ನಾನದನ್ನು ಬಲ್ಲೆ, ಸರಳವಾದ ಸತ್ಯವಿಷ್ಟೇ: ಪುರುಷಪ್ರಧಾನ ಸಮಾಜದ ಜೊತೆ ರಾಜಿ ಮಾಡಿಕೊಳ್ಳದಿದ್ದರೆ ವಿವಾದ ಎಬ್ಬಿಸಲಾಗುತ್ತದೆ, ಸಂಘರ್ಷ ಅನಿವಾರ್ಯವಾಗುತ್ತದೆ.

ಆತ್ಮಕಥನದ ಆಶಯಗಳು ಬೇರೆ ಬೇರೆ ಇರಬಹುದು. ಆದರ್ಶೀಕರಿಸಿದ ಗತದ ಬಗ್ಗೆ ಮಾತನಾಡುವ ಆತ್ಮಕಥನಗಳನ್ನು ಒಪ್ಪಿಕೊಳ್ಳುವುದು ಸುಲಭ. ಸತ್ಯ ನ್ಯಾಯದ ಹಾದಿಗೆ ಮುಂದಿನ ಪೀಳಿಗೆಯನ್ನು ಹಚ್ಚುವ ಘನ ಜವಾಬ್ದಾರಿ ಹೊತ್ತು ಮಹಾಪುರುಷರು ತಮ್ಮ ಆತ್ಮಕಥನಗಳನ್ನು ಬರೆಯುತ್ತಾರೆ. ಕುರುಡರಿಗೆ ಕಣ್ಣಾಗುವ ಉದ್ದೇಶದಿಂದ ಬರೆಯಲು ನಾನ್ಯಾವ ಸಂತಳೂ ಅಲ್ಲ, ಜ್ಞಾನಿಯೂ ಅಲ್ಲ, ಒಬ್ಬ ಸಾಮಾನ್ಯ ಹೆಂಗುಸು ತನ್ನ ಬದುಕಲ್ಲಿ ಉಂಡ ಕಹಿಯನ್ನು, ನೋವನ್ನು ಹಂಚಿಕೊಳ್ಳುವುದಷ್ಟೇ ನನ್ನ ಉದ್ದೇಶ.

ನಾನು ಮಹಾ ಬರಹಗಾರ್ತಿಯೂ ಅಲ್ಲ, ವಿಶೇಷ ವ್ಯಕ್ತಿಯೂ ಅಲ್ಲ, ಆದರೆ ನನ್ನ ಬದುಕಲ್ಲಿಯೂ ಸಾಮಾನ್ಯವಲ್ಲದ ಘಟನೆಗಳೇ ನಡೆದಿವೆ. ಇಲ್ಲದಿದ್ದರೆ ನನ್ನ ನಂಬಿಕೆಗಳಿಗೆ ಬದ್ಧಳಾಗಿ ನಡೆದಿದ್ದೇ ಒಂದು ತಪ್ಪಾಗಿ ಸಾವಿರಾರು ಮಂದಿ ನನ್ನ ಸಾವಿಗಾಗಿ ಆಗ್ರಹಿಸಿ ಬೀದಿಗಿಳಿಯುತ್ತಿದ್ದರೇನು? ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ತಪ್ಪಿಗೆ ನನ್ನ ಪುಸ್ತಕಗಳನ್ನು ಸುಡುತ್ತಿದ್ದರೇನು? ಸತ್ಯ ಹೇಳಿದ ತಪ್ಪಿಗೆ ನನ್ನ ತಾಯ್ನೆಲದಲ್ಲಿ ಬದುಕುವ ಹಕ್ಕನ್ನು ಸರ್ಕಾರ ನನ್ನಿಂದ ಕಿತ್ತುಕೊಳ್ಳುತ್ತಿತ್ತೇನು?

ನನ್ನ ಬದುಕನ್ನು ತಮಗೆ ಬೇಕಾದಂತೆ ಬಣ್ಣಿಸಿ ತಮ್ಮ ವ್ಯಕ್ತಿತ್ವವನ್ನು ಎತ್ತರಿಸಿಕೊಳ್ಳುವ ಹುನ್ನಾರವನ್ನು ಇತರರು ಮಾಡುವಾಗ ಇದ್ದುದನ್ನು ಇದ್ದಂತೆಯೇ ಹೇಳುವ ಉದ್ದೇಶದಿಂದ ನನ್ನ ಬದುಕಿನ ಕಥೆಯನ್ನು ನಾನೇ ಹೇಳುವುದು ತಪ್ಪೇನು? ನನ್ನ ಬದುಕು ನನಗಲ್ಲದೇ ಇನ್ನಾರಿಗೆ ತಿಳಿದಿರಲು ಸಾಧ್ಯ?

ನನ್ನೊಳಗಿನ ನನ್ನನ್ನು, ನನ್ನನ್ನು ತೀವ್ರವಾಗಿ ಕಾಡಿದ ಗಳಿಗೆಗಳನ್ನು, ನನ್ನ ಬಲಾಬಲ, ಸುಖ-ದುಃಖ, ಔದಾರ್ಯ ಹೀನತೆಗಳನ್ನು ನಾನು ಬರೆಯದಿದ್ದಲ್ಲಿ ಆತ್ಮಕಥನದ ಮೂಲ ಉದ್ದೇಶವನ್ನೇ ಮರೆತಂತಾಗ ಲಿಲ್ಲವೆ? 'ಸಾಹಿತ್ಯಕ್ಕೋಸ್ಕರ ಸಾಹಿತ್ಯ' ಎಂಬ ವಾದದ ಲ್ಲಾಗಲಿ ಅಥವಾ ಸಾಹಿತ್ಯಕ ಕೌಶಲ್ಯ, ರಮ್ಯತೆ ಗಳಲ್ಲಾಗಲಿ ನನಗೆ ಆಸ್ಥೆ ಇಲ್ಲ, ಇದೆಲ್ಲದಕ್ಕಿಂತ ನನ್ನನ್ನು ಹೆಚ್ಚಾಗಿ ಕಾಡುವುದು ಪ್ರಾಮಾಣಿಕತೆ.

ನನ್ನ ಬದುಕು ಹೇಗಿತ್ತೋ, ಹೀನಾಯವಾಗಿತ್ತೋ, ತುಚ್ಛವಾಗಿತ್ತೋ, ಬರೆಯಲು ಕೂತಾಗ ಮಾತ್ರ ನನಗೆ ನಾನು ಮೋಸ ಮಾಡಿಕೊಳ್ಳಲಾರೆ. ಓದುಗರಿಗೆ ಅದು ಹೀನಾಯವೆನ್ನಿಸಿದರೆ, ಹಾಗೇ ಇರಲಿ. ಅವರಿಗೆ ಸುಳ್ಳಿನ ಕಥೆಯನ್ನು ನಾನು ಹೇಳುತ್ತಿಲ್ಲ ಎಂಬ ತೃಪ್ತಿ ನನಗೆ ಸಾಕು. ಆತ್ಮಕಥನದ ವೇಷದಲ್ಲಿ ರಮ್ಯವಾದ ಕಥೆಯೊಂದನ್ನು ನಾನು ಹೇಳುತ್ತಿಲ್ಲವಲ್ಲ! ನನ್ನ ಬದುಕಿನ ಸುಂದರ ಕ್ಷಣಗಳ ಬಗ್ಗೆ ಹೇಗೆ ಎಗ್ಗಿಲ್ಲದೆ ಬರೆಯುತ್ತೇನೋ, ಹಾಗೇ ಕುರೂಪವನ್ನೂ ಬಿಚ್ಚಿಡುವ ತುರ್ತು ನನಗೆ ಮುಖ್ಯ, ನನ್ನ ಭೂತವೆಂಬುದು ಬದಲಾಯಿಸಲಾಗದ್ದು. ಅದರ ಸೌಂದರ್ಯ ಮತ್ತು ಕುರೂಪವನ್ನು ಒಟ್ಟಿಗೆ ಸ್ವೀಕರಿಸುವುದು ಅನಿವಾರ್ಯ.. ನಡೆದದ್ದನ್ನು ನಡೆದೇ ಇಲ್ಲವೆಂಬಂತ ಕಥೆ ಹೆಣೆಯಲಾರೆ.

ಛೀ, ಥೂ ಎಂಬ ಬಾಣಗಳು ನನ್ನನ್ನು ಎಲ್ಲಾ ದಿಕ್ಕಿನಿಂದ ಘಾಸಿಗೊಳಿಸಿದವು. ಹೀಯಾಳಿಕೆ, ಹೇವರಿಕೆಗಳ ಮಣ್ಣನ್ನೆರಚಿ ನನ್ನನ್ನು ಅವಮಾನಿಸಲಾಯ್ತು. ಅದಕ್ಕೆ ಕಾರಣವಿಷ್ಟೇ: ನಾನು ಸತ್ಯ ಹೇಳುವ ಧೈರ್ಯ ತೋರಿದ್ದು, ಸತ್ಯವನ್ನು ನೋಡಲೂ, ಸ್ವೀಕರಿಸಲೂ ಧೈರ್ಯ ಬೇಕಲ್ಲ? ಅದು ಎಲ್ಲರಿಗೂ ಇರುವಂಥದಲ್ಲ. 'ಅಮರ್ ಬೆಯೆಲ' ಮತ್ತು 'ಉತಲ್ ಹವಾ'ಗಳ ಸತ್ಯ ಉಳಿದವರಿಗೆ ಸಹನೀಯವಾಗಿತ್ತು. ಆದರೆ 'ದ್ವಿಖಂಡಿತೊ' ಸತ್ಯ ಮಾತ್ರ ಅಪಥ್ಯವಾಯಿತು. 'ಅಮರ್ ಮೆಯೆಬೆಲ'ದಲ್ಲಿ ನನ್ನ ಹೀನಾಯ ಬಾಲ್ಯದ ಬಗ್ಗೆ ಓದಿದಾಗ ಜನ 'ಅಯ್ಯೋ ಪಾಪ!' ಎಂದರು. ಗಂಡನಿಂದ ಮೋಸಗೊಳಿಸಲ್ಪಟ್ಟ ಹೆಣ್ಣಿನ ಬಗ್ಗೆ 'ಉತಲ್ ಹವಾ'ನಲ್ಲಿ ಓದಿದಾಗ 'ಛೆ! ಹೀಗಾಗಬಾರದಿತ್ತು!' ಎಂದು ಕನಿಕರಿಸಿದರು. ಆದರೆ 'ದ್ವಿಖಂಡಿತೊ'ನಲ್ಲಿ ನನ್ನ ಪರಪುರುಷರ ಸಂಬಂಧಗಳ ಬಗ್ಗೆ ಬರೆದಾಗ ಜನ ನನ್ನೆಡೆಗೆ ಬೆರಳು ತೋರಿಸಲಾರಂಭಿಸಿದರು. ಇದೆಲ್ಲದರ ಸಾರಾಂಶ ಇಷ್ಟೇ. ಎಲ್ಲಿಯತನಕ ಹೆಣ್ಣು ಅಬಲೆಯಾಗಿ ದಮನಿಸಲ್ಪಡುತ್ತಾಳೋ, ಅಲ್ಲಿಯತನಕ ಜನ ಅವಳನ್ನು ಕನಿಕರಿಸುವುದಷ್ಟೇ ಅಲ್ಲ, ಇಷ್ಟಪಡುತ್ತಾರೆ ಸಹ. ಯಾವಾಗ ಅದೇ ಹೆಣ್ಣು ಶೋಷಣೆಯನ್ನು ಧಿಕ್ಕರಿಸಿ ತನ್ನ ಹಕ್ಕುಗಳಿಗೆ ಹೋರಾಡಲು ಎದ್ದು ನಿಲ್ಲುತ್ತಾಳೋ, ತನ್ನ ಸುತ್ತ ಇರುವ ಬೇಡಿಗಳಿಂದ ದೇಹ ಮನಸ್ಸನ್ನು ಮುಕ್ತವಾಗಿಸಲು ಬಯಸುತ್ತಾಳೊ, ಆಗ ಹೀನಾಯವಾಗಿ ಜರೆಯಲ್ಪಡುತ್ತಾಳೆ. ನಮ್ಮ ಸಮಾಜದ ಈ ಲಕ್ಷಣ ನನಗೆ ಗೊತ್ತಿದ್ದೇ.

ಆದರೂ ನನಗೆ ಭಯವಿರಲಿಲ್ಲ.

'ದ್ವಿಖಂಡಿತೊ' ವಿವಾದವೆಬ್ಬಿಸಿದ್ದು ಲೈಂಗಿಕ ಸ್ವಾತಂತ್ರ್ಯದ ಕಾರಣಕ್ಕಾಗಿ. ಪುರುಷಪ್ರಧಾನ ಸಮಾಜವನ್ನೊಪ್ಪಿ ಕೊಂಡು ಬದುಕುವ ಹೆಚ್ಚು ಜನರಿಗೆ ಹೆಣ್ಣೊಬ್ಬಳ ಲೈಂಗಿಕ ಸ್ವಾಯತ್ತತೆ ಕಿರಿಕಿರಿಗೊಳಿಸುವುದಷ್ಟೇ ಅಲ್ಲ, ಅಸಾಧ್ಯ ಕೋಪವನ್ನೂ ಬರಿಸುತ್ತದೆ. ಈ ಸ್ವಾತಂತ್ರ್ಯವೆನ್ನುವುದು ನನಗೆ ಬರೀ ಬುರುಡೆ ಹೊಡೆಯುವ ಸಿದ್ಧಾಂತವಲ್ಲ, ನನ್ನ ಬದುಕಿನುದ್ದಕ್ಕೂ, ನಾನು ಪಾಲಿಸಿಕೊಂಡು ಬಂದಿರುವ ನಂಬಿಕೆ. ಹಾಗಂತ ಅದು ಸ್ವೇಚ್ಛಾಚಾರ ಅಲ್ಲ, ಯಾವ ಗಂಡಸೂ ನನ್ನನ್ನು ಮುಟ್ಟಲಾರ-ನನ್ನ ಅನುಮತಿಯಿಲ್ಲದೆ.

ಅಂತಹ ಸ್ವಾತಂತ್ರ್ಯವನ್ನು ಹೆಣ್ಣೊಬ್ಬಳಲ್ಲಿ ಒಪ್ಪಿಕೊಳ್ಳಲು ಈ ಸಮಾಜ ಇನ್ನೂ ಸಿದ್ಧವಿಲ್ಲ, ಹೆಣ್ಣು ತನಗಿಷ್ಟ ಬಂದ ಯಾವ ಗಂಡಸಿನ ಜೊತೆ ಬೇಕಾದರೂ ಲೈಂಗಿಕ ಕ್ರಿಯೆಯಲ್ಲಿ ತೊಡಗಬಹುದು, ಅವಳ ಮಿತಿಗಳನ್ನು ಅವಳೇ ಹಾಕಿಕೊಳ್ಳುವ ಶಕ್ತಿ ಅವಳಲ್ಲಿದೆ ಎನ್ನುವುದನ್ನು ಒಪ್ಪಲು ಸಿದ್ಧರಿಲ್ಲ ಈ ಜನ.

ನಮ್ಮ ಪ್ರಸಿದ್ಧ ಸಾಹಿತ್ಯರತ್ನರೆಷ್ಟೋ ಮಂದಿ ನನ್ನನ್ನು 'ಜಾರಿ ಬಿದ್ದ ಹೆಣ್ಣು', 'ಕುಲಟೆ' ಎಂದೆಲ್ಲಾ ಕರೆದು ತಮ್ಮ ನಾಲಗೆಯ ತೀಟೆ ತೀರಿಸಿಕೊಂಡಿದ್ದಾರೆ. ಹಾಗೆ ಕರೆದು ತಾವೆಂಥಾ ಹೀನ ಹೊಲಸು ಪುರುಷಪ್ರಧಾನ ಸಂಪ್ರದಾಯದ ಪಟ್ಟಮಣಿಗಳು ಎಂಬುದನ್ನು ಸಾಬೀತುಗೊಳಿಸಿದ್ದಾರೆ. 'ಜಾರಿ ಬಿದ್ದ ಹೆಣ್ಣ'ನ್ನು ತಮ್ಮ ದೇಹದ ತೀಟೆ ತೀರಿಸಿಕೊಳ್ಳಲು ಉಪಯೋಗಿಸಿಕೊಂಡವರೇ ನಂತರ ನಾಲಗೆಯ ತೀಟೆಯನ್ನು ತೀರಿಸಿಕೊಳ್ಳಲೂ ಉಪಯೋಗಿಸಿಕೊಳ್ಳುತ್ತಾರೆ. ಹೆಣ್ಣನ್ನು ಲೈಂಗಿಕ ದಾಸಿಯನ್ನಾಗಿ ಉಪಯೋಗಿಸುವ ಸಂಪ್ರದಾಯವೇನೂ ಹೊಸತಲ್ಲ,

ನನ್ನ ಆತ್ಮಕಥನದ ಇದೇ ಕೃತಿಯಲ್ಲಿ ಪುರುಷಪ್ರಧಾನ

ಎಲ್ಲಿಯೂ ಮನೆಯಿಲ್ಲದವಳು

ಸಂಪ್ರದಾಯದ ವಿರುದ್ಧ ನನ್ನ ವೈಯುಕ್ತಿಕ ಹೋರಾಟದ ಬಗ್ಗೆ ನಾನು ಮಾತಾಡಿದ್ದೇನೆ. ಹೆಂಗಸರ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆಯೂ ಬರೆದಿದ್ದೇನೆ. ಅದ್ಯಾವುದೂ ಜನರ ಗಮನ ಸೆಳೆದಂತೆ ಕಾಣೆ. ಕಂಡಿರುವುದು ಒಂದೇ. ಗಂಡಸರೊಂದಿಗಿನ ನನ್ನ ಸಂಬಂಧಗಳು. ಗಂಡುಪ್ರಧಾನ ಸಮಾಜದಲ್ಲಿ ಹೆಣ್ಣೊಬ್ಬಳ ಲೈಂಗಿಕತೆ ಹೇಗೆ ಕ್ರೂರವಾಗಿ, ಗುಟ್ಟಾಗಿ ಮತ್ತು ಅನ್ಯಾಯವಾಗಿ ದಮನಿಸಲ್ಪಡುತ್ತದೆ ಅನ್ನುವುದರ ಬಗ್ಗೆ ನಾನು ಧೈರ್ಯವಾಗಿ ಬಾಯಿ ಬಿಟ್ಟಿದ್ದು ಮಾತ್ರ ಅವರ ಗಮನಕ್ಕೆ ಬಂದಿದೆ.

ಗಂಡಸಿನ ಅಧಿಕಾರಕ್ಕೆ ಸವಾಲಾಗಿ ನಿಂತು ತನ್ನ ಸ್ವಾತಂತ್ರ್ಯಕ್ಕೆ ಹೊಡೆದಾಡುವ ಪ್ರತೀ ಒಬ್ಬ ಹೆಂಗಸೂ 'ಜಾರಿ ಬಿದ್ದವಳು' ಎಂದೆನಿಸಿಕೊಳ್ಳುತ್ತಾಳೆ ಎನ್ನುವುದು ಪ್ರಪಂಚದ ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಕೆಲವು ವರ್ಷಗಳ ಹಿಂದೆ ನನ್ನ ಕೃತಿ 'ಕೀಳು ಹೆಣ್ಣಿನ ಕೀಳು ಕಥನ' ಮುನ್ನುಡಿಯಲ್ಲಿ' ಕೀಳು ಹೆಣ್ಣು ಎಂದೆನಿಸಿಕೊಳ್ಳಲು ನನಗೆ ಹೆಮ್ಮೆ' ಎಂದು ಬರೆದಿದ್ದೆ. ಯಾಕೆಂದರೆ ನನಗೆ ಗೊತ್ತು, ಕುಲಟೆ' ಎಂದು ಕರೆಯಲ್ಪಡುವ ಪ್ರತೀ ಹೆಣ್ಣು ತನ್ನನ್ನು ಎತ್ತರಿಸುವ ಸಮಾಜ, ಧರ್ಮ, ಸರ್ಕಾರಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಸೆಡ್ಡು ಹೊಡೆದು ನಿಂತವಳು, ತನ್ನ ಹಕ್ಕುಗಳ ಬಗ್ಗೆ ಸ್ವಲ್ಪವಾದರೂ ಅರಿವು ಉಳ್ಳವಳು ಎಂದು. ಶುದ್ಧವಾಗಿ, ಪ್ರಾಮಾಣಿಕವಾಗಿ ಇರಬಯಸುವ ಪ್ರತಿಯೊಬ್ಬಳೂ 'ಜಾರಿ ಬಿದ್ದ'ವಳಾಗುವುದು ಅನಿವಾರ್ಯ ಎಂದೆನಿಸುತ್ತದೆ. ಹಾಗೆ ಕರೆಸಿಕೊಂಡಾಗ ಅವಳು ಸ್ವಲ್ಪ ಮಟ್ಟಿಗಾದರೂ ಸಾಮಾಜಿಕ ಬೇಡಿಗಳಿಂದ ಮುಕ್ತಳು. ಜಾರಿ ಬಿದ್ದ'ವಳು ನಿಜವಾದ ಅಕಳಂಕಿತ ಮಾನವಿ. ಸ್ವಾತಂತ್ರ್ಯದ ಇಚ್ಛೆ ಇರುವವಳು, ನಿಜವಾದ ಅರ್ಥದಲ್ಲಿ ಮನುಷಿಯಾಗಬಯಸುವವಳು ಈ ಹಣೆಪಟ್ಟಿಯನ್ನು ಪಡೆದುಕೊಳ್ಳುವುದು ಅನಿವಾರ್ಯ ಎನ್ನುವುದು ನನ್ನ ಪ್ರಾಮಾಣಿಕ ನಂಬಿಕೆ. ಯಾಕೆಂದರೆ ಜಾರಿ ಬಿದ್ದಿರುವುದು ಅವಳಲ್ಲ, ಸಮಾಜ. ಅಂಥ ರೋಗಗ್ರಸ್ತ ಸಮಾಜ ಕೊಡುವ ಈ ಹಣೆಪಟ್ಟಿ ಅವಳ ಪಾಲಿಗೆ ಬಿರುದಾಗಬೇಕು. ನನಗೆ ಈವರೆಗೆ ಸಿಕ್ಕಿರುವ ಹಲವು ಸನ್ಮಾನಗಳಲ್ಲಿ ಈ ಸನ್ಮಾನ ಅತಿ ದೊಡ್ಡದು. ನಾನು ಪ್ರಾಮಾಣಿಕವಾಗಿ ಬದುಕಿದ್ದೇನೆ ಎನ್ನುವುದಕ್ಕೆ ಅದು ಸಾಕ್ಷಿ. ಕೊಳೆತು ನಾರುತ್ತಿರುವ ಈ ಗಂಡುಪ್ರಧಾನ ಸಮಾಜಕ್ಕೆ ನಾನು ಕೊಟ್ಟಿರುವ ಮಾರಕ ಹೊಡೆತದ ಗುರುತು ಅದು. ಈ ಗುರುತು ನಾನು ಪರಹಗಾರ್ತಿಯಾಗಿ, ಹೆಣ್ಣಾಗಿ, ನಾನು ನಾನಾಗಿರಬೇಕೆಂದು ಹೊಡಬಾಳು ಹತ್ತಿದ ಹಲವು ವರ್ಷಗಳ ನಿಜ ಪ್ರಮಾಣ.

ಬಾಂಗ್ಲಾದೇಶದ ಲೇಖಕರೊಬ್ಬರು 'ದ್ವಿಖಂಡಿತೊ' ಪ್ರಕಟವಾದಾಗ ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಅಷ್ಟರಿಂದಲೂ ತೃಪ್ತರಾಗದೇ, ನನ್ನ ಎಲ್ಲಾ ಪುಸ್ತಕಗಳ ಮೇಲೆ ನಿಷೇಧವನ್ನು ಹೇರಬೇಕೆಂದೂ ಒತ್ತಾಯಿಸಿದ್ದಾರೆ. ಲೇಖಕರಾಗಿಯೂ ಇನ್ನೊಬ್ಬ ಲೇಖಕಿಯ ಕೃತಿಗಳನ್ನು ಬಹಿಷ್ಕರಿಸಬೇಕೆಂಬ ಇವರ ವಾದ ನನ್ನಲ್ಲಿ ಆಶ್ಚರ್ಯವನ್ನು ಮೂಡಿಸಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಕೊರೆಯುವ ಇವರು ಕಾರ್ಯದಲ್ಲಿ ಮಾತ್ರ ಅಪ್ಪಟ ಮೂಲಭೂತವಾದಿಗಳು. ವೋಲ್ಟೇರನ ಮಾತುಗಳು ನೆನಪಾಗುತ್ತಿವೆ: "ನಿನ್ನ ಅಭಿಪ್ರಾಯಗಳನ್ನು ನಾನು ಒಪ್ಪದಿರಬಹುದು. ಆದರೆ ಅವುಗಳ ಅಭಿವ್ಯಕ್ತಿಸುವ ನಿನ್ನ ಹಕ್ಕಿಗೆ ನಾನು ಹೋರಾಡಲು ಸಿದ್ಧ" ನಾನು ನಂಬುವುದೂ ಅದನ್ನೇ.

ಹಲವರು ತಮ್ಮ ಬದುಕಿನ ಬಗ್ಗೆ ಬರೆದಿದ್ದಾರೆ. ಅವರು ಸಂತರಿರಲಿ, ಯಾರೇ ಇರಲಿ, ಮಾನವ ಬದುಕೆಂದ ಮೇಲೆ ಅದರಲ್ಲಿ ತಪ್ಪು ಒಪ್ಪುಗಳು, ಕಪ್ಪು ಗುರುತುಗಳು, ಮುಳ್ಳು ಮೊನೆಗಳು ಇಲ್ಲದಿರಲು ಹೇಗೆ ಸಾಧ್ಯ? ಅಗಸ್ಟಿನ್ ಎಂಬ ಸಂತ (335-430) ತನ್ನ ಆತ್ಮಕಥನದಲ್ಲಿ ತನ್ನ ಅಲ್ಪೇರಿಯದ ಅಶಿಸ್ತಿನ, ಅನೈತಿಕ ಯೌವನದ ದಿನಗಳನ್ನು, ತನಗೊಬ್ಬ ಅನೈತಿಕ ಸಂಬಂಧದಿಂದ ಹುಟ್ಟಿದ ಮಗನಿದ್ದ ಎಂಬುದನ್ನೂ ಸಹ ದಾಖಲಿಸುತ್ತಾ ಹೋಗುತ್ತಾನೆ. ತನ್ನ ಬ್ರಹ್ಮಚರ್ಯದ ಪರೀಕ್ಷೆಗೆ ಹೆಂಗಸರನ್ನು ತನ್ನ ಹಾಸಿಗೆಯಲ್ಲಿಯೇ ಮಲಗಿಸಿಕೊಂಡ ಗಾಂಧೀಜಿಯ ಉದಾಹರಣೆಯೇ ಇದೆಯಲ್ಲ? ಜಾನ್ ಜಕ್ ರೂಸೋ (1712-1774) ಸಹ ತನ್ನ 'ಕನ್ಫೆಶನ್ಸ್' ಕೃತಿಯಲ್ಲಿ ಯಾವ ಎಗ್ಗಿಲ್ಲದೇ ತನ್ನ ಬದುಕಿನ ಪ್ರತಿಯೊಂದೂ ಘಟನೆಯನ್ನು ಬಿತ್ತರಿಸುತ್ತಾನೆ. ಬೆಂಜಮಿನ್ ಫ್ರಾಂಕ್ಲಿನ್ (1709-1790) ತನ್ನ ಜಾರಪುತ್ರನನ್ನು ಹೇಗೆ ಬೆಳೆಸಿದೆ ಎನ್ನುವುದನ್ನು ವರದಿ ಮಾಡುತ್ತಾನೆ. ಬರ್ಟ್ರಂಡ್ ರಸೆಲ್ ಮತ್ತು ಟಾಲ್‌ಸ್ಟಾಯ್ ಸಹ ಹೀಗೆಯೇ ಪ್ರಾಮಾಣಿಕವಾಗಿ ಬರೆದವರು. ಸಮಾಜಕ್ಕೆ ಒಪ್ಪಿಗೆಯಾಗದ ಈ ವಿಷಯಗಳ ಬಗ್ಗೆ ಗೊತ್ತಿದ್ದರೂ ಸಹ ಅವರೇಕೆ ಬರೆದರು? ಈ ಘಟನೆಗಳು ಅವರ ಜೀವನದ ಮುಖ್ಯ ಭಾಗಗಳು ಅಂತ? ಓದುಗರಿಗೆ ತಮ್ಮ ಅಂತರಂಗದ ಬದುಕು ತಿಳಿಯಲಿ ಅಂತ? ಅದರಿಂದಾಗಿ ಯಾರೂ ತುಚ್ಛೀಕರಿಸುವುದಿಲ್ಲ? ಅಂತರಂಗವನ್ನು ಬಿಚ್ಚಿಟ್ಟಿದ್ದರೂ ಅವರು ಮಾತ್ರ ಹೇಗೆ ಹಿಂದೆಗಿಂತಲೂ ಎತ್ತರದ ಸ್ಥಾನವನ್ನು ಪಡೆದು ಕೊಳ್ಳುತ್ತಾರೆ? ಕ್ಯಾಥರೀನ್ [illegible] ಆತ್ಮಕಥನ ಅರವತ್ತರ ದಶಕದ ಲೈಂಗಿಕ [illegible], ಗಂಡಸರೊಂದಿಗಿನ ಅವಳ ಸಂಬಂಧಗಳನ್ನು ವಿವರವಾದ ಲೈಂಗಿಕ ವರದಿಗಳೊಂದಿಗೆ ಬಿಚ್ಚಿಡುತ್ತದೆ. ಸಾಹಿತ್ಯ ಕೃತಿಗಳ ನಡುವೆ ಅದಕ್ಕೂ ಸ್ಥಾನವಿದೆಯಲ್ಲ? ಮಾರ್ಕ್ವೆಜ್ ಸಹ ತನ್ನ 'ವಿವೀರ್ ಪಾರ ಕಾಂತ್ರಾಲ' ಕೃತಿಯಲ್ಲಿ ತನ್ನ ಲೈಂಗಿಕ ಸಂಬಂಧಗಳ ಬಗ್ಗೆ ಮಾತಾಡುತ್ತಾನೆ. ಅವನ ಕೃತಿಯನ್ನು ನಿಷೇಧಿಸಿ ಅಂತ ಯಾರಾದರೂ ನ್ಯಾಯಾಲಯಕ್ಕೆ ಓಡುತ್ತಾರೇನು?

ಎಲ್ಲ ದೇಶಗಳಲ್ಲಿ ಪ್ರಸಿದ್ಧ ವ್ಯಕ್ತಿಗಳ ಜೀವನ ಕಥನಗಳು ಬರೆಯಲ್ಪಡುತ್ತವೆ. ವರ್ಷಗಟ್ಟಲೆ ಸಂಶೋಧನೆ ನಡೆಸಿ ಸಂಬಂಧಪಟ್ಟ ಬದುಕಿನ ಬೇರೆ ಬೇರೆ ಆಯಾಮಗಳು ದಾಖಲಿಸಲ್ಪಡುತ್ತವೆ. ತೀರಾ ಆಪ್ತವಾದ ವಿವರಗಳೂ ಬೆಳಕಿಗೆ ಬರುತ್ತವೆ. ರವೀಂದ್ರನಾಥ ಟಾಗೂರರ ಉದಾಹರಣೆಯನ್ನೇ ತೆಗೆದುಕೊಳ್ಳಿ, ಬಾಲ್ಯ ವಿವಾಹವನ್ನು ಸ್ಪಷ್ಟವಾಗಿ ಖಂಡಿಸಿಯೂ ಅವರೇಕೆ ತಮ್ಮ ಅಪ್ರಾಪ್ತ ವಯಸ್ಸಿನ ಮಗಳ ಮದುವೆಗೆ ಅನುಮತಿಯನ್ನಿತ್ತರು? ಉತ್ತರ ನಮಗೆ ಗೊತ್ತು. ಆದರೆ ಮುಖ್ಯ ಪ್ರಶ್ನೆ ಇದು: ಓದುಗರಿಗೆ ಅದನ್ನು ಕಟ್ಟಿಕೊಂಡು ಏನಾಗಬೇಕಾಗಿದೆ? ಸಂಶೋಧನೆ ನಡೆಸುವವರು ಯಾಕೆ ಜಾಲಾಡಿ ಈ ವಿವರಗಳನ್ನೆಲ್ಲ ಹೆಕ್ಕಿ ತೆಗೆಯುತ್ತಾರೆ? ಯಾಕೆಂದರೆ ಈ ವಿವರಗಳ ಬೆಳಕಲ್ಲಿ ಲೇಖಕರನ್ನು ಅವರ ಕೃತಿಗಳನ್ನು ಹೊಸತಾಗಿ, ಆಪ್ತವಾಗಿ ಅರ್ಥ ಮಾಡಿಕೊಳ್ಳಬಹುದು ಎಂದೆ?

ಅನೇಕ ಬೆಂಗಾಲಿ ಲೇಖಕರು ಹೆಂಗಸರೊಂದಿಗೆ ಚೆಲ್ಲಾಟ ನಡೆಸಲು ಬಯಸುತ್ತಾರೆ. ಅವರ ಆತ್ಮಕಥನಗಳಲ್ಲಿ ಅದರ ಬಗ್ಗೆ ಒಂದು ಮಾತನ್ನೂ ಆಡದಿರಬಹುದು. ಆದರೆ ಇನ್ನಿತರ ಕೃತಿಗಳಲ್ಲಿ ಅವರೇ ಸೃಷ್ಟಿಸುವ ಪಾತ್ರಗಳು ಈ ರೀತಿಯ ಚೆಲ್ಲಾಟವನ್ನು ಯಾವ ಎಗ್ಗಿಲ್ಲದೇ ನಡೆಸುತ್ತವೆ. ಅದರ ಬಗ್ಗೆ ಯಾರೂ ಚಕಾರವೆತ್ತುವುದಿಲ್ಲ, ಆದರೆ ಹೆಣ್ಣೊಬ್ಬಳು ಲೈಂಗಿಕತೆಯ ಬಗ್ಗೆ ತನ್ನ ಸಾಹಿತ್ಯ ಕೃತಿಗಳಲ್ಲಾಗಲಿ, ಆತ್ಮಕಥನದಲ್ಲಾಗಲೀ ಮಾತೆತ್ತಿದರೂ ತಪ್ಪು, ಲೈಂಗಿಕತೆ ಎನ್ನುವುದು ಗಂಡಸಿನ ಸವಲತ್ತು, ಅವನ ಪುರಾತನ ಪಿತ್ರಾರ್ಜಿತ ಸ್ವತ್ತು, ನಾನು ಒಬ್ಬ ಗಂಡಸಿನಂತೆ ಬರೆಯಬಾರದು. ವಿವೇಚನೆಯಿಂದ ಬರೆಯಬೇಕು. ಎಷ್ಟೆಂದರೂ ನಾನು ಹೆಣ್ಣಲ್ಲವೆ? ಹೆಣ್ಣಿನ ದೇಹದ ಬಗ್ಗೆ ಬರೆಯುವ ಅಧಿಕಾರ ಅವನಿಗೆ ಮಾತ್ರ. ಅವಳ ತೊಡೆ, ಮೊಲೆ, ಸೊಂಟ, ಯೋನಿ ಇತ್ಯಾದಿ ವರ್ಣನೆ ಅವನ ಆಸ್ತಿ, ಹೆಣ್ಣಿಗೇಕೆ ಅದರ ಉಸಾಬರಿ? ನನಗೆ ಕೊಟ್ಟಿಲ್ಲದ ಸವಲತ್ತುಗಳಿಗೆ ಬಾಯಿ ಬಿಡಬಾರದು. ಆದರೆ ಈ ಮಿತಿಗಳನ್ನು ಧಿಕ್ಕರಿಸಿ ನನ್ನ ಸವಲತ್ತನ್ನು ಪಡೆದುಕೊಂಡು ಬಿಟ್ಟೆನಲ್ಲ! ದೇಹದ ಬಗ್ಗೆ ಬರೆದ ತೀವ್ರವಾದ, ವಿಷಾದದ ಕಥನಗಳಾಗಿದ್ದರೂ ಸಹ ನಾನು ಲಕ್ಷ್ಮಣರೇಖೆಯನ್ನು ದಾಟಿದ್ದು ದೊಡ್ಡ ತಪ್ಪು.

ವಿಲಾಸಿತನ ತನಗೆ ಶೋಭೆ ಕೊಡುತ್ತದೆಂಬ ಹಮ್ಮು ಗಂಡಸಿಗೆ. ಹೆಣ್ಣು ತನ್ನ ಲೈಂಗಿಕತೆಯ ಬಗ್ಗೆ ಪ್ರಾಮಾಣಿಕವಾಗಿ ಬರೆದಾಗಲೂ ಅವಳು ಶೀಲಗೆಟ್ಟವಳೆನಿಸಿಕೊಳ್ಳುತ್ತಾಳೆ. ನನ್ನ ಆತ್ಮಕಥನದಲ್ಲಿ ಹೆಣ್ಣೊಬ್ಬಳು ಬರೆಯಬಾರದ ವಿಷಯಗಳ ಬಗ್ಗೆ ಬರೆದು, ತಾವು ಹಾಕಿದ ಮಿತಿಗಳನ್ನು ದಾಟಿ, ಗಬ್ಬೆಬ್ಬಿಸಿಬಿಟ್ಟಳು ಎನ್ನುವುದು ನನ್ನ ಮೇಲಿರುವ ತೀವ್ರ ಅಪವಾದ.

ವ್ಯಕ್ತಿ ವ್ಯಕ್ತಿಗಳ ನಡುವೆ ಹಾಸಿಗೆಯ ಮೇಲೆ ಏನು ನಡೆಯಿತು ಎನ್ನುವುದರ ಬಗ್ಗೆ ಬರೆಯಬಾರದು, ಯಾಕೆಂದರೆ ಅವರ ಪ್ರಕಾರ ಅದು ಅಸಂಗತ, ಅಮುಖ್ಯ. ಆದರೆ ನನ್ನ ವ್ಯಕ್ತಿತ್ವ ಅಲ್ಲಿ ಏನು ನಡೆಯಿತು ಎನ್ನುವುದರಿಂದಲೇ ರೂಪಿಸಲ್ಪಟ್ಟಿದ್ದರೆ ಅಮುಖ್ಯ ಎನ್ನುವ ಢೋಂಗಿತನಕ್ಕೆ ನಾನೇಕೆ ಒಪ್ಪಿಸಿಕೊಳ್ಳಬೇಕು? ನನ್ನ ನಂಬಿಕೆ, ಅಪನಂಬಿಕೆಗಳು, ಆಚಾರ ವಿಚಾರಗಳು, ನನ್ನತನ ಎಲ್ಲವೂ ಅದರ ಮೇಲೆಯೇ ಕಟ್ಟಲ್ಪಟ್ಟದ್ದು. ಇಂದಿನ ತಸ್ಲೀಮ ಪಳಗಿಸಿದ ಅಪ್ಪಟ ಗೃಹಿಣಿಯಾಗದೇ ತೀವ್ರವಾಗಿ ತುಡಿಯುವ, ಸ್ಪಷ್ಟವಾಗಿ ವಿರೋಧಿಸುವ, ಸವಾಲಾಗಿ ನಿಲ್ಲುವ ಪೋರಿಯಾಗಿದ್ದರೆ ಅದು ಅವಳ ಸುತ್ತಲ ಪ್ರಪಂಚ ಅವಳನ್ನು ಕಣಕಣವಾಗಿ ರೂಪಿಸಿದ್ದರ ಫಲ.

'ಬೇಕಿದ್ದರೆ ನಿನ್ನ ಹೆಸರನ್ನು ಹಾಳು ಮಾಡಿಕೋ, ನಮ್ಮ ಹೆಸರನ್ನು ಯಾಕೆ ಬೀದಿಗೆ ತರುತ್ತೀಯಾ?' ಎಂಬುದು ಕೆಲವರ ವಾದ. ನಾನು ಬರೆದಿದ್ದು ನನ್ನ ಬದುಕಿನ ಬಗ್ಗೆ, ತಮ್ಮ ಮರ್ಯಾದೆಯ ಬಗ್ಗೆ ಇಷ್ಟು ಕಾಳಜಿ ಇರುವವರು 'ಮರ್ಯಾದೆಗೆಟ್ಟ' ಕೆಲಸವನ್ನು ಮಾಡಿದ್ದೇಕೆ? ನಂಬಿಕೆದ್ರೋಹ ಮಾಡಿದೆ ಎನ್ನುವುದು ಇನ್ನೊಂದು ಆರೋಪ. ನಾನ್ಯಾರಿಗೂ ಮೌನದ ಆಶ್ವಾಸನೆಯನ್ನೇ ಕೊಟ್ಟಿಲ್ಲವಲ್ಲ? ಅದು ಬರಹದಲ್ಲಿಲ್ಲದ ಆದರೆ ಪಾಲಿಸಲೇಬೇಕಾದ ಕಟ್ಟಳೆ ಎಂದೆಲ್ಲಾ ಹೇಳುತ್ತಾರೆ. ತಮ್ಮ ಹೆಸರಿಗೆ ಎಲ್ಲಿ ಧಕ್ಕೆ ಬರುತ್ತದೋ ಎಂದು ಕಳವಳ ಪಡುವ ಮರ್ಯಾದಸ್ಥರೇ ಈ ಅಲಿಖಿತ ಶಾಸನವನ್ನು ಎತ್ತಿ ಹಿಡಿಯುವವರು. ಇನ್ನೂ ಕೆಲವರು ಬಿಗಿದ ಹುಬ್ಬುಗಂಟಿನಿಂದಲೇ ನನ್ನನ್ನು ಬೆದರಿಸಲು ನೋಡುತ್ತಾರೆ. ನಾನು ಹೇಳಿರುವುದು ನನ್ನ ಮಟ್ಟಿಗೆ ಹೇಳಬಾರದ್ದೂ ಅಲ್ಲ, ಅಶ್ಲೀಲವೂ ಅಲ್ಲ, ಅದೇಕೆ ಈ ಗಂಡಸರಿಗೆ ತಿಳಿಯುವುದಿಲ್ಲ?

ಇಷ್ಟಕ್ಕೂ ಅಶ್ಲೀಲವೆಂದರೇನು, ಮಿತಿ ಎಲ್ಲಿರಬೇಕು ಇತ್ಯಾದಿಗಳನ್ನು ನಿರ್ಧರಿಸುವವರು ಯಾರು? ನನ್ನ ಆತ್ಮಕಥನದಲ್ಲಿ ಏನು ಬರೆಯಬೇಕು, ಏನು ಬರೆಯಬಾರದು, ಎಷ್ಟು ಬರೆಯಬೇಕು ಎನ್ನುವುದು ನಾನು ನಿರ್ಧರಿಸಬೇಕಾದ್ದು. ಯಾರೋ ಮಸೂದ್ ಅಲಿ, ಇನ್ಯಾರೋ ಕೆರಾಮತ್ ಮಿಯಾನ್, ಮತ್ಯಾರೋ ಪರಿತೋಶ್ ಅಥವಾ ಹರಿದಾಸ್ ಪಾಲರಿಂದ ಸೂಚನೆಗಳನ್ನು ಸ್ವೀಕರಿಸಿ ನಾನು ನನ್ನ ಆತ್ಮಕಥನವನ್ನು ಬರೆಯಬೇಕೆ?

ನನ್ನ ಸ್ವಾತಂತ್ರ್ಯವೆಂಬುದು ಸ್ವೇಚ್ಛಾಚಾರಕ್ಕೆ ಕೊಟ್ಟು ಕೊಂಡಿರುವ ಅನುಮತಿ ಎನ್ನುವುದು ವಿಮರ್ಶಕರ ನಿಲುವು. ಯಾಕೆಂದರೆ ನಮ್ಮ ತಪ್ಪು ಒಪ್ಪಿನ, ಪಾಪ ಪುಣ್ಯದ, ರೂಪ ಕುರೂಪದ ಗ್ರಹಿಕೆಗಳೆಲ್ಲವೂ ಸಾವಿರಾರು ವರ್ಷಗಳಿಂದ ಬಂದಿರುವ ಗಂಡುಪ್ರಧಾನ ಸಂಸ್ಕೃತಿಯಿಂದ ತಿದ್ದಲ್ಪಟ್ಟಿರುವಂತವು. ಹೆಣ್ಣಿಗೆ



ತಸ್ಲೀಮಾ ನಸ್ರೀನ್

ಬಾಗಿದ ತಲೆ, ನಾಚಿಕೆ, ಶೀಲ ಇತ್ಯಾದಿಗಳು ಶೋಭೆ ತರುವಂತಹವು ಎಂದು ಸಾರಿರುವುದೂ ಈ ಸಂಸ್ಕೃತಿಯೇ. ಇದೇ ಮೂಸೆಯಲ್ಲಿ ಸಿದ್ಧವಾದ ವಿಮರ್ಶಕರ ಒಪ್ಪಿತ ಗ್ರಹಿಕೆಗಳೂ ಸಹ ಕಟುಸತ್ಯಗಳನ್ನು ಎದುರಿಸಲು ಹೆದರಿ ಜಿಗುಪ್ಸೆಯಿಂದ ಕಿವಿ ಮುಚ್ಚಿಕೊಳ್ಳುತ್ತವೆ; "ಇವಳೂ ಒಬ್ಬ ಲೇಖಕಿಯೆ? ಆತ್ಮಕಥನವನ್ನು ಬರೆಯಲು ಅವಳಿಗೆ ಹಕ್ಕಿದೆಯೆ?". ಎಂದು ಆಕ್ರೋಶದಿಂದ ಕೇಳುತ್ತವೆ.

ಪ್ರತಿಯೊಬ್ಬರಿಗೂ ತಮ್ಮ ಆತ್ಮಕಥನವನ್ನು ಬರೆಯುವ ಹಕ್ಕಿದೆ. ನಾನು ಪೆನ್ನನ್ನು ಕೈಯಲ್ಲಿ ಹಿಡಿದದ್ದೇ ಒಂದು ದೊಡ್ಡ ಅನಾಚಾರ ಎಂದು ಉರಿದು ಬೀಳುವ ಆ ಘನ ವಿಮರ್ಶಕನಿಗೆ ಕೂಡಾ! ನಾನು ಬೇಜವಾಬ್ದಾರಿ ಎಂದು ಮೂಗೆಳೆದವರೂ ಇದ್ದಾರೆ. ಇರಬಹುದೇನೋ. ನಾನು ಅವಿವೇಕಿಯೂ ಇರಬಹುದೇನೋ. ಜಾರ್ಜ್ ಬರ್ನಾಡ್ ಶಾ ಒಮ್ಮೆ ಹೇಳಿದ್ದ: "ವಿವೇಕಿಯಾದವನು ಪ್ರಪಂಚಕ್ಕೆ ಹೊಂದಿ ನಡೆಯುತ್ತಾನೆ. ವಿವೇಕವಿಲ್ಲದವನು ಪ್ರಪಂಚವನ್ನು ತನಗೆ ಅನುಗುಣವಾಗಿ ಬದಲಾಯಿಸಲು ನೋಡುತ್ತಾನೆ. ಪ್ರಪಂಚ ಮುನ್ನಡೆಯುವುದು ಈ ವಿವೇಕವಿಲ್ಲದವರಿಂದಲೇ."

ತಸ್ಲೀಮಾ ನಸ್ರೀನ್ ಆ ಅವಿವೇಕಿಗಳಲ್ಲೊಬ್ಬಳು. ಪ್ರಗತಿ ಎನ್ನುವುದು ನನ್ನನ್ನು ಅವಲಂಬಿಸಿದೆ ಅಂತ ನಾನು ಹೇಳುತ್ತಿಲ್ಲ, ನಾನೊಬ್ಬ ಸಾಮಾನ್ಯ ಲೇಖಕಿ. ವಿವೇಕಿ ಗಂಡಸರ ಕಣ್ಣಲ್ಲಿ ನಾನು ವಿವೇಕಶೂನ್ಯೆ ಎಂಬ ಪಟ್ಟ ಹೊರಲು ನನಗೆ ಹೆಮ್ಮೆ. ಬಾಯಿ ಬಿಗಿದು ಕೂರದೇ ಇದ್ದದ್ದು ನನ್ನ ದೊಡ್ಡ ಮೂರ್ಖತನ." ಇದೇ ಸಮಾಜದೊಂದು ನನ್ನ ವಿರುದ್ಧ ನಿಂತು ಉಗಿದಾಗಲೂ ನನ್ನ ತತ್ವಗಳಿಗೆ ನಾನು ಬದ್ಧಳಾಗಿಯೇ ಇದ್ದೇನೆ. ಗಂಡಸು ಪ್ರಧಾನ ಸಂಸ್ಕೃತಿಯ ಉಪಾಸಕರೆಲ್ಲಾ ನನ್ನನ್ನು ತುಳಿಯಲೆತ್ನಿಸಿದಾಗಲೂ ನಾನು ಧೃಢವಾಗಿ ನಿಂತಿದ್ದೇನೆ. ನನ್ನ ಭೋಳೇತನ, ವಿವೇಕಶೂನ್ಯತೆ, ಅತಾರ್ಕಿಕತೆ ನನ್ನ ಹೆಮ್ಮೆಯ ಸ್ವತ್ತುಗಳು.

ಧರ್ಮದ ಬಗ್ಗೆಯೂ ನಾನು ಬರೆದಿದ್ದೇನೆ. ಧಾರ್ಮಿಕ ಪದ್ಧತಿಗಳ ವಿರುದ್ಧ ನನ್ನ ನಿಲುವು ಏನು ಎನ್ನುವುದು ನನ್ನನ್ನು ಬಲ್ಲವರಿಗೆಲ್ಲ ಗೊತ್ತು. ಧರ್ಮವೆನ್ನುವುದೂ ಆಳವಾಗಿ ಗಂಡಸು ಪ್ರಧಾನ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹುದು. ಧರ್ಮ ಮತ್ತು ಧಾರ್ಮಿಕ ಗ್ರಂಥಗಳ ಹೆಸರಿನಲ್ಲಿ ಪರರ ಮೇಲೆ ದಬ್ಬಾಳಿಕೆ ನಡೆಸುವ ಗಂಡಸರಿಗೆ ನನ್ನ ಧರ್ಮವಿರೋಧಿ ನಿಲುವು ಪಥ್ಯವಾಗಲಾರದು. ಈ ಧರ್ಮಾತ್ಮರೇ ನನ್ನನ್ನು ದೇಶ ಬಿಡುವಂತೆ ಮಾಡಿದ್ದು, ಸತ್ಯಕ್ಕಾಗಿ ನಾನು ತೆತ್ತ ಬೆಲೆ ಇದು. ಇನ್ನೂ ಎಷ್ಟು ತೆರಲಿ?


ಪಶ್ಚಿಮ ಬಂಗಾಳದಂತೆ ಬಾಂಗ್ಲಾ ದೇಶದಲ್ಲಿಯೂ ನನ್ನ ಪುಸ್ತಕಗಳನ್ನು ಬಹಿಷ್ಕರಿಸಲಾಗಿದೆ. ಗಲಭೆಯೆಬ್ಬಿಸಬಹುದು ಎನ್ನುವುದು ಅವರು ಕೊಟ್ಟಿರುವ ಕಾರಣ. ದಕ್ಷಿಣ ಏಶಿಯಾದುದ್ದಕ್ಕೂ ಸುಡುತ್ತಿರುವ ಕೋಮು ಪರಿಸ್ಥಿತಿ ನನ್ನ ಪುಸ್ತಕಗಳಿಂದ ಆಗಿದ್ದಲ್ಲ, ಬೇರೆಯೇ ಕಾರಣಗಳಿಂದ. ಬಾಂಗ್ಲಾದೇಶದಲ್ಲಿನ ಅಲ್ಪಸಂಖ್ಯಾತರ ಮೇಲಿನ ಚಿತ್ರಹಿಂಸೆ, ಗುಜರಾತಿನ ಮುಸ್ಲಿಮರ ಹತ್ಯೆ, ಅಸ್ಸಾಮಿನ ಬಿಹಾರಿಗಳ ಮೇಲಿನ ದೌರ್ಜನ್ಯ, ಕ್ರಿಶ್ಚಿಯನ್ನರ ಮೇಲಿನ ಧಾಳಿ, ಪಾಕಿಸ್ತಾನದ ಶಿಯಾ-ಸುನ್ನಿ ನಡುವಿನ ಸಂಘರ್ಷ ಇವ್ಯಾವುದರಲ್ಲೂ ನನ್ನ ಪುಸ್ತಕಗಳ ಪಾಲು ಒಂದಿಷ್ಟೂ ಇಲ್ಲ, ಸಾಮಾನ್ಯ ಲೇಖಕಿಯಾದರೂ ನಾನು ಬರೆಯುವುದು ಮಾನವೀಯತೆಯನ್ನು ಎತ್ತಿ ಹಿಡಿಯಲಿಕ್ಕೆ. ಪ್ರತೀ ಮಾನವಜೀವಿಗೆ ಬದುಕುವ ಹಕ್ಕಿದೆ, ಬಣ್ಣ, ಧರ್ಮ, ಲಿಂಗದ ಆಧಾರದ ಮೇಲೆ ತಾರತಮ್ಯ ನಡೆಸುವ ಹಕ್ಕು ಯಾರಿಗೂ ಇಲ್ಲ ಎನ್ನುವುದು ನನ್ನ ಹೃದಯಾಂತರಾಳದ ನಿಲುವು. ಗಲಭೆಗಳು ಹುಟ್ಟಿದ್ದು ನನ್ನ ಲೇಖನಿಯಿಂದ ಅಲ್ಲವಾದರೂ ಸಹ ಬರೆದಿದ್ದಕ್ಕೆ ಶಿಕ್ಷಿಸಲ್ಪಟ್ಟವಳು ನಾನು. ಮನೆ ಹತ್ತಿ ಉರಿಯುತ್ತಿದೆ. ಮನೆಯಿಂದ ಗಡೀಪಾರು ಮಾಡಲ್ಪಟ್ಟವಳು ನಾನು. ಎಲ್ಲಿಯೂ ಮನೆಯಿಲ್ಲದವಳು. ●

ಟಿಪ್ಪಣಿ

'ದ್ವಿಖಂಡಿತೊ' ಮೇಲೆ ಪಶ್ಚಿಮ ಬಂಗಾಳ ಸರ್ಕಾರ ನವೆಂಬರ್ 27, 2003 ರಂದು ನಿಷೇಧ ಹೇರಿದಾಗ ತಸ್ಲೀಮಾ ಅವರ ಪ್ರತಿಕ್ರಿಯೆ ಈ ಲೇಖನ. ಅವರ 'ಲಜ್ಜಾ' ಕೃತಿಯನ್ನು ತಾಯ್ನಾಡು ಬಾಂಗ್ಲಾ ದೇಶದಲ್ಲಿ ಬಹಿಷ್ಕರಿಸಲಾಗಿತ್ತು. ಮೂಲಭೂತವಾದಿ ಸಂಸ್ಥೆಗಳಿಂದ ಕೊಲೆ ಬೆದರಿಕೆಯನ್ನು ಎದುರಿಸುತ್ತಿದ್ದ ತಸ್ಲೀಮಾರ ಸಹಾಯಕ್ಕೆ ಸರ್ಕಾರ ಬರಲಿಲ್ಲ, ತಸ್ಲೀಮಾ ದೇಶ ತೊರೆಯಬೇಕಾಯಿತು. ಸದ್ಯಕ್ಕೆ ಅಮೆರಿಕಾದಲ್ಲಿ ವಾಸ.

-'ದೇಶ್' ಪತ್ರಿಕೆಯಲ್ಲಿ ಡಿಸೆಂಬರ್ 17, 2003 ರಲ್ಲಿಪ್ರಕಟವಾದ 'ಶೋಕೊಲ್ ಗೃಹ ಹರಾಲೊ ಜರ್' ಬರಹವನ್ನು ಇಂಗ್ಲೀಷಿಗೆ ಅನುವಾದಿಸಿದವರು ದೇಬ್ಜಾನಿ ಸೇನ್ ಗುಪ್ತ

ಗೋತಮಿ ಮತ್ತು ತೇಪೆ



ನನ್ನ
ಮನೆಯೆಂಬೋ ಹುಲ್ಲಿನಗೂಡಿಗೆ
ಗೋಣಿಚೀಲ ಹರಿದು
ತೇಪೆ ಹಾಕುತ್ತಿದ್ದೆ

ಗೋತಮಿ
ಬಂದಳು

ಬಿಕ್ಕಳಿಸುತ್ತಾ
ಯಾರಿದ್ದೀರಿ ಮನೆಯೊಳಗೆ
ಅಂದಳು

ಇದು
ಮನೆಯೆಂದಾದರೆ
ಇರುವುದು ನಾನೊಬ್ಬನೇ ಅಂದೆ

ಇಲ್ಲಿ
ಯಾರಾದರೂ ಸತ್ತಿದ್ದಾರೆಯೇ
ಅಂದಳು

ಇಲ್ಲವ್ವಾ
ಇಲ್ಲಿ ಸಾಯಲು
ಹುಟ್ಟಿದವರು ಯಾರೂ ಇಲ್ಲ.
ಬಹುಶಃ ನಾನು
ಇನ್ನೂ
ಸತ್ತಿರಲಾರೆ ಅಂದೆ

ಅವಳ ಮುಖ
ಅರಳಿ
ಒಂದೇ ಉಸಿರಿಗೆ ಕೇಳಿದಳು
"ಹಾಗಾದರೆ
ಸಾವಿಲ್ಲದ ಮನೆಯೇ ಇದು?
ತಂದೆ
ಒಂದಿಷ್ಟು ಸಾಸಿವೆಯ
ಕೊಡುವೆಯಾ.... ನನ್ನ
ಕಂದನ ಉಳಿವಿಗಾಗಿ"

"ನನ್ನೊಳಗಿನ ಹಸಿದ
ಅಸಂಖ್ಯಾತ ಬಿಕ್ಕುಗಳಿಗೆ
ಅನ್ನ ಹವಣಿಸಲು
ಬೀದಿಯಲ್ಲಿ
ಬೊಗಸೆಯೊಡ್ಡಬೇಕು
ತಾಯಿ.... ಇಂಥವನ
ಮನೆಯಲ್ಲಿ ಸಾಸಿವೆಯ
ಎಲ್ಲಿ ತರಲಿ"

ಅವಳು ಕುಸಿದು ಕೂತು
ಗಳಗಳನೆ ಅತ್ತಳು....
ಇದ್ದಕ್ಕಿದ್ದಂಗೆ ಏನೋ
ಬದಲಾದಂತಾಗಿ
ಮೇಲೆದ್ದು ಕಣ್ಣೊರೆಸಿ
ಒಳಗೊಳಗೇ ನಗುತ್ತಾ
ಬುದ್ಧನಲ್ಲಿಗೆ ಓಡಿದಳು....

ಅಕ್ಷರದಲ್ಲಿ ನನ್ನ
ಮನೆಯೆಂಬೋ ಗೂಡಿನ
ಅಷ್ಟಗಲ ತೂತನ್ನು
ಗೋಣಿಚೀಲದ ತುಣುಕೊಂದು
ಮುಚ್ಚಿತ್ತು....

. . . .

ಹುಲಿಕುಂಟೆ ಮೂರ್ತಿ

ಜೀವನವೇ ಜೋಕಾಲಿ, ಆಯ ತಪ್ಪಿದರೆ ಎಲ್ಲವೂ ಖಾಲಿ ಖಾಲಿ -ಬಸವರಾಜ ಬಾಳೇಶ್ವರಮಠ

ಲಂಕೇಶ್


ಟೈಮೇ ಸರಿಯಿಲ್ಲಾ...

ಸಂಪುಟ ವಿಸ್ತರಣೆಗಾಗಿ ಮುಖ್ಯಮಂತ್ರಿಯವರು ತಮ್ಮ ಪಕ್ಷದವರ ಪಟ್ಟಿ ಸಿದ್ಧ ಮಾಡಿ ಇಟ್ಟುಕೊಂಡಿದ್ದಾರೆ. ಉಪಮುಖ್ಯಮಂತ್ರಿಗಳೂ ತಮ್ಮ ಪಕ್ಷದ ಪಟ್ಟಿ ಸಿದ್ಧ ಇದೆ, ಮುಖ್ಯಮಂತ್ರಿಗಳು ವಿಸ್ತರಣಾ ದಿನಾಂಕ ತಿಳಿಸಿದ ತಕ್ಷಣ ನೀಡಲು 'ತಯಾರಿದ್ದೇವೆ ಎಂದು ಹೋದ ಹೋದ ಕಡೆ, ಸಿಕ್ಕಿಸಿಕ್ಕಿದ ಕಡೆಯಲ್ಲ ಹೇಳ್ತಾ ತಿರುಗ್ತಿದಾರೆ. ದೇವೇಗೌಡರ ಸುಪುತ್ರರೂ ಮುಖ್ಯಮಂತ್ರಿಯವರ ಸಹೋದರರೂ ಹಾಗೂ ಮಾಜಿ ಮಂತ್ರಿಗಳೂ ಆದ ಎಚ್.ಡಿ. ರೇವಣ್ಣ ಅವರು, ಜ್ಯೋತಿಷಿಗಳ ಅನುಮತಿ ಇಲ್ಲದೆ ಒಂದು ಹೆಜ್ಜೆಯನ್ನೂ ಇಡದ ತಮ್ಮ ಮನೆತನದ ಸಂಪ್ರದಾಯದಂತೆ, ಜ್ಯೋತಿಷಿಗಳನ್ನು ಸಂಪರ್ಕಿಸಿ ಈ ತಿಂಗಳ ಹದಿನೈದನೇ ತಾರೀಖು ಪ್ರಶಸ್ತವಾಗಿದೆ ಎಂಬುದನ್ನು ತಿಳಿದು ತಮ್ಮ ಸಹೋದರನ ಗಮನಕ್ಕೆ ತಂದಿದ್ದಾರೆ. ಆದರೂ ಸಂಪುಟ ವಿಸ್ತರಣೆ ತೂಗುಯ್ಯಾಲೆಯಲ್ಲೇ ಇದೆ. ಇದಕ್ಕೆ ಕಾರಣ ತಮ್ಮ ಪಕ್ಷದ ಶಾಸಕರು 'ಸಂಪುಟ ವಿಸ್ತರಣೆಗೆ ಈಗ ಟೈಂ ಸರಿಯಿಲ್ಲ' ಎಂಬ ಅಭಿಪ್ರಾಯವನ್ನು ಮುಖ್ಯಮಂತ್ರಿಗಳೊಂದಿಗೆ ಹಂಚಿಕೊಂಡಿರುವುದಂತೆ!

ಯಾರಿಗೆ ಟೈಮು ಸರಿಯಾಗಿಲ್ಲ ಎಂಬುದು ಈಗ ಜನರ ಬಾಯಿಗೆ ಎಲೆ ಅಡಿಕೆಯಾಗಿದೆಯಂತೆ. ಮಂತ್ರಿಗಳಾಗುತ್ತೇವೆ ಎಂದು ನಂಬಿದ್ದವರಿಗೆ ಇದು ಅನ್ವಯಿಸುತ್ತದೆ ಎಂಬುದು ಬಹಳ ಜನರ ಅಭಿಪ್ರಾಯವಾಗಿದೆಯಂತೆ. ಅದೂ ನಿಜವೇ ಇರುವ ಹಾಗೆ ಕಾಣುತ್ತೆ. ಭಾವಿ ಮಂತ್ರಿಗಳಾಗುತ್ತಿದ್ದೇವೆ ಎಂದು ಭಾವಿಸಿದ್ದವರ ಶತ್ರುಗಳು ಚುರುಕಾಗಲು ಅವಕಾಶ ನೀಡಿದಂತಾಗಿದೆ. ನಿಗದಿತ ಸಮಯದಂತೆ ವಿಸ್ತರಣೆ ಆಗಿದ್ದರೆ ಎಂ.ಪಿ. ಪ್ರಕಾಶ್, ಎಚ್.ಡಿ. ರೇವಣ್ಣ ಸಲೀಸಾಗಿ ಮಂತ್ರಿ ಮಹೋದಯರು ಎನ್ನಿಸಿಕೊಳ್ಳುತ್ತಿದ್ದರು. ಈಗ ಆಗಿರುವುದು ನೋಡಿ. ಜ್ಯೋತಿಷಿಗಳನ್ನು ಕೇಳಿ ವಿಸ್ತರಣೆ ದಿನಾಂಕ ಗೊತ್ತುಪಡಿಸಲು ಈ ರೇವಣ್ಣ ಯಾರು? ಜಾತ್ಯತೀತ ಜನತಾದಳದಲ್ಲಿ ಈತನಿಗಿಂತಲೂ ದಕ್ಷರಾದ ಶಾಸಕರೇ ಇಲ್ಲವೆ? ತಮ್ಮ ಮುಖ್ಯಮಂತ್ರಿ, ಅಣ್ಣ ಮಂತ್ರಿ, ತಂದೆ ಇವರ ಆಡಳಿತದ ನಿರ್ದೇಶಕ. ಅಂದರೆ ಇದು ತಂದೆ ಮಕ್ಕಳ ಪಕ್ಷ ಎಂಬ ಆರೋಪಕ್ಕೆ ಅನುರೂಪವಾಗಿಯೇ ಇದೆಯಲ್ಲ ಎಂದು ಮೂಗು ಮುರಿದು ತೊಡರುಗಾಲು ಹಾಕಲು ಅವಕಾಶ ಕಲ್ಪಿಸಿದಂತಾಯಿತು. ಇನ್ನು ಆ ಪಕ್ಷದ ನಾಮ್‌ಕೆವಾಸ್ತೆ ಅಧ್ಯಕ್ಷರ ಸಮಾಚಾರ. ಈ ಹಿಂದೆ ಡಿಸಿಎಂ ಪದವಿ ಬಯಸದೇ ಬಂದ ಭಾಗ್ಯ ಅಂತ ಹಿಗ್ಗಿದ್ದರು. ಈಗ ಅಧಿಕಾರ ಎಂಬ ಮಾಯಾಂಗನೆಯ ಆಕರ್ಷಣೆ ಮೀರುವುದು ಕಷ್ಟ ಎಂಬುದಾಗಿ ಅಲವತ್ತುಕೊಂಡು ತಮ್ಮ ಹಿಂದಿನ 'ಬಯಸದೆ ಬಂದ ಭಾಗ್ಯ' ಮಾತನ್ನು ಮಾರ್ಪಡಿಸಿ ಮಂತ್ರಿ ಪದವಿ ಎಂಬುದು ಕಾಡಿಬೇಡಿ ಪಡೆದ ಸೌಭಾಗ್ಯ ಎಂಬುದಾಗಿ ಹೇಳುತ್ತಾ ಅದಕ್ಕಾಗಿ ಹಲುಬುತ್ತಿದ್ದಾರೆ. ಅದ್ದು ಅಲಾಯಿದ ಇರಲಿ. ಘನತೆ ಗೌರವಗಳನ್ನೆಲ್ಲ ಮರೆತು ಮಾಯಾಂಗನೆಯ ಮೋಹಕ್ಕೆ ಬಲಿಯಾಗಬೇಡಿ ಎಂದು ಬೇರೆ ಜನರು ಇರಲಿ, ಅವರ ಆತ್ಮೀಯರೇ ಪಿಸುಗುಡುತ್ತಿದ್ದಾರಂತೆ. ಮಾನವ ರಕ್ತದ ರುಚಿ ಕಂಡ ಹುಲಿ ಅದು. ಈ ರಕ್ತ ರುಚಿ ಇರುವಂತೆ ಮಾಡಿದ್ದು ಪ್ರಕೃತಿಯ ಅಪರಾಧವೇ ಹೊರತು ಹುಲಿಯದ್ದೇನೂ ತಪ್ಪಿಲ್ಲ ಅನ್ನುವಂತೆ 'ನಾಮ್ ಕೆವಾಸ್ತೆ' ಅಧ್ಯಕ್ಷರು ಬಸವಣ್ಣನವರ ಒಂದು ವಚನ ಹೇಳಿ ಮಂತ್ರಿ ಪದವಿ ದಕ್ಕಿಸಿಕೊಳ್ತಾರೆ ಅನ್ನುವುದು ಖಚಿತವೇ ಆದರೂ ವ್ಯಥಾ ಶ್ರಮ ಅಲ್ಲವಾ. ಮೂರು ತಿಂಗಳಿಂದ ಯಾಕೋ ಇವರ ಟೈಮೇ ಸರಿಯಿಲ್ಲ.

ಜಾತ್ಯತೀತ ಜನತಾದಳದ ಗೋಳು ಈ ರೀತಿಯದ್ದಾದರೆ ಭಾರತೀಯ ಜನತಾ ಪಕ್ಷದವರ ನಡವಳಿಕೆ 'ಬಹಿರಂಗ ಗೋಪ್ಯ' ಆಗಿದೆ. ಪಟ್ಟಿ ರೆಡಿ ಇದೆ ಅಂತಾರೆ, ಗುಪ್ತ ಸಮಾಲೋಚನೆ ನಡೆಸುತ್ತಾರೆ. ನಡುವಯಸ್ಸಿನ ಹೆಣ್ಣು ಮಕ್ಕಳ ಮುಂದಕ್ಕೆ ತರಬೇಕು ಅನ್ನೋದು ಡಿ.ಸಿ.ಎಂ. ನಂಬಿಕೆ. ಆ ವಯಸ್ಸಿನವರೇ ಯಾಕೆ, ವಯಸ್ಸಾದವರು ಬರಲಿ ಅನ್ನೋದು ಮುದಿಯರ, ಅವರಿಗಾಗದವರ ವಾದ. ಶ್ರೀರಾಮಚಂದ್ರನ ಪಕ್ಷದವರ ಈ ಹೊಲಸೆಲ್ಲ ಮಾಧ್ಯಮಗಳಲ್ಲಿ ಬಯಲಾಗುತ್ತಿದ್ದರೆ 'ವರದಿಯಾಗಿರುವುದೆಲ್ಲ ಸುಳ್ಳು' ಎಂಬುದಾಗಿ ಸತ್ಯಹರಿಶ್ಚಂದ್ರನ ಮೊಮ್ಮಗನಂತೆ ಈಶ್ವರಪ್ಪ ಹಾರಾಡ್ತಿದಾರೆ. ಸಂಪುಟ ವಿಸ್ತರಣೆ ಸರಿಯಾದ ಸಮಯಕ್ಕೆ ಆಗಿದ್ದರೆ ಈ ಅನಾಹುತಗಳು ಆಗುತ್ತಲೇ ಇರಲಿಲ್ಲ, ನಡುಪ್ರಾಯದ ಹೆಣ್ಣುಮಗಳನ್ನ ಮಂತ್ರಿ ಕುರ್ಚಿ ಮೇಲೆ ಕೂರಿಸಿ ತನ್ನ ನಿಯತ್ತನ್ನು ಸಾಬೀತುಗೊಳಿಸ ಬಹುದಾಗಿತ್ತು ಯಡಿಯೂರಪ್ಪನವರು. ಈಗ ಅದಕ್ಕೂ ಕಲ್ಲು ಬಿದ್ದಿತು. ಆ ಹೆಣ್ಣು ಮಗಳಿಗೆ ಈ ಕಡೆ ಕುರ್ಚಿಯೂ ಇಲ್ಲ, ಆ ಕಡೆ ಅಪವಾದ ಬೇರೆ... ಛೇ ಆಕೆಯ ಟೈಮೇ ಸರಿ ಇಲ್ಲ!

* * * * * * * * * * * *



ಅಣಕ

ಅಗ್ರಹಾರ ಕೃಷ್ಣಮೂರ್ತಿ ಸುದ್ದಿ ಆಗಿದ್ದಾರೆ.

ಈ ಅಗ್ರಹಾರ, 'ಅಗ್ರಹಾರ'ದ ಗುಂಪಿಗೆ ಸೇರದೇ ಇದ್ದದ್ದು ಮೊದಲನೆ ಅಪರಾಧ! ಪ್ರತಿಭೆ ಎನ್ನುವುದು ಮೇಲ್ವರ್ಗದವರಿಗೆ ಸೇರಿದ್ದು ಎಂಬುದನ್ನು ಅರಿಯದ್ದು ಎರಡನೆ ಅಪರಾಧ!

ಈ ಅಪರಾಧಗಳಿಗೆ ಶಿಕ್ಷೆ ಏನು?

ಸಿಬಿಐ ತನಿಖೆ!

ಅಗ್ರಹಾರ ಮನೆಯ ಮೇಲೆ ಸಿಬಿಐ ದಾಳಿ. ಏನೇನೋ ಸಿಗುತ್ತದೆ ಎಂದು ನಂಬಿದ್ದವರಿಗೆ ಗಾಢವಾದ ನಿರಾಶೆ! ಖಾಲಿ ಶೀಷೆ, ಹಳೆ ಕಾಗದ ಮಾರುವವರ ಮನೆಗೆ ನುಗ್ಗಿದ ಅನುಭವ!

ಹಣ ಇರಲಿಲ್ಲ, ಸಾಧನೆ ಇತ್ತು.

ಇಷ್ಟೇ ಆಗಿದ್ದರೆ ಅಗ್ರಹಾರದ ಮನಸ್ಸುಗಳು ವಿಘ್ನ ಸಂತೋಷ ಅನುಭವಿಸಿ, ಸುಮ್ಮನಾಗುತ್ತಿದ್ದವೋ ಏನೋ. ಆದರೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಸ್ಥಾನಕ್ಕೆ ಆಯ್ಕೆ ಆದರೆ... ಕುದಿದವು ಆ ಮನಸ್ಸುಗಳು. ಮತ್ತೆ ಆರೋಪ ಹೆಡೆ ಬಿಚ್ಚಿತು!

ದೆಹಲಿಯಿಂದ ಭರತಾದ್ರಿ ಬರೆದರು "ಆಡಳಿತಾತ್ಮಕ ತೊಂದರೆಯಿಂದ ಕೃಷ್ಣಮೂರ್ತಿ ಅವರಿಗೆ ನೇಮಕಾತಿ ಆಜ್ಞೆ ನೀಡಲಾಗಿಲ್ಲ, ಇದರಲ್ಲಿ ಸಾಹಿತ್ಯ ಸಾಂಸ್ಕೃತಿಕ ಲೋಕದ ಯಾರ ಕೈವಾಡವೂ ಇಲ್ಲ" ಕೊನೆಯಲ್ಲಿ ಸೇರಿಸಿದರು- 'ಯಾರು ಕುಬ್ಬರು?'

ಕೃಷ್ಣಮೂರ್ತಿ ಕಾರ್ಯದರ್ಶಿ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ ಎಂದು ತಿಳಿದ ತಕ್ಷಣ ರಾಷ್ಟ್ರೀಯ ಪತ್ರಿಕೆಗಳಲ್ಲಿ ಅವರ ಮೇಲಿನ ಹಿಂದಿನ ಸುಳ್ಳು ಆರೋಪಗಳು ಮತ್ತೆ ಏಕೆ ಪ್ರತಿಧ್ವನಿಸಿದವು? ಇದಕ್ಕೂ ಆಡಳಿತಾತ್ಮಕ ಕಾರಣವೇ ಭರತಾದ್ರಿಜೀ?

ಆರೋಪಗಳು ನಿರಾಧಾರ ಎಂದು ಈಗಾಗಲೇ ತನಿಖಾ ವರದಿಗಳಿಂದ ಸ್ಪಷ್ಟವಾಗಿದೆ. ಆದರೂ ಜ್ಞಾನಪೀಠ ಪ್ರಶಸ್ತಿ ವಿಜೇತ ಯು.ಆರ್. ಅನಂತಮೂರ್ತಿ 'ಸಾಹಿತ್ಯ ಅಕಾಡೆಮಿ ಸ್ವಾಯತ್ತ ಸಮಿತಿ ಆದುದರಿಂದ ಅದೇ ಪ್ರತ್ಯೇಕ ತನಿಖೆ ನಡೆಸಲಿ, ಇದಕ್ಕೆ ನನ್ನದೇನು ಅಭ್ಯಂತರ ಇಲ್ಲ ಎಂದು ಕೃಷ್ಣಮೂರ್ತಿ ಹೇಳಲಿ' ಎಂಬುದಾಗಿ ಎಂದಿನಂತೆ ಘನವಾದ ಅಭಿಪ್ರಾಯ ನೀಡುವುದರ ಮೂಲಕ ತಮ್ಮ 'ಅನಂತ' ಮುಖಗಳ ದರ್ಶನ ನೀಡಿದ್ದಾರೆ!

ರಾಜ್ಯಸಭೆ ಚುನಾವಣೆ ಅಭ್ಯರ್ಥಿಯಾಗಿದ್ದಾಗ ಇದೇ ಮೂರ್ತಿಯವರು ಚಂಪಾ ಅವರನ್ನು 'ಚೇಳು' ಎಂದು ಉದ್ಘೋಷಿಸಿದ್ದರು. ತಮ್ಮ ಘೋಷಣೆಯನ್ನೇ ಮಾದರಿಯನ್ನಾಗಿಟ್ಟುಕೊಂಡ ನಾವು ಈ ರೀತಿಯ ಕೊಳಕು ಮನಸ್ಸಿನ ತಮ್ಮನ್ನು 'ಕೊಳಕು ಮಂಡಲ' ಎಂದು ಕರೆಯಬಹುದೇ!?

ಮತ್ತೆ ಭರತಾದ್ರಿಯವರಿಗೆ- 'ಈಗ ತಿಳಿಯಿತೆ ಸ್ವಾಮಿ ಯಾರು ಕುಬ್ಬರು ಎಂಬುದು?'

ಮುಖ್ಯಮಂತ್ರಿಯವರ ಭಾಷೆಯನ್ನು ಬಳಸುವುದಾದರೆ ಈಗ ಅಗ್ರಹಾರ ಟೈಮ್ ಚೆನ್ನಾಗಿಲ್ಲ, ಒಂದು ವೇಳೆ ಅವರು ಕಾರ್ಯದರ್ಶಿಯಾಗಿ ಆಯ್ಕೆ ಆದರೆ.... ನಿಮ್ಮ ಟೈಮು... ಅದು ಬಿಡಿ, ಆಗಲೂ ನಿಮಗೆ ಚೆನ್ನಾಗೇ ಇರುತ್ತೆ. ಯಾಕೆ ಅಂದರೆ ಆಗ ವಂದಿಮಾಗದರು ಆಗುವವರಲ್ಲಿ ನೀವೇ ಪ್ರಮುಖರು ಅಂತ ಗೊತ್ತಿರುವುದೇ ಬಿಡಿ!

* * * * * * * * * * * *

ಖರ್ಗೆ ಅವರ ಟೈಮು ಸರಿಯಿಲ್ಲ, ಅಕ್ರಮ ಗಣಿಗಾರರನ್ನು ಗಲ್ಲಿಗೇರಿಸಿ ಎಂದು ಹೇಳಿದರೆ ಚೆನ್ನಿಗಪ್ಪ ಅವರನ್ನೇ ಗಲ್ಲಿಗೇರಿಸುವ ಯೋಜನೆ ಹಾಕಿರುವವರಂತೆ ಮಾತನಾಡುತ್ತಾರೆ. ಅಲ್ಲ ಆಸ್ತಿ ಎಲ್ಲಾನೂ ಸಿಬಿಐ ತನಿಖೆಗೆ ಒಳಪಡಿಸಿ ಅಂತ ಹೇಳಿದರೆ ಅದು ಒಂದು ರೀತೀಲಿ ಗಲ್ಲಿಗೇರಿಸಿದ ಹಾಗೆ ಅಲ್ಲವಾ. ಅಂದಹಾಗೆ ಮಾನ್ಯ ಮಂತ್ರಿಗಳ ಆಸ್ತಿಯನ್ನು ತನಿಖೆಗೆ ಒಳಪಡಿಸಬಹುದಾ ಅಂದರೆ ಮಾಡಲಿ, ನನ್ನ ಸಮಸ್ತ ಆಸ್ತಿಯನ್ನು ಅನಾಥ ಆಶ್ರಮಕ್ಕೆ ಬರೆದು ಕೊಟ್ಟಿದ್ದೀನಿ ಅಂತಾರೆ ಅವರು. ಎಂಥಾ ಕೆಲಸ ಮಾಡಿದಾರೆ ಮಾನ್ಯ ಮಂತ್ರಿಗಳು, ಅವರ ಹೆಂಡತಿ ಮಕ್ಕಳ ಗತಿ ಏನು ಅಂತ ಪೇಚಾಡಿಕೊಳ್ಳಬೇಡಿ. ಯಾಕೆ ಅಂದರೆ ಅನಾಥಾಶ್ರಮದ ಫಲಾನುಭವಿಗಳು... ಅವರೇ ಅಂತೆ!

ಛೆ ಎಂತಹ ಅನಾಥಪ್ರೇಮ ಏನು ಕಥೆ!

-ಎಚ್.ಎಲ್. ಕೇಶವಮೂರ್ತಿ

ನಕ್ಸಲೀಯನೆಂಬ ಹಣೆಪಟ್ಟಿ ಕಟ್ಟಿಯಾರು!

"ಈ ರಾಜಕೀಯದವ್ರು ಕಳ್ಳಸೂಳೆಮಕ್ಳು... ಬಂದಿನ್ನೂ ಆರ್ತಿಂಗ್ಳಾಗಿಲ್ಲ ಆಗ್ಲೇ ಟ್ರಾನ್ಸ್‌ಫರ್ ಮಾಡ್ಸವ್ರೆ. ಇವರಿಗೇನು ಹೊತ್ತು ಬಂದಿತ್ತು? ಏನೋ ಜನರಿಗೆ ಒಂದಿಷ್ಟು ಅನುಕೂಲ ಆಗ್ತಹುದು. ಒಳ್ಳೇ ಅಧಿಕಾರಿ ಬಂದವ್ರೆ ಅಂತಾ ಸಮಾಧಾನ ಪಡುವಷ್ಟರಲ್ಲಿ ಕಳಿಸೇಬಿಡೋದಾ? ಅಂತೂ ಒಳ್ಳೆಯವರಿಗೆ ಕಾಲ ಇಲ್ಲ..."



ಏ. 28 ರಂದು ಮಟಮಟ ಮಧ್ಯಾಹ್ನ 12.15 ರ ಸಮಯದಲ್ಲಿ ಚಿಕ್ಕಮಗಳೂರು ಎಸ್ಪಿ ಕಛೇರಿಯಿಂದ ಹೊರಬರುತ್ತಿದ್ದ 98 ರ ಹರೆಯದ ವೃದ್ಧರೊಬ್ಬರು ಎಸ್ಪಿ ಮಧುಕರ ಶೆಟ್ಟಿಯ ವರ್ಗಾವಣೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ ನಿಡುಸುಯ್ದು ಬಗೆಯಿದು. ಆತನ ಹೆಸರು ಗುಂಡೂರಾವ್.

ಎಸ್ಪೀ ಮಧುಕರ ಶೆಟ್ಟಿಯವರ ಕರ್ತವ್ಯ ನಿಷ್ಠೆ ಜನಪರ ಕಾಳಜಿಗಳ ಕುರಿತು ಪತ್ರಿಕೆಗಳಲ್ಲಿ ಮಾತ್ರ ಓದಿ ತಿಳಿದಿದ್ದ ಆತ ಮಧುಕರ ಶೆಟ್ಟಿಯ ವರ್ಗಾವಣೆ ವಿಷಯ ತಿಳಿದು ಊರಬಿಡುವ ಮುನ್ನ ಖುದ್ದಾಗಿ ಭೇಟಿ ಮಾಡಲೇಬೇಕೆಂದು ಬಂದಿದ್ದರು. ಎಸ್ಪಿಯವರು ಏನು ಮಾತನಾಡಿದರೋ ಏನೋ ಎಸ್ಪೀ ಛೇಂಬರಿನಿಂದ ಹೊರಬಂದಾಗ ನಿಟ್ಟುಸಿರು ಬಿಟ್ಟರು.

ಬಿಳಿ ಅಂಗಿ, ಪಂಚೆ, ಕೈಯಲ್ಲಿ ಕೊಡೆ, ಹೆಗಲ ಮೇಲೊಂದು ಟವಲ್ ಹಾಕಿ ಭಾರವಾದ ಮನಸ್ಸಿನಿಂದ ಒಂದೊಂದೇ ಹೆಜ್ಜೆ ಮುಂದಿಡುತ್ತಿದ್ದರು. ಅಷ್ಟರಲ್ಲಿ ಎಸ್ಪೀಯವರ ಆಪ್ತ ಸಹಾಯಕ ಪದ್ಮನಾಭ ಎಂಬುವರು ಐದು ನೂರರ ಮೂರು ನೋಟುಗಳನ್ನು ಈ ವೃದ್ಧರ ಕೈಗಿತ್ತು "ಸಾಹೇಬರು ನಿಮಗೆ ಕೊಡಲು ಹೇಳಿದ್ದಾರೆ ತೆಗೆದುಕೊಳ್ಳಿ" ಎಂದಾಗ ಆ ವೃದ್ಧರು ತಮ್ಮೆರಡೂ ಕೈಯೊಡ್ಡಿ ಹಣ ಪಡೆದು ಉಮ್ಮಳಿಸಿ ಬರುತ್ತಿದ್ದ ದುಃಖ ನುಂಗಿಕೊಂಡೇ ಮುನ್ನಡೆದರು. ಆದರೂ ಕಣ್ಣೀರ ಹನಿ ಜಿನುಗುತ್ತಲೇ ಇತ್ತು.

ಕೆಲಸವೊಂದರ ನಿಮಿತ್ತ ಎಸ್ಪಿ ಕಛೇರಿಗೆ ಹೋಗಿದ್ದ ನನಗೆ ಮಧುಕರ ಶೆಟ್ಟಿಯವರ ಜನಪ್ರಿಯತೆ ಕಂಡು ಆಶ್ಚರ್ಯವಾಯಿತು. ಮಲೆನಾಡಿನ ಜನ ಸೌಮ್ಯ ಸ್ವಭಾವದರೆಂದು ಇಡೀ ನಾಡಿನ ಜನ ಹೇಳುತ್ತಾರೆ. ಅದು ನಿಜವೂ ಕೂಡಾ. ಆದರೆ ಇಂತಹ ಜನರ ನಡುವೆ ದಕ್ಷ-ಪ್ರಾಮಾಣಿಕ ಅಧಿಕಾರಿ ಗಳನ್ನು ಸಹಿಸಿಕೊಳ್ಳದ ದುಷ್ಟ ಪ್ರವೃತ್ತಿಯ ರಾಜಕಾರಣಿಗಳು ಹೇಗೆ ಹುಟ್ಟಿಕೊಂಡರು? ಮನಸ್ಸಿನೊಳಗೆ ಕಾಡುವ ಈ ಪ್ರಶ್ನೆಯ ಬಗ್ಗೆ ಉತ್ತರ ಕಂಡುಕೊಳ್ಳಬೇಕೆನಿಸಿದರೂ 'ನಕ್ಸಲೀಯ'ನೆಂಬ ಹಣೆಪಟ್ಟಿ ಕಟ್ಟಿಯಾರೆಂಬ ಆತಂಕವೂ ಬೆನ್ನು ಹತ್ತಿದೆ.

-ಮಂಜು, ಚಿಕ್ಕಮಗಳೂರು

ಹೊಗ ತೆಗಾ ಚೀ

"ದೇವರು ವರ ನೀಡಿದರೂ ಪೂಜಾರಿ ಈಡೇರಿಸಲಿಲ್ಲ" ಎಂಬ ಗಾದೆಗೆ ಸರಿಯಾದ ಉದಾಹರಣೆ ಈ ಅಂಧನ ಜೀವನ. ಎಸ್. ವೆಂಕಟೇಶ್ ಎಂಬುವ ನಾನು ಅಂಧನಾಗಿದ್ದು, ಬಿ.ಎ. ಪದವೀಧರ ಹಾಗೂ ಟೆಲಿಫೋನ್ ಆಪರೇಟರ್ ಟ್ರೈನಿಂಗ್ ಕೋರ್ಸು ಮುಗಿಸಿದ್ದು, ಸಂಸಾರಸ್ಥನಾಗಿದ್ದೇನೆ. ನನ್ನ ಜೀವನೋಪಾಯಕ್ಕಾಗಿ ಒಂದು ಟೆಲಿಫೋನ್ ಬೂತ್ ಕೋರಿ ಬಹಳಷ್ಟು ಬಾರಿ ಅರ್ಜಿ ಸಲ್ಲಿಸಿದ್ದೇನೆ.

ಹಲವಾರು ಬಾರಿ ಶಾಸಕರು, ಮಂತ್ರಿಗಳು ಹಾಗೂ ರಾಜ್ಯಪಾಲರಿಂದ ಪಡೆದ ಶಿಫಾರಸ್ಸು ಪತ್ರಗಳನ್ನು ಸಲ್ಲಿಸಿದ್ದೇನೆ. ದಿನಾಂಕ 5.10.2005 ರಂದು ಮಾಜಿ ಶಿಕ್ಷಣ ಮಂತ್ರಿ ರಾಮಲಿಂಗಾರೆಡ್ಡಿಯವರಿಂದ ಹಾಗೂ ದಿನಾಂಕ 24.10.2005 ರಂದು ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್‌ರವರಿಂದ ಪಡೆದ ಶಿಫಾರಸ್ಸು ಪತ್ರಗಳನ್ನು (ಜಯನಗರ) ಮಹಾನಗರ ಪಾಲಿಕೆಗೆ ಸಲ್ಲಿಸಿದ್ದೇನೆ. ಇದಲ್ಲದೆ ಲೆಕ್ಕವಿಲ್ಲದಷ್ಟು ಬಾರಿ ಮಹಾನಗರ ಪಾಲಿಕೆ (ಜಯನಗರ) ಆಫೀಸಿಗೆ ಅಲೆದಿದ್ದೇನೆ. ಆದರೆ ಆ ಕಚೇರಿಯಲ್ಲಿ ಈ ಅಂಧನ ಕೋರಿಕೆಗೆ ಸರಿಯಾಗಿ ಸ್ಪಂದಿಸುವವರೇ ಇಲ್ಲ, ಹಣ ನೀಡುವವರಿಗೇ ಹೆಚ್ಚು ಆದ್ಯತೆ. ಈ ಭ್ರಷ್ಟ ನೀತಿಯನ್ನು ಅನುಸರಿಸುತ್ತ ಎಷ್ಟೋ ಜನರಿಗೆ (ಅಂಗವಿಕಲರಲ್ಲದವರಿಗೆ) ಟೆಲಿಫೋನ್ ಬೂತ್‌ಗಳನ್ನು ನೀಡಲಾಗಿದೆ. ಈ ಬೂತ್‌ಗಳನ್ನು ನಮ್ಮ ಉಚ್ಚ ನ್ಯಾಯಾಲಯದ (ದಿನಾಂಕ 7.7.2005) ತೀರ್ಪಿಗೆ ವಿರುದ್ಧವಾಗಿ ಜನರ ಓಡಾಟಕ್ಕೆ ತೊಂದರೆಯಾಗುವಂತಹ ಸ್ಥಳಗಳಲ್ಲೇ ನೀಡಲಾಗಿದೆ. ನನ್ನ ಇದುವರೆಗಿನ ಎಲ್ಲಾ ಪ್ರಯತ್ನಗಳು "ನೀರಿನಲ್ಲಿ ಮಾಡಿದ ಹೋಮದಂತೆ ಆಗಿವೆ."

ನಾನು ಸರ್ಕಾರದಿಂದ ಯಾವುದೇ ರೀತಿಯ ಸಹಾಯ ಧನ ಕೋರುತ್ತಿಲ್ಲ ಅಥವಾ ವಸತಿ ಕೇಳಿ ಪೀಡಿಸುತ್ತಿಲ್ಲ. ನನ್ನ ಜೀವನ ಸಾಗಿಸಲು ಒಂದು ಉದ್ಯೋಗ ಕೇಳುತ್ತಿದ್ದೇನೆ. ನನಗೆ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಒಂದು ಸಣ್ಣ ಟೆಲಿಫೋನ್ ಬೂತ್ ನೀಡಿದರೆ ಅದೇ ಸಾಕು. ಅದರ ಆಸರೆಯಲ್ಲಿ ನೆಮ್ಮದಿಯಾಗಿ ಜೀವನ ಸಾಗಿಸಬಲ್ಲೆ.

ಸರ್ಕಾರ ಪ್ರತಿಬಾರಿ ದೊಡ್ಡ-ದೊಡ್ಡ ಆಶ್ವಾಸನೆಗಳನ್ನು ಅಂಗವಿಕಲರಿಗೆ ನೀಡುತ್ತದೆ. ಶಾಸಕರಿಂದ ಹಿಡಿದು ರಾಷ್ಟ್ರಪತಿಗಳವರೆಗೂ ಎಲ್ಲರೂ ಅಂಗವಿಕಲರು ಸ್ವಾವಲಂಬಿಗಳಾಗಬೇಕೆಂದು ಭಾಷಣ ಬಿಗಿಯುವವರೆ! ಆದರೆ ಒಬ್ಬ ಅಂಧ ನಿಜವಾಗಲೂ ಸ್ವಾವಲಂಬಿಯಾಗಲು ಶತ ಪ್ರಯತ್ನ ನಡೆಸಿದರೂ ಒಬ್ಬರೂ ಆತನಿಗೆ ಆಸರೆ ನೀಡುವವರಿಲ್ಲ!! ನನ್ನ ಕೊನೆಯ ಪ್ರಯತ್ನವಾಗಿ ನಿಮ್ಮ ಪತ್ರಿಕೆಯಲ್ಲಿ ನನ್ನ ಬೇಡಿಕೆ ವಿನಂತಿಸಿಕೊಳ್ಳುತ್ತಿದ್ದೇನೆ. ಈ ಅಂಧನಿಗೆ ಒಂದು ಟೆಲಿಫೋನ್ ಬೂತ್ ದೊರೆತು ಅದರಿಂದ ಸ್ವಾವಲಂಭಿಯಾಗಲು ನೀವು ಆಸರೆದಾತರಾಗುವಿರಾ?

-ಎಸ್. ವೆಂಕಟೇಶ್, ಬೆಂಗಳೂರು

ಪ್ರಯತ್ನ-ಸಾಹಸವೇ ಲಕ್ಷ್ಮಿಯ ನಿವಾಸಸ್ಥಾನ -ಅನಾಮಿಕ



ಶಾಲೆಯಲ್ಲಿ ರೌಡಿಸಂ ಮಾಡಿದ ದಿನಗಳು!

ನಮ್ಮ ಮನೆಯಿಂದ ಸುಮಾರು ಒಂದು ಫರ್ಲಾಂಗ್ ದೂರದಲ್ಲಿದ್ದ ಸರಸ್ವತಿ ವಿದ್ಯಾಲಯ ಎಂಬ ಶಾಲೆಯಲ್ಲಿ ನನ್ನನ್ನು ಎಲ್ ಕೆಜಿಗೆ ಸೇರಿಸಿದರು. ಪ್ರತಿದಿನ ನನ್ನನ್ನು ಮನೆಯಿಂದ ಸ್ಕೂಲ್‌ಗೆ ಕರೆದುಕೊಂಡು ಹೋಗಿ ಮತ್ತೆ ಕರೆದುಕೊಂಡು ಬರುವ ಜವಾಬ್ದಾರಿ ನನ್ನ ಅಜ್ಜಿ ಲಕ್ಷ್ಮಮ್ಮಜ್ಜಿಯದಾಗಿತ್ತು. ಆ ನನ್ನ ಪ್ರೀತಿಯ ಲಕ್ಷ್ಮಮ್ಮಜ್ಜಿ ಒಂದು ಕೈಯಲ್ಲಿ ನನ್ನನ್ನು, ಇನ್ನೊಂದು ಕೈಯಲ್ಲಿ ನನ್ನ ಸ್ಕೂಲ್ ಬ್ಯಾಗನ್ನು ಹಿಡಿದು ನನ್ನನ್ನು ನಡೆಸಿಕೊಂಡು ಸ್ಕೂಲಿಗೆ ಕರೆದುಕೊಂಡು ಹೋಗುತ್ತಿದ್ದರು.

ಸುಮಾರು ಹನ್ನೊಂದೂವರೆಗೆ ಶಾಲೆ ಬಿಟ್ಟಾಗ ನನ್ನ ಅಜ್ಜಿ ಗೇಟಿನ ಎದುರು ಪ್ರತ್ಯಕ್ಷರಾಗಿರುತ್ತಿದ್ದರು. ಪ್ರತಿನಿತ್ಯ ಅವರನ್ನು ಆ ಕ್ಷಣ ನೋಡುವುದೇ ನನಗೆ ಅತ್ಯಂತ ಸಂತೋಷದ ಸಂಗತಿ ಆಗಿತ್ತು. ಏಕೆಂದರೆ ಸ್ಕೂಲ್ ಬಿಟ್ಟು ಹೊರಗೆ ಬಂದ ತಕ್ಷಣ ನನ್ನನ್ನು ಅಲ್ಲೇ ಪಕ್ಕದಲ್ಲಿದ್ದ ಮರದ ಅಡಿಗೆ ಕರೆದುಕೊಂಡು ಹೋಗಿ ಮನೆಯಿಂದ ತಂದಿದ್ದ ಫ್ರೆಶ್ ಮೂಸಂಬಿ ಜ್ಯೂಸನ್ನು ನನಗೆ ಕುಡಿಸುತ್ತಿದ್ದರು. ಹಾಗೆ ಕುಡಿಸಿದ ನಂತರವೇ ನನ್ನ ಕೈಹಿಡಿದು ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಎರಡು ವರ್ಷಗಳ ಕಾಲ ಅಂದರೆ ಎಲ್‌ಕೆಜಿ ಮತ್ತು ಯುಕೆಜಿ ಓದುವಾಗ ಪ್ರತಿದಿನ ಇದು ನಡೆಯುತ್ತಿತ್ತು. ನಾನು ಆಗ ತುಂಬಾ ಚಿಕ್ಕವನಾಗಿದ್ದರೂ ಆ ನೆನೆಪುಗಳು ನನ್ನ ಮನಸ್ಸಿನಲ್ಲಿ ಇಂದಿಗೂ ಆಳವಾಗಿ ಬೇರೂರಿದೆ. ಇದು ಹೇಗೆ ಸಾಧ್ಯ ಅಂತ ನಿಮಗನ್ನಿಸಬಹುದು. ಆದರೆ ಇದೆಲ್ಲ ನನ್ನ ನೆನಪಿನಲ್ಲಿ ಉಳಿಯಲು ಮುಖ್ಯ ಕಾರಣ ನನ್ನ ಅಜ್ಜಿ ತೋರಿಸಿದ ಅಪಾರ ಪ್ರೀತಿ.



ಲಕ್ಷ್ಮಮ್ಮಜ್ಜಿ

ಅವರು ನನಗೆ ಕುಡಿಸುತ್ತಿದ್ದ ಮೂಸಂಬಿ ಜ್ಯೂಸ್ ಇತ್ತಲ್ಲ..... ಅದು ಬರೀ ಜ್ಯೂಸ್ ಆಗಿರುತ್ತಿರಲಿಲ್ಲ, ಅದರೊಳಗೆ ಪ್ರೀತಿ ಮತ್ತು ಮಮತೆಯನ್ನು ಬೆರೆಸಿ ಅಜ್ಜಿ ನೀಡುತ್ತಿದ್ದರು. ಆದ್ದರಿಂದಲೇ ಅದು ಅಂಗಡಿಯಲ್ಲಿ ಸಿಗುವ ಜ್ಯೂಸಿಗಿಂತ ಹೆಚ್ಚು ಸಿಹಿಯಾಗಿರುತ್ತಿತ್ತು. ನಾನು ಜ್ಯೂಸ್ ಕುಡಿಯುತ್ತಿದ್ದಾಗ ನನ್ನ ಅಜ್ಜಿಯ ಮುಖ ಸಂತೋಷದಿಂದ ತುಂಬಿಹೋಗಿರುತ್ತಿತ್ತು.

ಇಂತಹ ದೊಡ್ಡ ಕುಟುಂಬದಲ್ಲಿ ನಾನು ಹುಟ್ಟಿದ್ದೇ ನನ್ನ ಪೂರ್ವ ಜನ್ಮದ ಪುಣ್ಯ ಎಂದು ನಾನು ಭಾವಿಸಿದ್ದೇನೆ. **It is a great honour to be a part of Rajkumar family.** ಇಂತಹ ಒಂದು ಅಪೂರ್ವ ಭಾಗ್ಯ ಮತ್ತು ಅದೃಷ್ಟ ನನಗೆ ದೊರೆತಿರುವುದಕ್ಕೆ ನಾನು ಭಗವಂತನಿಗೆ ಎಂದೆಂದಿಗೂ ಋಣಿಯಾಗಿರುತ್ತೇನೆ. ಇದನ್ನು ಕೇಳಿ ನಾನು ಅನಗತ್ಯವಾಗಿ ಏನೇನೋ ಹೇಳುತ್ತಿದ್ದೇನೆ ಅಂತ ನಿಮಗನ್ನಿಸಬಹುದು. ಆದರೆ ಇದು ನನ್ನ ಹೃದಯದ ಆಳದಿಂದ ಬರುತ್ತಿರುವ ಮಾತು. ಯಾಕೆಂದರೆ ನನ್ನ ಅಜ್ಜಿ, ಅಪ್ಪಾಜಿ, ಅಮ್ಮ ನನಗೆ ಪ್ರೀತಿಯ ಹೊಳೆಯನ್ನೇ ಹರಿಸಿದರು. ಅದನ್ನು ನಾನು ಎಂದೆಂದಿಗೂ ಮರೆಯಲು ಸಾಧ್ಯವೇ ಇಲ್ಲ. ಹಾಗೆಯೇ ನಮ್ಮದು ಅವಿಭಕ್ತ ಕುಟುಂಬವಾಗಿದ್ದರಿಂದ ಎಲ್ಲರೂ ನನ್ನನ್ನು ಮುದ್ದಿಸುವವರೇ! ಗೋವಿಂದ ಮಾಮ, ಶೀನು ಮಾಮ, ಚನ್ನಪ್ಪಣ್ಣ, ರಾಮಣ್ಣ... ಎಲ್ಲರೂ ನನ್ನನ್ನು ಮುದ್ದು ಮಾಡಿ, ಮಾಡಿ ಬೆಳೆಸಿದರು. ಇವರೆಲ್ಲರೊಂದಿಗೆ, ನನ್ನ ತಾಯಿಯ ತಂದೆ ಅಂದರೆ ತಾತನ ಪ್ರೀತಿಯೂ ನನಗೆ ದೊರೆಯಿತು.

ಅಪ್ಪಾಜಿ ಮತ್ತು ಅಮ್ಮ ಮದುವೆಯಾದ ಎಂಟು ವರ್ಷಗಳ ನಂತರ ನಾನು ಹುಟ್ಟಿದ್ದರಿಂದಲೋ ಏನೋ ಇವರೆಲ್ಲರ ಪ್ರೀತಿ-ಮಮತೆ ನನಗೆ ಇಮ್ಮಡಿಯಾಗಿ ದೊರೆಯಿತು. ನಾನು ಸ್ವಲ್ಪ ದೊಡ್ಡವನಾದ ಮೇಲೆ ಹಲವೊಮ್ಮೆ ಹೀಗೆ ಚಿಂತಿಸುತ್ತಿದ್ದೆ: ಬಹುಶಃ ನನ್ನನ್ನು ಸೃಷ್ಟಿ ಮಾಡಲು ದೇವರು ಎಂಟು ವರ್ಷಗಳ ಕಾಲ ತೆಗೆದುಕೊಂಡಿದ್ದರಿಂದಲೇ ನನ್ನ ಕುಟುಂಬದ ಸದಸ್ಯರಿಗೆ ನನ್ನ ಮೇಲೆ ಪ್ರೀತಿ ಹೆಚ್ಚಲು ಕಾರಣ ಅಂತ! ಇದೆಲ್ಲ ಹುಚ್ಚು ಕಲ್ಪನೆ ಆಗಿದ್ದಿರಬಹುದು, ಆದರೆ ಬಾಲ್ಯದಲ್ಲಿ ಎಲ್ಲರೂ ನನ್ನನ್ನು ಮುದ್ದು ಮಾಡಿದ್ದರಿಂದಲೇ ನನಗೆ ಇಂದಿಗೂ ಆ ದಿನಗಳು ಅಚ್ಚಳಿಯದೆ ನೆನಪಿವೆ.

ಯುಕೆಜಿ ಆದ ನಂತರ ನನ್ನನ್ನು ಮನೆಯಿಂದ ಎರಡು-ಮೂರು ಕಿಲೋ ಮೀಟರ್ ದೂರದಲ್ಲಿದ್ದ ಇನ್ನೊಂದು ದೊಡ್ಡ ಶಾಲೆಗೆ ಸೇರಿಸಿದರು. ಆ ಶಾಲೆಯ ಹೆಸರು ಪದ್ಮಾ ಶೇಷಾದ್ರಿ ಸ್ಕೂಲ್. ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ನನ್ನ ವಿದ್ಯಾಭ್ಯಾಸ ಆ ಶಾಲೆಯಲ್ಲಿಯೇ ನಡೆಯಿತು.

ಈ ಬಾರಿಯೂ ನನ್ನನ್ನು ಶಾಲೆಗೆ ಕರೆದುಕೊಂಡು ಹೋಗುವ ಜವಾಬ್ದಾರಿ ನನ್ನ ಅವ್ವನದೇ ಆಗಿತ್ತು. ಆದರೆ ಒಂದೇ ಒಂದು ವ್ಯತ್ಯಾಸವೆಂದರೆ ಸರಸ್ವತಿ ಸ್ಕೂಲ್‌ಗೆ ನನ್ನ ಕೈ ಹಿಡಿದು ಕರೆದುಕೊಂಡು ಹೋಗುತ್ತಿದ್ದ ನನ್ನ ಅವ್ವ, ಈ ಶಾಲೆಗೆ ಕಾರಿನಲ್ಲಿ ಕರೆದೊಯ್ಯುತ್ತಿದ್ದರು.

ಈ ಶಾಲೆಯ ಪ್ರಿನ್ಸಿಪಾಲ್ ಪದ್ಮಾ ಪಾರ್ಥಸಾರಥಿಯವರು ನನ್ನನ್ನು ತುಂಬ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಇದಕ್ಕೆ ಮುಖ್ಯ ಕಾರಣ ಅವರು ನಮ್ಮ ಕುಟುಂಬವನ್ನು ಅತ್ಯಂತ ಹತ್ತಿರದಿಂದ ಬಲ್ಲವರಾಗಿದ್ದು, ಆ ಕಾಲದಲ್ಲಿ ತಮಿಳಿನ ಸಿನಿಮಾಗಳಲ್ಲಿ ಹಾಸ್ಯ ನಟರಾಗಿ ಖ್ಯಾತಿ ಗಳಿಸಿದ್ದ ವೈ.ಜಿ. ಮಹೇಂದ್ರ ಅವರ ಅತ್ತಿಗೆ ಅಂದರೆ ಮಹೇಂದ್ರ ಅವರ ಅಣ್ಣ ವೈ.ಜಿ. ಪಾರ್ಥಸಾರಥಿ ಅವರ ಹೆಂಡತಿ ಆಗಿದ್ದವರೇ ನಮ್ಮ ಪ್ರಿನ್ಸಿಪಾಲ್ ಪದ್ಮಾರವರು. ಅವರು ಎಂ.ವಿ. ರಾಜಮ್ಮ ಮತ್ತು ಬಿ.ಆರ್. ಪಂತುಲುರವರ ಕುಟುಂಬಕ್ಕೂ ಸೇರಿದವರಾಗಿದ್ದರು. ಅಂದಹಾಗೆ, ವೈ.ಜಿ. ಮಹೇಂದ್ರರವರು ತಮಿಳಿನ ಈಗಿನ ಸೂಪರ್‌ಸ್ಟಾರ್ ರಜನೀಕಾಂತ್‌ರ ಹತ್ತಿರದ ಬಂಧುವೂ ಹೌದು.

ವೈ.ಜಿ. ಮಹೇಂದ್ರರವರಿಗೆ ನನ್ನ ಅಪ್ಪಾಜಿ ಬಗ್ಗೆ ವಿಶೇಷವಾದ ಗೌರವ ಮತ್ತು ಅಭಿಮಾನ. ಹೀಗಾಗಿ ಪ್ರಿನ್ಸಿಪಾಲ್ ಪದ್ಮಾ ಪಾರ್ಥಸಾರಥಿ ಕೂಡ ನನ್ನನ್ನು ಒಬ್ಬ ಸಾಮಾನ್ಯ ವಿದ್ಯಾರ್ಥಿಯಂತೆ ನೋಡಿಕೊಳ್ಳದೆ ನನ್ನನ್ನು ತಮ್ಮ ಕುಟುಂಬದ ಸದಸ್ಯನಂತೆ ನೋಡಿಕೊಳ್ಳುತ್ತಿದ್ದರು. ಒಟ್ಟಾರೆ, ಮಹೇಂದರ್ ಕುಟುಂಬದವರಿಗೆ ರಾಜ್‌ಕುಮಾರ್ ಕುಟುಂಬದ ಬಗ್ಗೆ ವಿಶೇಷವಾದ ಒಲವು ಮತ್ತು ಅಭಿಮಾನ ಇತ್ತು. ಈ ಕಾರಣದಿಂದಲೇ ನನಗೆ ಆ ಸ್ಕೂಲಿನಲ್ಲಿ ಯಾವುದೇ ತೊಂದರೆ ಆಗದೆ ನನ್ನ ಬಗ್ಗೆ ಪ್ರಿನ್ಸಿಪಾಲ್ ವಿಶೇಷವಾದ ಕೇರ್ ತೆಗೆದುಕೊಳ್ಳುತ್ತಿದ್ದರು.

ನಾನು ಕ್ರೀಡೆಯಲ್ಲಿ ಆಗ ತುಂಬಾ ವಿಶೇಷವಾಗಿ ಇನ್ವಾಲ್ವ್ ಆಗುತ್ತಿದ್ದೆ. ಅದು ನಮ್ಮ ಪ್ರೈಸ್ ಪ್ರಿನ್ಸಿಪಾಲ್‌ಗೆ ತುಂಬ ಇಷ್ಟವಾಗಿ ನನ್ನ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಆದರೆ ನಮ್ಮ ಪ್ರಿನ್ಸಿಪಾಲ್‌ರಿಗೆ ಮಾತ್ರ ನಾನು ಓದಿನ ಬಗ್ಗೆ ಹೆಚ್ಚು ಗಮನ ಕೊಡಬೇಕೆಂಬ ಬಯಕೆ. ನಾನು ಅಥ್ಲೆಟಿಕ್ಸ್‌ನಲ್ಲಿ ಮಾತ್ರವಲ್ಲ ಕ್ರಿಕೆಟ್‌ನಲ್ಲೂ ಸಿಕ್ಕಾಪಟ್ಟೆ ಮುಂದಿದ್ದೆ.

ಇನ್ನೊಂದು ವಿಷಯವನ್ನು ನಾನು ಇಲ್ಲಿ ಹೇಳಲೇ ಬೇಕು. ಅದೇನೆಂದರೆ ನಾನು ನನ್ನ ಕ್ಲಾಸಿನಲ್ಲಿ ಸಿಕ್ಕಾಪಟ್ಟೆ ತುಂಟನಾಗಿದ್ದೆ. ಸಿಕ್ಕಾಪಟ್ಟೆ ಎಂದರೆ ಅತಿಶಯವಲ್ಲ! ನಾನು ಯಾವಾಗಲೂ ನನ್ನ ಗೆಳೆಯರ ಪರ ಕಟ್ಟಿಕೊಂಡು ಬೇರೆಯವರೊಂದಿಗೆ ಜಗಳವಾಡುತ್ತಿದ್ದೆ. ರೋಷ-ದ್ವೇಷ ಏನೆಂದು ಗೊತ್ತಿಲ್ಲದಿದ್ದ ಆ ದಿನಗಳಲ್ಲಿ ನಾನು ವೀರಾವೇಶದಿಂದ ಜಗಳವಾಡುತ್ತಿದ್ದೆ, ಬಡಿದಾಡುತ್ತಿದ್ದೆ. ಮುಖ್ಯವಾಗಿ ನಾನು ಸ್ಕೇಲ್ ಹಿಡಿದು ಎದುರು ಸಿಕ್ಕವರಿಗೆಲ್ಲಾ ಚಚ್ಚಿಹಾಕುತ್ತಿದ್ದೆ. ಈ ನನ್ನ ಜಗಳತನವನ್ನು ಮತ್ತು ಸಿಟ್ಟನ್ನು ನೋಡಿ ನಮ್ಮ ಮನೆಯವರಿಗೆ ಸ್ವಲ್ಪ ಮಟ್ಟಿಗೆ ಆಶ್ಚರ್ಯ ಮತ್ತು ಚಿಂತೆಯಾಗಿದ್ದು ನಿಜ. ಅಷ್ಟು ಚಿಕ್ಕ ವಯಸ್ಸಿನಲ್ಲೇ ನನ್ನಲ್ಲಿದ್ದ ರೋಷ ಎಲ್ಲರಲ್ಲೂ ಆಶ್ಚರ್ಯಹುಟ್ಟಿಸಿತ್ತು.

ನಾನು ಇಷ್ಟೆಲ್ಲಾ ಸಿಟ್ಟು ಮಾಡಿಕೊಳ್ಳಲು ಕಾರಣವೇನು ಗೊತ್ತೇ? ನನಗೆ ಐದು ಜನ ಬ್ಯೂಟಿಫುಲ್ ಫ್ರೆಂಡ್ಸ್ ಇದ್ದರು. ನನ್ನ ಪಾಲಿಗೆ ಸರ್ವಸ್ವವೇ ಆಗಿದ್ದ ಅವರ ತಂಟೆಗೆ ಯಾರಾದರೂ ಬಂದರೆ ಅಥವಾ ಅವರ ಮೈ ಮುಟ್ಟಿದರೆ ನನ್ನ ಕೋಪ ನೆತ್ತಿಗೇರುತ್ತಿತ್ತು. ಇಲ್ಲದಿದ್ದರೆ ನಾನು ಯಾರ ತಂಟೆಗೂ ಹೋಗುತ್ತಿರಲಿಲ್ಲ.


ಈ ನನ್ನ ಐದು ಜನ ಗೆಳೆಯರಲ್ಲಿ ಮೂವರು ಹುಡುಗಿಯರು, ಇಬ್ಬರು ಹುಡುಗರು ಇದ್ದರು. ನನ್ನನ್ನೂ ಸೇರಿಸಿದಂತೆ ಆರು ಜನರ ಗುಂಪು ನಮ್ಮದು. ಆ ಮೂವರು ಹುಡುಗಿಯರು ನನ್ನನ್ನು ಪ್ರೀತಿಯಿಂದ 'ಪುಟ್ಟಾ' ಎಂದು ಕರೆಯುತ್ತಿದ್ದರು. ಮಧ್ಯಾಹ್ನ ಊಟಕ್ಕೆ ಬ್ರೇಕ್ ಸಿಕ್ಕಾಗ ನನ್ನ ಗೆಳೆಯರು ನನ್ನ ಬಳಿಗೆ ಓಡಿಬರುತ್ತಿದ್ದರು. ಅಷ್ಟೊತ್ತಿಗೆ ನನ್ನ ಅಜ್ಜಿ ಸ್ಕೂಲಿನ ಹೊರಗೆ ಕಾರಿನಲ್ಲಿ ಕಾಯುತ್ತಾ ಕುಳಿತುಕೊಂಡಿರುತ್ತಿದ್ದರು. ನಾವು ಆರೂ ಜನ ನಮ್ಮ ಕಾರಲ್ಲೇ ಕುಳಿತುಕೊಂಡು ಊಟ ಮಾಡುತ್ತಿದ್ದೆವು. ಫ್ರೆಂಡ್ಸ್ ಅಂದರೆ ನನಗೆ ಆಗಿನಿಂದಲೇ ಪಂಚಪ್ರಾಣ.

ಆ ನನ್ನ ಗೆಳೆಯರ ಹೆಸರು ಕೂಡ ನನಗಿನ್ನೂ ಸ್ಪಷ್ಟವಾಗಿ ನೆನಪಿದೆ. ವಿಜಯಲಕ್ಷ್ಮಿ, ವತ್ಸಲಾ ಮತ್ತು ಉಷಾ ಆ ಮೂರು ಹುಡುಗಿಯರ ಹೆಸರು. ನಾರಾಯಣ ಮತ್ತು ವೆಂಕಟೇಶ್ ಇಬ್ಬರು ಮಿತ್ರರ ಹೆಸರು. ಈ ಐವರಲ್ಲಿ ಯಾರನ್ನಾದರೂ ಯಾರಾದರೂ ಟಚ್ ಮಾಡಿದರೆ ನಾನು ಹೋಗಿ ಅವರಿಗೆ ರೋಪು ಹೊಡೆಯುತ್ತಿದ್ದೆ. ಒಂದು ರೀತಿಯಲ್ಲಿ ಆಗಲೇ ರೌಡಿಸಂ ಅನ್ನು ಬೆಳೆಸಿಕೊಂಡಿದ್ದೆ ಅನ್ನಬಹುದು. ದೊಡ್ಡ ರೌಡಿಯೇನಲ್ಲ; ಸ್ಕೂಲಲ್ಲೇ ಯಂಗ್ ರೌಡಿ! ಆದರೆ ನಾನು ಹೀಗೆ ಪುಟ್ಟ ರೌಡಿಯಿಸಂ ಮಾಡಿದ್ದು ನನ್ನ ಗೆಳೆಯರ ಪರವಾಗಿ. ಆದ್ದರಿಂದ ಆಗ ನಾನು ಯಂಗ್ ರೌಡಿ ಅನ್ನಿಸಿಕೊಂಡಿದ್ದಕ್ಕೆ ನನಗೆ ಯಾವ ಬೇಸರವೂ ಇಲ್ಲ.

ನಿರೂಪಣೆ: ಸದಾಶಿವ ಶೆಣೈ

3


ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ಆ ದಿನಗಳನ್ನು, ಆ ಗೆಳೆಯರನ್ನು ನಾನು ಎಂದೂ ಮರೆಯಲು ಸಾಧ್ಯವಿಲ್ಲ. ಇವತ್ತು ನಾನು ಸಿನಿಮಾ ನಟನಾಗಿ ಈ ಸಮಾಜದಲ್ಲಿ ಹಲವಾರು ಗೆಳೆಯರನ್ನು, ಗೆಳತಿಯರನ್ನು ಸಂಪಾದಿಸಿರಬಹುದು. ಆದರೆ ಆ ನನ್ನ ಗೆಳೆಯರ ಸಾನ್ನಿಧ್ಯ ನೀಡಿದಷ್ಟು ಸಂತೋಷ ಮತ್ತು ಸುಖ ಬೇರೆ ಯಾವ ಸ್ನೇಹಿತರಿಂದಲೂ ಪಡೆಯಲು ಸಾಧ್ಯವಾಗಿಲ್ಲ. ನಾನು ಒಬ್ಬನೇ ಇದ್ದಾಗ ಅದೆಷ್ಟೋ ಸಂದರ್ಭಗಳಲ್ಲಿ ಆ ಹಳೆಯ ದಿನಗಳ ಬಗ್ಗೆ ಮತ್ತು ಹಳೆಯ ಗೆಳೆಯರ ಬಗ್ಗೆ ಮೆಲುಕು ಹಾಕುತ್ತಾ ನನ್ನಷ್ಟಕ್ಕೆ ನಾನೇ ಸಂತೋಷ ಪಟ್ಟಿದ್ದೂ ಇದೆ. ಇವತ್ತು ಅವರೆಲ್ಲ ಎಲ್ಲಿದ್ದಾರೆ? ಹೇಗಿದ್ದಾರೆ? ಏನು ಮಾಡುತ್ತಿದ್ದಾರೆ? ನನಗೆ ಗೊತ್ತಿಲ್ಲ. ಆದರೂ ನಾನು ಆಗಾಗ್ಗೆ ಅವರನ್ನು ನೆನಪಿಸಿಕೊಳ್ಳುತ್ತಲೇ ಇರುತ್ತೇನೆ. ನನ್ನ ಹೃದಯ ಅವರಿಗಾಗಿ ಅನೇಕ ಬಾರಿ ಮಿಡಿದದ್ದೂ ಇದೆ...

ನಾನು ನನ್ನ ಬಾಲ್ಯದಲ್ಲಿ ಕಂಡಿದ್ದು, ನೋಡಿದ್ದು, ಆನಂದಿಸಿದ್ದು ಬೇಕಾದಷ್ಟಿದೆ. ಅದನ್ನೆಲ್ಲ ಖಂಡಿತವಾಗಿಯೂ ಒಂದೊಂದಾಗಿ ನಿಮ್ಮ ಮುಂದೆ ಬಿಚ್ಚಿಡುತ್ತೇನೆ. ಅಂದಹಾಗೆ ನನ್ನ ಮನಸ್ಸಿನಲ್ಲಿ ಈಗ ಒಂದು ಚಿಕ್ಕ ಆಸೆ ಹುಟ್ಟುತ್ತಿದೆ. ಈ ಲೇಖನವನ್ನು ನನ್ನ ಬಾಲ್ಯದ ಗೆಳೆಯರು ಓದುವಂತಾಗಿ ಅವರು ಈಗ ಎಲ್ಲಿದ್ದಾರೆ, ಹೇಗಿದ್ದಾರೆ ಅಂತ ನನಗೆ ತಿಳಿಯುವಂತಾಗಲಿ.... ಈ ನನ್ನ ಪುಟ್ಟ ಕನಸು ನನಸಾಗುವುದೇ?

(ಮುಂದಿನ ವಾರಕ್ಕೆ.....)



ಖಾವಿಯಲ್ಲಿ ಕೊಚ್ಚು ಮಗಾ....

ಖಾವಿ ತೊಟ್ಟು ಅಕರಾಳ ವಿಕರಾಳ ಕಾಣುವ ಸುದೀಪ್‌ನನ್ನು ತೋರಿಸುತ್ತ 'ತಿರುಪತಿ' ಬರುತ್ತಿದ್ದಾನೆ. ತಲೆ ಗುಂಡು ಹೊಡೆಸಿ, ಹಣೆಗೆ ಕಾಲು ಕೆ.ಜಿ. ವಿಭೂತಿ ತಿಕ್ಕಿಕೊಂಡಿರುವ 'ತಿರುಪತಿ' ಸ್ವಾಮಿ ಕೈಯಲ್ಲಿ ಲಾಂಗು ಹಿಡಿದು ವಿಕಾರವಾಗಿ ಬರುತ್ತಿದ್ದಾನೆ.

'ತಿರುಪತಿ' ತಲೆ ಮೇಲೆ (ಟೈಟಲ್ ಮೇಲೆ) "When God is silent, he is violent" ಎಂಬ ಭಯಾನಕ ಒನ್‌ಲೈನ್ ನಾಮವಿದೆ! 'ತಿರುಪತಿ'ಯ ಬಂಡವಲೊಂದು ನೀವು ಕೇಳೇ ಇರದಂತಹ ಇನ್ನೊಂದು ಒನ್‌ಲೈನ್ ನಾಮವೂ ಇದೆ: "Mass Police".....

ಇತ್ತೀಚೆಗೆ IPS ಗೆ ಸೆಲೆಕ್ಟ್ ಆಗಿರುವವರಿಗೂ 'Mass Police' ಎಂದರೇನೆಂದು ಗೊತ್ತಿಲ್ಲವಂತೆ....



'ಅಂಬಿ'ಯ ದೊಂಬಿ!

ನಾವು ಮೊದಲೇ ಹೇಳಿದ್ದಂತೆ ದೊಂಬಿ ಚಿತ್ರ 'ಅಂಬಿ'ಯನ್ನು ಪ್ರೇಕ್ಷಕ ರಿಜೆಕ್ಟ್ ಮಾಡಿದ್ದಾನೆ. ಆದಿತ್ಯನ ಸಹೋದರಿ ಅಮೃತಾಸಿಂಗ್‌ಳ ಮದುವೆಗೆಂದು ಬಂದಿದ್ದ ಬಂಧು ಬಳಗದವರಿಗೂ ಆದಿತ್ಯ 'ಅಂಬಿ' ಚಿತ್ರ ತೋರಿಸುತ್ತಿಲ್ಲವಂತೆ. ಅಷ್ಟೊಂದು 'ಅದ್ಭುತ'ವಾಗಿ ಚಿತ್ರ ತೆಗೆದಿದ್ದಾರೆ ನಿರ್ದೇಶಕ ನಾಗೇಂದ್ರ ಪ್ರಸಾದ್.

'ಅಂಬಿ'ಯ ಪಂಚ್‌ಲೈನ್ "ನನ್ ತಂಟೆಗೆ ಬಂದ್ರೆ ಗೊತ್ತಿಲ್ಲ..." ಓದಿದ ಪ್ರೇಕ್ಷಕರು "ಈ ದೊಂಬಿ ನನ್ಮಕ್ಳ ತಂಟೆ ನಮಗೇಕಪ್ಪ" ಎಂದು ಥಿಯೇಟರ್ ಕಡೆ ತಲೆ ಹಾಕುತ್ತಿಲ್ಲ!

ಆರ್ಯಗೆ ಹೇಮಾಮಾಲಿನಿ!

ನಿರ್ದೇಶಕ, ಟೆಂಪರರಿ ನಟ ರಾಜೇಂದ್ರ ಕುಮಾರ್ ಆರ್ಯಗೆ ಮದುವೆ ಸುಯೋಗ ಒದಗಿ ಬಂದಿದೆ. ಆರ್ಯ ತಮ್ಮದೇ 'ವಿಚಿತ್ರ' ಶೈಲಿಯ ಆಹ್ವಾನ ಪತ್ರ ಕಳಿಸಿದ್ದಾರೆ.



'ದೇವೀರಿ'ಯಲ್ಲಿ ಭಾವನಾಳನ್ನು ಒಲಿಸಿಕೊಳ್ಳಲು ಏನೇನೋ ಕಳ್ಳಾಟವಾಡಿ ವಿಫಲವಾಗುವ ಆರ್ಯಗೆ ಈಗ ಹೇಮಾಮಾಲಿನಿ ಸಿಕ್ಕಿದ್ದಾಳೆ....

ಆರ್ಯ ಕೈ ಹಿಡಿಯುತ್ತಿರುವ ಹುಡುಗಿ ಹೆಸರು ಹೇಮಾಮಾಲಿನಿ... ಮದುವೆ ನಂತರ ಹೇಮಾಮಾಲಿನಿ ಜೊತೆ 'ಲವ್' ಶುರು ಮಾಡ್ತಾರಂತೆ ಈ ಆರ್ಯ!

ಶಾರ್ಟ್ ಕಟ್

... ಮುಖ್ಯವಲ್ಲ, ಬದಲಾಗಿ ಆ ವರ್ಷಗಳಲ್ಲಿ ಎಷ್ಟು ಜೀವಂತಿಕೆ ಇತ್ತು ...

R.B.P. LANKESH, Kannada Weekly Price Rs. 10/- 24-5-2006 RNI No. KARKAN2005/14648 Regd.No.KA/BG(S)/2036/2005-



ಚೂಪು ಗದ್ದ... ಹೊಳೆವ ಕಣ್ಣು... ಏನ್ ಚೆಂದಾನವ್ವಾ ಈ ಹೆಣ್ಣುsss

ಆತ್ಮವಿಶ್ವಾಸ ತುಂಬಿ ತುಳುಕುವ ಅಗಲ ಹಸಿರು ಪಚ್ಚೆಗಣ್ಣುಗಳು... ತೀಡಿ ಮಾಡಿದಂತಹ ಮೂಗು... ಒಂದಿಷ್ಟು ಚೂಪಾಗಿರುವ ಗದ್ದ.... ಹೊಳೆಹೊಳೆವ ಮುಖಾರವಿಂದ...

ಉಮ ಥರ್ಮನ್ ಎಂಬ ಈ ಹಾಲಿವುಡ್ ಚೆಲುವೆ ಒಂದಷ್ಟು ಅಜ್ಞಾತವಾಸದ ನಂತರ ಮತ್ತೆ ಬಂದಿದ್ದಾಳೆ. ತಾನೇ ನಾಯಕಿಯಾಗಿರುವ 'ಪ್ರೈಮ್' ಚಿತ್ರ ನಿರ್ಮಿಸುತ್ತಿದ್ದಾಳೆ.

1987 ರಲ್ಲಿ ಹದಿಹರೆಯದ ಮಾಡೆಲ್ ಆಗಿದ್ದ ಈ ಮೋಹನಾಂಗಿ 'ಕಿಸ್ ಡ್ಯಾಡಿ ಗುಡ್‌ನೈಟ್' ಚಿತ್ರದ ಮೂಲಕ ಹಾಲಿವುಡ್ ಸ್ಪರ್ಶಿಸಿದಳು. 90 ರ ದಶಕದಲ್ಲಿ ಮಾದಕ ಬೆಡಗಿಯಾಗಿ 'ಪಲ್ಪ್ ಫಿಕ್ಷನ್', 'ಬ್ಯಾಟಮನ್ & ರಾಬಿನ್', 'ಸ್ವೀಟ್ & ಲೋಡೌನ್' ಚಿತ್ರಗಳಲ್ಲಿ ಮಿಂಚಿದಳು.


'ಕ್ಯಾಟ್ಸ್ & ಡಾಗ್ಸ್'ನಲ್ಲಿ ಪ್ರಿಯಕರ ಪುಸ್ತಕವೊಂದನ್ನು ಕೊಟ್ಟರೆ, 'ಏನಿದು... ಚಿತ್ರಗಳೇ ಇಲ್ಲದ ಪುಸ್ತಕ....!' ಎಂದು ಆಶ್ಚರ್ಯಪಟ್ಟು, ಆ ಪುಸ್ತಕ ಓದಲು ದಿಕ್ಷನರಿ ಎತ್ತಿಕೊಳ್ಳುವ ಪೆದ್ದಿಯ ಕಾಮಿಡಿ ಪಾತ್ರದಲ್ಲೂ ಉಮ ಸೈ ಎನಿಸಿಕೊಂಡಿದ್ದಳು.

1998 ರಲ್ಲಿ ನಟ ಎಥಾನ್ ಹಾಕ್ ಜೊತೆ ವಿವಾಹವಾಗಿ, ಸವಿಜೀವನ ನಡೆಸಿದ ಥರ್ಮನ್ ಐದನೇ ವಿವಾಹ ವಾರ್ಷಿಕೋತ್ಸವದಂದು ಗಂಡನಿಗೆ "ಜಾಬೆ, ಜಾ.... ಜಾ" ಎಂದು ಬೈ ಹೇಳುವ ಹೊತ್ತಿಗೆ ಒಂದಿಷ್ಟು ನೋವುಂಡಿದ್ದಳು.

ಈಗ ಮೂರು ವರ್ಷ ಅಜ್ಞಾತವಾಸ ಮುಗಿಸಿ 'ಪ್ರೈಮ್' ತಯಾರಿಸುತ್ತಿದ್ದಾಳೆ. ಗ್ಲಾಮರಸ್ ವಿಚ್ಛೇದಿತೆಯೊಬ್ಬಳು ತನಗಿಂತ 15 ವರ್ಷ ಕಿರಿಯ ಕಲಾವಿದ (ಬ್ರ್ಯಾನ್ ಗ್ರೀನ್‌ಬರ್ಗ್)ನನ್ನು ಪ್ರೀತಿಸುವ, ಸೇರುವ, ಸುಖಿಸುವ ಪಾತ್ರದಲ್ಲಿ ಈ ಮಧ್ಯಮ ವಯಸ್ಸಿನ ಚೆಲುವೆ ನಟಿಸುತ್ತಿದ್ದಾಳೆ.

'ಇದು ನಿನ್ನ ನಿಜ ಜೀವನದ ಕತೆಯಾ?' ಎಂದರೆ, 'ಒಂದಿಷ್ಟು ಸಾಮ್ಯತೆಗಳಿರಬಹುದು' ಎನ್ನುತ್ತಾಳೆ. 'ನನಗೆ ಗೊತ್ತು-ಇದು 10 ವರ್ಷಗಳ ನಂತರ ಎಚ್ಚರಗೊಂಡಂತೆ... ಮತ್ತೆ ಏಕಾಂಗಿಯಂತೆ... ಹಾಗೂ ಮತ್ತೆ ಒಬ್ಬಂಟಿಯಂತೆ...' ಎಂದು ಅಷ್ಟಗಲ ಕಣ್ಣರಳಿಸಿ ನಗುತ್ತಾಳೆ.

ಚೆಲುವೆಯ ಅಂದದ ಮೊಗಕೆ ಕಣ್ಣೇ ಭೂಷಣ....



ರಮ್ಯಳ ಅರ್ಧಸತ್ಯ!



'ಅಮೃತಧಾರೆ' ಚಿತ್ರ ತೆಲುಗಿನಲ್ಲಿ ಪುನರ್ ನಿರ್ಮಾಣ ಆಗುತ್ತಿದೆಯೇ? ಎಂಬ ಪ್ರಶ್ನೆಗೆ "ಹೌದು ಮತ್ತು ಇಲ್ಲ" ಎಂಬ ನಿಗೂಢ ಉತ್ತರ ಬರುತ್ತದೆ ಅದರ ನಾಯಕಿ ರಮ್ಯಳಿಂದ.

ಅಲ್ಲ, ಆ ಚಿತ್ರದಲ್ಲೂ ನೀವು ಮತ್ತು ಧ್ಯಾನ್ ನಟಿಸುತ್ತಿದ್ದೀರಾ? ಎಂಬ ಪ್ರಶ್ನೆಗೂ "ನಾನು ನಿಮಗೆ ಸತ್ಯ ಹೇಳಲೋ ಅಥವಾ ಸುಳ್ಳು ಹೇಳಲೋ" ಎಂಬ ಒಗಟಿನಂತಹ ಉತ್ತರ ಬರುತ್ತದೆ ಆಕೆಯಿಂದ.

ಈ ತರಹ ರಮ್ಯ 'ಅರ್ಧ ಸತ್ಯ ಅರ್ಧ ಮೌನ' ಆಟವಾಡಲು ಕಾರಣವಿದೆ. ಅದೇನೆಂದರೆ, 'ಅಮೃತಧಾರೆ' ಚಿತ್ರ ತೆಲುಗಿಗೆ ಸಂಪೂರ್ಣವಾಗಿ ರೀಮೇಕೂ ಆಗುತ್ತಿಲ್ಲ, ಹಾಗೆಯೇ ಸಂಪೂರ್ಣವಾಗಿ ಡಬ್ ಕೂಡ ಆಗುತ್ತಿಲ್ಲ. ಬದಲಾಗಿ, ರಮ್ಯ ಮತ್ತು ಧ್ಯಾನ್ ಹಲವು ದೃಶ್ಯಗಳಲ್ಲಿ ಮತ್ತೆ ನಟಿಸುತ್ತಿದ್ದರೆ, ತೆಲುಗು ಚಿತ್ರರಂಗದ ಹಾಸ್ಯ ನಟರು ಇರುವ ಹಲವು ದೃಶ್ಯಗಳನ್ನು ಚಿತ್ರೀಕರಿಸುತ್ತಿದ್ದಾರಂತೆ. ಅಂದರೆ, ಚಿತ್ರದ ಉಳಿದ ಭಾಗಗಳನ್ನು ಹಾಗೆ ಇಟ್ಟುಕೊಂಡು ಹೊಸದಾಗಿ ತೆಗೆದಿರುವ ದೃಶ್ಯಗಳನ್ನು ಅದಕ್ಕೆ ಜೋಡಿಸಲಿದ್ದಾರೆ. ಅಂದರೆ, ನಾಲ್ಕೈದು ದಿನಗಳಲ್ಲಿ 'ಅಮೃತಧಾರೆ'ಎಂಬ ಹೊಸ ತೆಲುಗು ಸಿನಿಮಾ ರೆಡಿ!

ಈ ತರಹ ಅದೆಷ್ಟೋ ಚಿತ್ರಗಳು ಸೆಟ್ಟೇರಿದ ಹಲವೇ ದಿನಗಳಲ್ಲಿ ಪೂರ್ಣಗೊಳ್ಳುತ್ತವೆ. ಸಿನಿಮಾ ಎಂಬ ಮಾಯಾಲೋಕದ ಹಲವಾರು ಚಮತ್ಕಾರಗಳಲ್ಲಿ ಇದೂ ಒಂದು. ಆದರೆ ಇಂತಹ ಗುಟ್ಟುಗಳನ್ನು ರಮ್ಯಳಂತೆ ಬಿಚ್ಚಿಯಾಗಿ ಯಾರೂ ಬಹಿರಂಗಗೊಳಿಸುವುದಿಲ್ಲ, ಅಷ್ಟೆ!

ರಾಜ್ ತಿಥಿಯೂ, ಚಿತ್ರರಂಗದ ತಿಥಿಯೂ...!



"ಮುಂದಿನ ವಾರದಿಂದ ತೆರೆ ಕಾಣಲಿರುವ ಚಿತ್ರಗಳೆಲ್ಲಾ ಹಿಟ್ ಆಗಲಿವೆ." ಇಂತಹದ್ದೊಂದು ಮಾತು ಕಳೆದ ಎರಡು ದಿನಗಳಿಂದ ಗಾಂಧಿನಗರದಲ್ಲಿ ಕೇಳಿಬರುತ್ತಿದೆ.

ಇದಕ್ಕೆ ಕಾರಣವೇನು ಗೊತ್ತಾ....? ಅಣ್ಣಾವ್ರ ತಿಥಿ ಮುಗಿಯುವ ಮುನ್ನ ಅವಸರವಾಗಿ ಬಿಡುಗಡೆಯಾದ ಚಿತ್ರಗಳೆಲ್ಲ ಬಾಕ್ಸ್ ಆಫೀಸಿನಲ್ಲಿ ಮುಗ್ಗರಿಸಿದ್ದು, ಈಗ ಗಾಜನೂರಿನಲ್ಲಿ 12 ನೇ ತಾರಿಖು ತಿಥಿ ಮುಗಿದಿದ್ದರಿಂದ ಇನ್ನು ಮುಂದೆ ಬಿಡುಗಡೆಯಾಗಲಿರುವ ಸಿನಿಮಾಗಳು ಯಶಸ್ವಿ ಆಗಲಿವೆ ಎಂಬ ಮೂಢ ನಂಬಿಕೆ.

ವಿಪರ್ಯಾಸವೇನೆಂದರೆ, ಮೊದಲೇ ಇಂತಹ ಮೂಢ ನಂಬಿಕೆಗಳಲ್ಲಿ ಮುಳುಗಿ ಹೋಗಿರುವ ಗಾಂಧಿನಗರದ ಜನರಲ್ಲಿ ಈ ಭಾವನೆ ಹೆಚ್ಚಿಸುವಂತಹ ವಾತಾವರಣ ಈಗ ಸೃಷ್ಟಿಯಾಗಿರುವುದು. ಉದಾಹರಣೆಗೆ 'ಸೇವಂತಿ ಸೇವಂತಿ' ಚಿತ್ರ ಸೂಪರ್ ಹಿಟ್ ಆಗುತ್ತದೆ ಎಂದು ಗಾಂಧಿನಗರದ ಪಂಡಿತರು ಹೇಳಿದ್ದರು. ಆದರೆ ಈ ಚಿತ್ರ ಒಂದೇ ವಾರಕ್ಕೆ 'ಹಿಟ್' ಆಗುವ ಬದಲಾಗಿ 'ಹಿಟ್ಟು' ಆಯಿತು. ಹಾಗೆಯೇ ಪುನೀತ್‌ರಾಜ್‌ಕುಮಾರ್ ನಟಿಸಿದ 'ಅಜಯ್' ಚಿತ್ರದ ಬಗ್ಗೆಯೂ ದೊಡ್ಡ ನಿರೀಕ್ಷೆ ಇತ್ತು. ಈ ಚಿತ್ರಕ್ಕೆ ಉತ್ತಮ ಓಪನಿಂಗ್ ಸಿಕ್ಕರೂ, ಆನಂತರ 'ಠುಸ್' ಆಯಿತು. ಹ್ಯಾಟ್ರಿಕ್ ಹೀರೋಯಿನ್ ಎಂದೇ ಬ್ರ್ಯಾಂಡ್ ಆಗಿರುವ ರಮ್ಯ ನಟಿಸಿದ 'ಜೂಲಿ' ಕೂಡ ಆರಂಭದಲ್ಲೇ ಕುಂಟುತ್ತಿದೆ. ಈ ಮಧ್ಯೆ ಜಯಮಾಲಾ ನಿರ್ಮಾಣದ, ಪಿ. ಶೇಷಾದ್ರಿ ನಿರ್ದೇಶನದ 'ತುತ್ತೂರಿ' ಎಂಬ ಮಕ್ಕಳ ಚಿತ್ರ ಕೂಡ ಬಾಕ್ಸ್ ಆಫೀಸಿನಲ್ಲಿ ಸೋಲುವ ಲಕ್ಷಣಗಳು ಕಂಡುಬರುತ್ತಿವೆ. ಇನ್ನು 'ಬೆಳ್ಳಿಬೆಟ್ಟ' ಎಂಬ ಚಿತ್ರವೂ ಮೊದಲ ದಿನವೇ ಮುಗ್ಗರಿಸಿದೆ.

ಆದಿತ್ಯ ನಟಿಸಿದ 'ಅಂಬಿ' ಮತ್ತು ಕಾಮಿಡಿ ಗಣೇಶ್ ನಟಿಸಿದ 'ಚೆಲ್ಲಾಟ' ಚಿತ್ರಗಳ ಬಗ್ಗೆಯೂ ಗಾಂಧಿನಗರದಲ್ಲಿ ಒಳ್ಳೆಯ ಟೀಕ್ ಇತ್ತು. "ಇವೆರಡು ಚಿತ್ರಗಳು ಯಾವುದೇ ಕಾರಣಕ್ಕೆ ಮುಗ್ಗರಿಸಲು ಸಾಧ್ಯವೇ ಇಲ್ಲ" ಎಂಬುದು ಗಾಂಧಿನಗರದ ಚಿತ್ರ ಬ್ರಹ್ಮರ ಲೆಕ್ಕಾಚಾರವಾಗಿತ್ತು. ಆದರೆ ಈ ಚಿತ್ರಗಳು ಮುಗ್ಗರಿಸಿದಾಗ ಗಾಂಧಿನಗರದವರಿಗೆ ನೆನಪಾಗಿದ್ದೇ ರಾಜ್‌ಕುಮಾರ್ ನಿಧನ ಮತ್ತು ಅವರ ತಿಥಿ. ಈಗ ಅದನ್ನೇ ನೆಪವಾಗಿಟ್ಟುಕೊಂಡು ಈ ಚಿತ್ರಗಳ ಸೋಲನ್ನು ವಿಶ್ಲೇಷಿಸುತ್ತಾ ಮೂಢ ನಂಬಿಕೆಯಲ್ಲಿ ಹೂತು ಹೋಗಿದ್ದಾರೆ.

ಇವರಿಗೆಲ್ಲ ಬುದ್ಧಿ ಬರುವುದು ಎಂದು?



ಸುವರ್ಣ ಸಂಭ್ರಮ

ವಿಜಯಲಕ್ಷ್ಮಿ ಮತ್ತು ಅನುಪ್ರಭಾಕರ್ ಎಂಬ ಮಾಜಿ ನಾಯಕಿಯರಿಬ್ಬರು ಹೊಸ ಅವತಾರದಲ್ಲಿ ಪರಸ್ಪರ ಪೈಪೋಟಿಗೆ ಇಳಿದಿದ್ದಾರೆ.

ವಿಜಯಲಕ್ಷ್ಮಿ ಈಗಾಗಲೇ ಉದಯ ಟೀವಿಯಲ್ಲಿ ನಡೆಸಿಕೊಡುತ್ತಿರುವ ಬಂಗಾರದ ಬೇಟೆ ಕಾರ್ಯಕ್ರಮಕ್ಕೆ ನೇರ ಸವಾಲು ಎಂಬಂತೆ ಅನುಪ್ರಭಾಕರ್ ಹೊಸತಾಗಿ ಆರಂಭಗೊಂಡಿರುವ ಝೀ ಕನ್ನಡ ಚಾನೆಲ್‌ನಲ್ಲಿ ಬಂಗಾರದ ಬಾಳು ಎಂಬ ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ.



ಅಂತೂ ಸಿನಿಮಾದಲ್ಲಿ ಒಂದೇ ಕಾಲದಲ್ಲಿ ಹೆಸರು ಗಳಿಸಿದ್ದ ಇವರಿಬ್ಬರೂ ಈಗ ಕಿರುತೆರೆಯಲ್ಲೂ ಪೈಪೋಟಿ ನಡೆಸುತ್ತಿರುವುದು ಕುತೂಹಲಕಾರಿಯಾಗಿದೆ.

ವಿಶೇಷವೆಂದರೆ, ಇವರಿಬ್ಬರೂ ನಾಯಕಿಯರಾಗಿದ್ದಾಗ ಪಡೆಯುತ್ತಿದ್ದ ಸಂಭಾವನೆಯ ಎರಡು ಪಟ್ಟು ಹೆಚ್ಚು ಹಣವನ್ನು ಕಿರುತೆರೆಯಲ್ಲಿ ಪಡೆಯುತ್ತಿದ್ದಾರಂತೆ. ಹೀಗಾಗಿ ಒಂದು ವೇಳೆ ಇವರಿಬ್ಬರ ಕಾರ್ಯಕ್ರಮ ಸೋತರೂ, ಅವರು ಮಾತ್ರ ಗೆದ್ದಂತೆ!



ಸಾಧ್ಯವಾಗದ 'ಬಂಧನ'!

ವಿಷ್ಣು-ಸುಹಾಸಿನಿ ಜೋಡಿ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾತಾಡ್ ಮಾತಾಡ್ ಮಲ್ಲಿಗೆ' ಚಿತ್ರದಲ್ಲಿ ಮತ್ತೆ ಬೆಳ್ಳಿಪರದೆಯ ಮೇಲೆ ಮೂಡಿ ಬರಲಿದೆ ಎಂದು ಇತ್ತೀಚೆಗೆ ಭಾರೀ ಸುದ್ದಿ ಆಗಿತ್ತು. ಆದರೆ ನಮಗೆ ಬಂದಿರುವ ಸುದ್ದಿ ಪ್ರಕಾರ ಹಲವು ಕಾರಣಗಳಿಂದಾಗಿ ಈ ಹೊಸ 'ಬಂಧನ' ಸಾಧ್ಯವಾಗುತ್ತಿಲ್ಲವಂತೆ.



ಇತ್ತೀಚೆಗೆ ಸುಹಾಸಿನಿ ಅವರ ತಂದೆ ಚಾರುಹಾಸನ್‌ರವರ ಆರೋಗ್ಯ ಕೆಟ್ಟು ಹೋಗಿರುವುದರಿಂದ ಆಕೆ ಚಿತ್ರೀಕರಣದಲ್ಲಿ ಭಾಗವಹಿಸಲಾಗುವುದಿಲ್ಲ ಎಂದು ಹೇಳಿದ್ದಾರಂತೆ. ಹೀಗಾಗಿ ಈಗ ನಾಗ್ತಿ ಹೊಸ ನಾಯಕಿಗಾಗಿ ಹುಡುಕಬೇಕು ಅಥವಾ ಸುಹಾಸಿನಿಯಿಂದ ಹೊಸ ಕಾಲ್‌ಶೀಟ್‌ಗಾಗಿ ಕಾಯಬೇಕು. ಯಾವುದನ್ನು ಆಯ್ಕೆ ಮಾಡುತ್ತಾರೆ ಎಂಬುದರ ಬಗ್ಗೆ ನಾಗ್ತಿ ಮಾತ್ರ 'ಮಾತಾಡ್'ತಿಲ್ಲ... ಮಲ್ಲಿಗೆಯೂ ಇಲ್ಲ.... ಸುವಾಸನೆಯೂ ಇಲ್ಲ....

ಡಬ್ಬದಿಂದ ಹೊರಬೀಳುತಿದೆ ತಾಳ-ಮೇಳ!



ಹನ್ನೆರಡು ವರ್ಷಗಳ ಹಿಂದೆ ಚಿತ್ರವೊಂದು ಸೆಟ್ ಏರಿತು. ಅದರ ಹೆಸರು 'ಗಟ್ಟಿ ತಾಳ ಬಿಟ್ಟಿ ಮೇಳ'. ಸುರ ಸುಂದರಾಂಗ ಕಾಶೀನಾಥ್ ಈ ಚಿತ್ರದ ನಾಯಕ.

ಯಾವುದೋ ಕಾರಣಕ್ಕೆ ಚಿತ್ರ ನಿರ್ಮಾಣದಲ್ಲಿ ಸ್ವಲ್ಪ ಏರುಪೇರಾಯಿತು. ಚಿತ್ರ ಮಧ್ಯಕ್ಕೆ ನಿಂತಿತು. ಈಗ ಎಲ್ಲವೂ ಸುಸೂತ್ರವಾಗಿ ಸಾಗಿದಲ್ಲಿ 'ಗಟ್ಟಿ ತಾಳ' ಮುಂದಿನ ತಿಂಗಳು ಬಿಡುಗಡೆಯಾಗಲಿದೆ. ಮೊನ್ನೆ ಪತ್ರಕರ್ತರಿಗೆ ಈ ಚಿತ್ರದ ಹಾಡುಗಳನ್ನು ತೋರಿಸಲಾಯಿತು. ಹೀಗಾಗಿ ಚಿತ್ರ ಬಿಡುಗಡೆಯಾಗುವುದು ಗ್ಯಾರಂಟಿ ಅನಿಸುತ್ತಿದೆ.

ರಾಮಾಯಣದಲ್ಲಿ ಸೀತೆ ಹದಿನಾಲ್ಕು ವರ್ಷಗಳ ವನವಾಸದ ನಂತರ ಹೊರಬಂದಿದ್ದರೆ, ಕಾಶೀನಾಥ್ ಈ ಚಿತ್ರ 12 ವರ್ಷಗಳ ಕಾಲ ಡಬ್ಬಾದಲ್ಲೇ ಕಳೆದು ಈಗ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಿದೆ. ಈ ಚಿತ್ರ ಒಂದು ಕುತೂಹಲಕಾರಿ ಅಂಶ ಯಾವುದೆಂದರೆ, ಅಂದು ಕಾಶೀನಾಥ್ ಎಷ್ಟು 'ಸುಂದರ'ವಾಗಿದ್ದರೋ ಅದೇ ಸೌಂದರ್ಯ, ಮೈಕಟ್ಟನ್ನು ಈಗಲೂ ಉಳಿಸಿಕೊಂಡಿದ್ದಾರೆ!

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 2667642 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44